ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 5

ಜ. 26–ಫೆ 1, 1998
ರೂ. 2.00



ಬೃಹತ್ ರ್‍ಯಾಲಿಯೊಂದಿಗೆ ಸಂಯುಕ್ತ ರಂಗದ ಚುನಾವಣಾ ಸಮರ ಆರಂಭ

"ಮೌಲ್ಯಾಧಾರಿತ ರಾಜಕೀಯ" ದಿಂದ ಸಂದರ್ಭವಾದಿ ಭ್ರಷ್ಟ, ಕಲುಷಿತ ಪ್ರಜಾಪ್ರಭುತ್ವ - ವಿರೋಧಿ ರಾಜಕೀಯದವರೆಗೆ - ಇದೆಂತಾ ಪತನ?

ಪಿ.ರಾಮಚಂದ್ರರಾವ್

ಒಂದು ಕಾಲದಲ್ಲಿ (1983 ರಿಂದ) ಕರ್ನಾಟಕ ರಾಜ್ಯದಲ್ಲಿ 'ಮೌಲ್ಯಾಧಾರಿತ ರಾಜಕೀಯ' ವನ್ನು ಪ್ರತಿನಿಧಿಸುತ್ತಾ ಬಂದ ಶ್ರೀ ರಾಮಕೃಷ್ಣ ಹೆಗ್ಡೆಯವರು ಅವರ ನಿಕಟ ಶಿಷ್ಯರೂ(ದೇಶಪಾಂಡೆ, ಜಿಗಜಿಣಗಿ ಇತ್ಯಾದಿ) ಈಗ ಕೋಮುವಾದಿ ಪಕ್ಷ ಬಿಜೆಪಿಗೆ ಒಂದೆಡೆ ಬೆಂಬಲ ಕೊಡಲು ತೀರ್ಮಾನ ಮಾಡಿದ್ದಾರೆ. ಇನ್ನೊಂದೆಡೆ ಕಳೆದ ಎರಡೂವರೆ ವರ್ಷಗಳಲ್ಲಿ ಜನತಾದಳದ ದೇವೇಗೌಡರ ಮತ್ತು ಜೆ.ಎಚ್.ಪಟೇಲರ ಸರಕಾರದಲ್ಲಿ ಪ್ರಮುಖ ಖಾತೆಗಳ ಮಂತ್ರಿಗಳಾಗಿ ಎಲ್ಲಾ ಅನುಕೂಲತೆಗಳನ್ನು ಪಡೆಯುತ್ತಾ ಬಂದು ಇದೀಗ ಜನತಾದಳಕ್ಕೆ ರಾಜೀನಾಮೆ ಕೊಡದೆ ನವ ನಿರ್ಮಾಣ ವೇದಿಕೆಯ ಸದಸ್ಯರಾಗಿ, ಲೋಕಶಕ್ತಿ-ಬಿಜೆಪಿಗೆ ಚುನಾವಣೆಯಲ್ಲಿ ಪ್ರಚಾರ ಮಾಡಲು ಮುಂದಾಗಿದ್ದಾರೆ.

ಇದು ಮೌಲ್ಯಾಧಾರಿತ ರಾಜಕಾರಣದ 'ಪತನ' ಮಾತ್ರವಲ್ಲ ಹೊಸ ಸಂದರ್ಭವಾದಿ ಭ್ರಷ್ಟ ಕಲುಷಿತ ಪ್ರಜಾಪ್ರಭುತ್ವ ವಿರೋಧಿ ರಾಜಕೀಯ ನಿಲುಮೆಯಾಗಿದೆ. ಹಾಗೂ ಕರ್ನಾಟಕ ರಾಜಕೀಯವನ್ನು ಇನ್ನೂ ಕಲುಷಿತಗೊಳಿಸುವ ನಿಲುಮೆಯಾಗಿದೆ.

ಇಂತಹ ತತ್ವಭ್ರಷ್ಟ ರಾಜಕೀಯ ನಿಲುಮೆಗಳು ಎಂದಿಗೂ ಎಂತಹ ಸಂದರ್ಭದಲ್ಲೂ ಜನಸಾಮಾನ್ಯರ ಹಿತಗಳನ್ನು ರಕ್ಷಿಸಲಾರವು.

ಕಳೆದ 45 ವರ್ಷಗಳಿಂದ ದೇಶದಲ್ಲಿ ಅಧಿಕಾರ ನಡೆಸುತ್ತಾ ದೇಶದ ಗುತ್ತೇದಾರಿ ಬಂಡವಾಳಶಾಹಿಗಳ ಮತ್ತು ದೊಡ್ಡ ಭೂಮಾಲಕರ ಹಿತಗಳನ್ನು ರಕ್ಷಿಸುತ್ತಾ ಬಂದ, 1991 ರ ನಂತರ ನೇರವಾಗಿ ದೇಶದ ಆರ್ಥಿಕ ಹಿತಗಳನ್ನು ಬಹುರಾಷ್ಟ್ರೀಯ ಬಂಡವಾಳಗಾರರಿಗೆ ಅಡವಿರಿಸುತ್ತಾ ಬಂದ ಕಾಂಗ್ರೆಸ್ (ಐ) ಇಂದು ದೇಶದಲ್ಲಿ ಅವನತಿ ಹೊಂದುತ್ತಾ ಬಂದಿದೆ. ಅದು 1996 ರ ಲೋಕಸಭಾ ಚುನಾವಣೆಗಳಲ್ಲಿ ತೀವ್ರ ಸೋಲಿಗೆ ತುತ್ತಾಗಿತ್ತು. ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಪಕ್ಷವು ಇನ್ನೂ ಹೆಚ್ಚಿನ ಸೋಲಿಗೆ ತುತ್ತಾಗುವುದರಲ್ಲಿ ಏನೇನೂ ಸಂಶಯವಿಲ್ಲದಿರುವಾಗ, ದೇಶದ ಗುತ್ತೇದಾರಿ ಬಂಡವಾಳಶಾಹಿಗಳು, ದೊಡ್ಡ ಭೂಮಾಲಕರು ಮತ್ತು ಬಹು ರಾಷ್ಟ್ರೀಯ ಕಂಪನಿಗಳು ಕಾಂಗ್ರೆಸ್(ಐ) ಸ್ಥಾನದಲ್ಲಿ ಬಿಜೆಪಿ ಪಕ್ಷವನ್ನು 'ತಮ್ಮ ಹಿತಗಳನ್ನು ರಕ್ಷಿಸುವ ಪಕ್ಷ" ವಾಗಿ ಜನತೆಯ ಮುಂದೆ ನಿಲ್ಲಿಸುತ್ತಿವೆ. ಎಲ್ಲಾ ರೀತಿಯಲ್ಲಿ ಪ್ರಚಾರ ಕೊಡುತ್ತಿವೆ ಮತ್ತು ಎಲ್ಲಾ ಹಣವನ್ನು ಬಿಜೆಪಿಯ ಬೊಕ್ಕಸಕ್ಕೆ ಸುರಿಯುತ್ತಿವೆ.

ಈ ಹಂಚಿಕೆಯ ಫಲವಾಗಿಯೇ ಶ್ರೀ ರಾಮಕೃಷ್ಣ ಹೆಗ್ಡೆಯವರೂ, ಅವರ ನಿಕಟ ಶಿಷ್ಯರೂ ಇಂದು ಕರ್ನಾಟಕ ರಾಜ್ಯದಲ್ಲಿ ಈ ತರದ ಭ್ರಷ್ಟ, ಸಂದರ್ಭವಾದೀ ಕೋಮುವಾದಿ ನಿಲುಮೆಗಳನ್ನು ತೆಗೆದುಕೊಳ್ಳಲು ಕಾರಣ - ಬೇರೆಯಾವ ಕಾರಣವೂ ಇಲ್ಲ.

ಇಂತಹ ವೇಳೆಯಲ್ಲಿ ರಾಜ್ಯದಲ್ಲಿ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತತ್ವಬದ್ಧವಾದ ಎಡ, ಜಾತ್ಯಾತೀತ ಮತು ಪ್ರಜಾಪ್ರಭುತ್ವ ರಾಜಕೀಯ ನಿಲುಮೆಗಳನ್ನು ದೃಢವಾಗಿ ಪ್ರಚಾರ ಮಾಡಬೇಕಾಗಿದೆ. ಬಿಜೆಪಿಯಂತಹ ಕೋಮುವಾದಿ ಪಕ್ಷವನ್ನು ಅದರ ನೀತಿಗಳು ದೇಶದ ಬೆಳವಣಿಗೆಗೆ ಹಾಗೂ ಬಹುಭಾಗದ ಜನಸಾಮಾನ್ಯರ ಹಿತಗಳಿಗೆ ವೈರಿ ಎಂದು ಪ್ರಚಾರ ಮಾಡಬೇಕಾಗಿದೆ.

ರಾಜ್ಯದ ಅಲ್ಪಸಂಖ್ಯಾತರಲ್ಲಿ ಅಭದ್ರತೆಯನ್ನು ಹುಟ್ಟಿಸುತ್ತಾ ಬರುತ್ತಿರುವ, ದಲಿತರ ಮತ್ತು ಹಿಂದುಳಿದವರ ನಿಜವಾದ ಪ್ರಜಾಸತ್ತಾತ್ಮಕ ಆಸೆ-ಆಕಾಂಕ್ಷೆಗಳಿಗೆಲ್ಲಾ ಕೊಡಲಿ ಏಟು ಇಡುವ 'ಮೇಲ್ಜಾತಿ ರಾಜಕೀಯ ಷಡ್ಯಂತ್ರ'ವನ್ನು ಆಡುತ್ತಾ ಬರುತ್ತಿರುವ ಬಿಜೆಪಿ ಮತ್ತು ಅದರ ಅನುಯಾಯಿಗಳನ್ನು ಸೋಲಿಸಲು ರಾಜ್ಯದ ಜನತೆಯನ್ನು ಸಂಘಟಿಸಬೇಕಾಗಿದೆ.

ಒಂದೆಡೆ ಸ್ವತಂತ್ರವಾಗಿ ಎರಡು ಸೀಟುಗಳಲ್ಲಿ ಸ್ಪರ್ಧಿಸಿ ರಾಜ್ಯ ಮತ್ತು ದೇಶದಲ್ಲಿ ಸಂಯುಕ್ತ ರಂಗದ ರಾಜಕೀಯವನ್ನು ಗಟ್ಟಿಗೊಳಿಸುವಾಗಲೇ ರಾಜ್ಯದಲ್ಲಿ ಹಾಗೂ ದೇಶದಲ್ಲಿ ಜನಸಾಮಾನ್ಯರ ಹಿತಗಳಿಗೂ, ದೇಶದ ಹಿತಗಳಿಗೂ ಸವಾಲಾಗಿ ಬರುತ್ತಿರುವ ಕೋಮುವಾದಿ ಶಕ್ತಿಗಳನ್ನು ಮಟ್ಟ ಹಾಕಲು ಮುಂದಾಗಬೇಕಿದೆ.

ಈ ದಿಸೆಯಲ್ಲಿ ರಾಜ್ಯದ ಕಾರ್ಮಿಕರನ್ನೂ, ಕೃಷಿ ಕೂಲಿಕಾರರನ್ನೂ, ರೈತರನ್ನೂ, ಯುವಕರನ್ನೂ, ವಿದ್ಯಾರ್ಥಿಗಳನ್ನೂ, ಮಹಿಳೆಯರನ್ನೂ ಅತ್ಯಂತ ವಿಶಾಲರೀತಿಯಲ್ಲಿ ರಾಜಕೀಯದಲ್ಲಿ ಧುಮುಕಿ ದುಡಿಯುವಂತೆ ಮಾಡಲು ಎಲ್ಲಾ ಕ್ರಮಗಳನ್ನೂ ವಹಿಸುವಂತೆ ಪಕ್ಷದ ಹಾಗೂ ಸಾಮೂಹಿಕ ಸಂಘಟನೆಗಳು ಮುಂದಾಗಬೇಕಿದೆ.

ಮೊಳಗಿತು ಕೋಮುವಾದ ಮತ್ತು ಅದರೊಡನೆ ರಾಜಿಯ ವಿರುದ್ಧ ರಣಕಹಳೆ

ಜನತೆಯ ಏಕತೆಯ ಶತ್ರುಗಳಾದ, ದೇಶದ ಸಮಗ್ರತೆಯ ವೈರಿಗಳಾದ ಕೋಮುವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳನ್ನು ಸೋಲಿಸಿರಿ...

ಇದು ಆಂಧ್ರಪ್ರದೇಶ ರಾಜಧಾನಿ ಹೈದರಾಬಾದಿನಲ್ಲಿ ಜನವರಿ 19 ರಂದು ಭಾರೀ ಜನಸ್ತೋಮದ ರ್‍ಯಾಲಿಯಲ್ಲಿ ಮೊಳಗಿದ ರಣಕಹಳೆ. ಕಳೆದೆರಡು ವರ್ಷಗಳಿಂದ ಕೋಮುವಾದಿ ಶಕ್ತಿಗಳು ಕೇಂದ್ರದಲ್ಲಿ ಅಧಿಕಾರ ನಡೆಸದಂತೆ ಯಶಸ್ವಿಯಾದ ಸಂಯುಕ್ತ ರಂಗದ ಚುನಾವಣಾ ಸಮರ ಈ ಬೃಹತ್ ರ್‍ಯಾಲಿಯೊಂದಿಗೆ ಆರಂಭ...

ಕಾಂಗ್ರೆಸ್ ಮತ್ತು ಕೋಮುವಾದಿ ಬಿಜೆಪಿಗೆ ಸಮರ್ಥ ಪರ್ಯಾಯವನ್ನು ತೋರಿದ ಸಂಯುಕ್ತ ರಂಗಕ್ಕೆ ದೇಶದಲ್ಲಿರುವ ಜನತೆಯಿಂದ ಬೆಂಬಲದ ಸಂಕೇತದಂತಿತ್ತು ಈ ರ್‍ಯಾಲಿ. ಪಾಲ್ಗೊಂಡಿದ್ದ ಜನಸ್ತೋಮವಷ್ಟೇ ಅಲ್ಲ, ರ್‍ಯಾಲಿಯಲ್ಲಿ ಮಾತನಾಡಿದ ನಾಯಕರನ್ನೂ ಗಮನಿಸಿದಾಗಲೂ ಇದು ಸುಸ್ಪಷ್ಟವಾಗುತ್ತದೆ.

ಪ್ರಧಾನಿ ಇಂದ್ರಕುಮಾರ್ ಗುಜ್ರಾಲ್ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಎಡ ಆಂದೋಲನದ ಕಾವಲು ಬುರುಜು ಎಂದೇ ಪ್ರಸಿದ್ಧವಾದ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಜ್ಯೋತಿಬಸು, ಆಂಧ್ರಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಕರ್ನಾಟಕ ಮುಖ್ಯಮಂತ್ರಿ ಜೆ.ಎಚ್.ಪಟೇಲ್, ಅಸ್ಸಾಂ ಮುಖ್ಯಮಂತ್ರಿ ಪ್ರಫುಲ್ಲಕುಮಾರ್ ಮಹಂತ, ಜಮ್ಮು ಮತ್ತು ಕಾಶ್ಮೀರ ಮುಖ್ಯ ಮಂತ್ರಿ ಡಾ. ಫರೂಕ್ ಅಬ್ದುಲ್ಲಾ, ತಮಿಳುನಾಡಿನ ಎಂ.ಕರುಣಾನಿಧಿ..... ಹೀಗೆ ಈ ಪಟ್ಟಿ ಬಹುದೊಡ್ಡದು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್, ಸಿಪಿಐ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್, ಜನತಾದಳ ಅಧ್ಯಕ್ಷ ಶರದ್ ಯಾದವ್, ರೈಲ್ವೆ ಮಂತ್ರಿ ರಾಮ್‌ವಿಲಾಸ್ ಪಾಸ್ವಾನ್ ಮುಂತಾದ ಮುಖಂಡರೂ ಪಾಲ್ಗೊಂಡಿದ್ದರು.

ಕಳಕಳಿಯ ಮನವಿ

ಕೋಮುವಾದಿ ಬಿಜೆಪಿ ಮತ್ತು ಭ್ರಷ್ಟ ಕಾಂಗ್ರೆಸ್‌ಗಳ ಮೇಲೆ ರ್‍ಯಾಲಿ ತೀಕ್ಷ್ಣವಾಗ್ದಾಳಿ ನಡೆಸಿತು. ಪ್ರಖ್ಯಾತ ನಿಜಾಮ್ ಕಾಲೇಜ್ ಮೈದಾನದಲ್ಲಿ ನಡೆದ ಬೃಹತ್ ಬಹಿರಂಗ ಸಭೆ ಸ್ವಚ್ಛ, ಪ್ರಗತಿ ಶೀಲ ಹಾಗೂ ಜಾತ್ಯಾತೀತ ಸರಕಾರಕ್ಕಾಗಿ ಸಂಯುಕ್ತ ರಂಗವನ್ನು ಮತ್ತೆ ಅಧಿಕಾರಕ್ಕೆ ತರಬೇಕೆಂದು ಮತದಾರರಲ್ಲಿ ಕಳಕಳಿಯ ಮನವಿ ಮಾಡಿತು.

ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಮುಖಂಡರು ಧರ್ಮದ ಹೆಸರಿನಲ್ಲಿ ದೇಶವನ್ನು ಅಸ್ಥಿರಗೊಳಿಸುವ ವಿಭಜಕ ಹಾಗೂ ಅಪಾಯಕಾರಿ ತಂತ್ರಗಳಿಗಾಗಿ ಭಾರತೀಯ ಜನತಾ ಪಕ್ಷ ಮತ್ತು ಸೋನಿಯಾಗಾಂಧಿಯವರನ್ನು ತರಾಟೆಗೆ ತೆಗೆದುಕೊಂಡರು.

ತನ್ನ ಎಲ್ಲಾ ತತ್ವಾದರ್ಶಗಳನ್ನು ಗಾಳಿಗೆ ತೂರಿ ಅನೇಕ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡು ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಹಿಡಿಯಲು ಹತಾಶ ಯತ್ನಗಳನ್ನು ನಡೆಸುತ್ತಿದೆ.

ಜಾತ್ಯಾತೀತವಾದದ ಬಗ್ಗೆ ಮಾತನಾಡುವ ಕಾಂಗ್ರೆಸ್, ಬಾಬರಿ ಮಸೀದಿ ನೆಲಸಮವಾದಾಗ ಮೂಕ ಪ್ರೇಕ್ಷಕವಾಗಿದ್ದುದು ಲಜ್ಜೆಗೇಡಿ ಆ ಬಗ್ಗೆ ಸೋನಿಯಾಗಾಂಧಿ ಈಗ ಮೊಸಳೆ ಕಣ್ಣೀರು ಸುರಿಸುವುದು ಹಾಸ್ಯಾಸ್ಪದ.

ಬಾಬರಿ ಮಸೀದಿ ನೆಲಸಮಕ್ಕೆ ಬಿಜೆಪಿಯಷ್ಟೆ ಕಾಂಗ್ರೆಸ್ ಕೂಡ ಹೊಣೆ. ಕಾಂಗ್ರೆಸ್ ಜಾತ್ಯಾತೀತವಾದಕ್ಕೆ ಕಟಿಬದ್ಧ ಆಗದಿದ್ದರೆ ಯಾವ ಶಕ್ತಿಗೂ ಆಯೋಧ್ಯೆ ಕಟ್ಟಡವನ್ನು ಕೆಡವಲು ಸಾಧ್ಯವಾಗುತ್ತಿರಲಿಲ್ಲ - ಮುಂತಾಗಿ ಹಲವು ನಾಯಕರು ತಮ್ಮ ಭಾಷಣಗಳಲ್ಲಿ ಹೇಳಿದರು.

ಕೇವಲ ಅಧಿಕಾರದ ಆಸೆಗಾಗಿ ದೇಶದ ಏಕತೆ ಮತ್ತು ಸಮಗ್ರತೆಯನ್ನು ಬಲಿಕೊಡುವ ವಿಚಾರದಲ್ಲಿ ರಾಜಿ ಮಾಡಿಕೊಳ್ಳಲು ಸಂಯುಕ್ತ ರಂಗ ಸಿದ್ಧವಾಗಿರದ ಕಾರಣ ತಮ್ಮ ಸರಕಾರ ಪತನವಾಯಿತು ಎಂದು ಪ್ರಧಾನಿ ಐ.ಕೆ.ಗುಜ್ರಾಲ್ ಹೇಳಿದರು.

ಕಾಂಗ್ರೆಸ್‌ಗೆ ಕ್ಷಮೆಯಿಲ್ಲ....

ಸೋನಿಯಾಗಾಂಧಿ ಕಾಂಗ್ರೆಸ್ ಪಕ್ಷವನ್ನು ಉಳಿಸಲಾರರು. ಯಾಕೆಂದರೆ ಆ ಪಕ್ಷದ ತಪ್ಪುಗಳನ್ನು ಜನರು ಎಂದಿಗೂ ಕ್ಷಮಿಸಲಾರರು ಎಂದು ರ್‍ಯಾಲಿಯಲ್ಲಿ ಮಾತನಾಡಿದ ಸಿಪಿಐ(ಎಂ) ಪಧಾನ ಕಾರ್ಯದರ್ಶಿ ಹರಿಕಿಷನ್ ಸಿಂಗ್ ಸುರ್ಜಿತ್ ಹೇಳಿದರು. ಹಿಂದೆ ಕೇಂದ್ರ ಮತ್ತು ಬಹುತೇಕ ಎಲ್ಲಾ ರಾಜ್ಯಗಳಲ್ಲಿ ಆಡಳಿತ ನಡೆಸಿದ್ದ ಕಾಂಗ್ರೆಸ್ ಈಗ 25 ರಲ್ಲಿ ಕೇವಲ ಐದು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಅದಕ್ಕೆ ತದ್ವಿರುದ್ಧವಾಗಿ, ಕನಿಷ್ಟ 10 ರಾಜ್ಯ ಸರಕಾರಗಳಿಗಾದರೂ ಸಂಯುಕ್ತ ರಂಗದ ಬೆಂಬಲವಿದೆ ಎಂದು ಸುರ್ಜಿತ್ ನುಡಿದರು.

ಕಾಂಗ್ರೆಸ್‌ಗೆ ಪರ್ಯಾಯ ಎಂದು ಹೇಳಿಕೊಳ್ಳುವ ಬಿಜೆಪಿ ಕೂಡ ಅಪಾಯಕಾರಿಯಾದುದು. ಅದು ದೇಶದ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ತರುತ್ತದೆ ಎಂದು ಅವರು ಹೇಳಿದರು.

ಟೋಪಿವಾಲಾಗಳು, ಚಡ್ಡಿವಾಲಾಗಳು

ಜನರು ಟೋಪಿವಾಲಾಗಳಿಗೆ(ಕಾಂಗ್ರೆಸ್) ಅಥವಾ ಚಡ್ಡಿವಾಲಾಗಳಿಗೆ(ಬಿಜೆಪಿ) ಬೆಂಬಲ ನೀಡಿದರೆ ದೇಶ 50 ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ..

ಹೀಗೆಂದು ಹೇಳಿದವರು ಜನತಾದಳ ಅಧ್ಯಕ್ಷ ಶರದ್ ಯಾದವ್. ಬೋಫೋರ್ಸ್ ಬಗ್ಗೆ ಕಾಂಗ್ರೆಸ್‌ನವರು ಹೆಚ್ಚಿಗೆ ಮಾತನಾಡಿದರೆ ಅವರೇ ಜನರ ಮಧ್ಯೆ ಬೆತ್ತಲಾಗುತ್ತಾರೆ ಎಂದೂ ಯಾದವ್ ಚುಚ್ಚಿದರು.

○

ಫೆಬ್ರವರಿ 3: ಕೋಮುವಾದ, ಭ್ರಷ್ಟಾಚಾರ, ಅಪರಾಧೀಕರಣ ವಿರೋಧಿಸಿ

ದೇಶಪ್ರೇಮಿ ಯುವಜನ-ವಿದ್ಯಾರ್ಥಿ ರ್‍ಯಾಲಿ

ಕೋಮುವಾದ, ಭ್ರಷ್ಟಾಚಾರ, ರಾಜಕೀಯದಲ್ಲಿ ಅಪರಾಧೀಕರಣವನ್ನು ವಿರೋಧಿಸಿ, ರಾಷ್ಟ್ರದ ಐಕ್ಯತೆ-ಸಮಗ್ರತೆ, ಪ್ರಜಾಪ್ರಭುತ್ವೀಯ, ಫೆಡರಲ್ ವ್ಯವಸ್ಥೆ ರಕ್ಷಣೆ ಜಾತ್ಯಾತೀತ ಮೌಲ್ಯಗಳ ಉಳಿವಿಗಾಗಿ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಹೋರಾಡುವ ದೇಶಪ್ರೇಮಿ ವಿದ್ಯಾರ್ಥಿ-ಯುವಜನರ ಬೃಹತ್ ರ್‍ಯಾಲಿಯನ್ನು ಇದೇ ಫೆಬ್ರವರಿ 3 ರಂದು ಬೆಂಗಳೂರು ನಗರದಲ್ಲಿ ಸಂಘಟಿಸಲಾಗುತ್ತಿದೆ. ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.), ಕರ್ನಾಟಕ ಪ್ರದೇಶ ಯುವಜನತಾ ದಳ, ಕ. ಪ್ರದೇಶ ವಿದ್ಯಾರ್ಥಿ ಜನತಾದಳ ಸಂಘಟನೆಗಳು ಈ ರ್‍ಯಾಲಿಯನ್ನು ಸಂಘಟಿಸಲಿದ್ದು 30 ಸಾವಿರಕ್ಕೂ ಅಧಿಕ ಯುವಜನತೆ ಪಾಲ್ಗೊಂಡು ಐತಿಹಾಸಿಕವಾಗಲಿದೆ. ಬೃಹತ್ ಮೆರವಣಿಗೆ ಬೆಳಿಗ್ಗೆ 10.00 ಗಂಟೆಗೆ ಚಿಕ್ಕಲಾಲ್‌ಬಾಗ್ ನಿಂದ ಆರಂಭಗೊಳ್ಳಲಿದ್ದು ಮಧ್ಯಾಹ್ನ 1 ಗಂಟೆಗೆ ಮಲ್ಲೇಶ್ವರಂ ಮೈದಾನದಲ್ಲಿ ಬಹಿರಂಗ ಸಭೆ ಆರಂಭಗೊಳ್ಳಲಿದೆ.

ಕಾಂಗ್ರೆಸ್‌ನ ಸಂದರ್ಭಸಾಧಕ ನೀತಿಯಿಂದಾಗಿ ಸಂಯುಕ್ತ ರಂಗ ಸರಕಾರವನ್ನು ಉರುಳಿಸಲಾಯಿತು. ಹಾಗಾಗಿ ದೇಶದ ಮೇಲೆ ಮತ್ತೊಮ್ಮೆ ಚುನಾವಣೆಗಳನ್ನು ಹೇರಲಾಗಿದೆ. ಈ ಸ್ಥಿತಿಯನ್ನು ಬಳಸಿಕೊಳ್ಳಲು ಅಧಿಕಾರದಾಹೀ ಬಿ.ಜೆ.ಪಿಯು ಹತಾಶ ಯತ್ನ ನಡೆಸಿ ವಿಫಲಗೊಂಡಿದೆ. ಹುಸಿ ಪ್ರಚಾರದಲ್ಲಿ ತೊಡಗಿದೆ. ಮಾಧ್ಯಮಗಳೂ ಕೂಡ ಅವಾಸ್ತವಿಕವಾದ, ಉತ್ಪ್ರೇಕ್ಷಿತ ವರದಿಗಳನ್ನು ಪ್ರಕಟಿಸುತ್ತಿವೆ. ಬಿ.ಜೆ.ಪಿ, ಕಾಂಗ್ರೆ ಪ್ರಚಾರಗಳ ಹಿಂದೆ ವಿದೇಶಿ ಕಂಪನಿಗಳ ದೇಶೀಯ ಭೂಮಾಲಕ - ಬಂಡವಾಳಗಾರರ ಹಣ ಥೈಲಿಗಳು ಇವೆ ಎಂಬುದನ್ನು ಮರೆಯಬಾರದು. ವಿದ್ಯಾರ್ಥಿ ಯುವಜನರ ಈ ರ್‍ಯಾಲಿಯು ಜಾತ್ಯಾತೀತ, ದೇಶಪ್ರೇಮಿ ಶಕ್ತಿಗಳು ಜಾಗೃತರಾಗಿರುವುದನ್ನು, ಹೋರಾಟದ ಚೇತನವನ್ನು ತೋರಿಸಲಿದೆ. ರ್‍ಯಾಲಿಯ ಸಿದ್ಧತೆಗಾಗಿ ವಿಭಾಗವಾರು ಸಮಾವೇಶಗಳನ್ನು ಯೋಜಿಸಲಾದಂತೆ ಜನವರಿ 21 ರಂದು ಗುಲಬರ್ಗ, ಜನವರಿ 22 ರಂದು ಧಾರವಾಡದಲ್ಲಿ ನಡೆದ ಸಮಾವೇಶಗಳು ಅತ್ಯಂತ ಯಶಸ್ವಿಯಾಗಿ ಕೋಮುವಾದಿಗಳ ಹಿಂದೆ ಯುವಜನರಿದ್ದಾರೆ ಎಂಬ ಪ್ರಚಾರದ ಸುಳ್ಳನ್ನು ಬಯಲಿಗೆಳೆದಿದೆ. 28 ರಂದು ಬೆಂಗಳೂರಿನಲ್ಲಿ ಹಾಗೂ 29 ರಂದು ಮೈಸೂರಿನಲ್ಲಿ ಸಮಾವೇಶದ ಸಿದ್ಧತೆ ಭರದಿಂದ ನಡೆದಿದೆ.

ಯಶಸ್ವಿ ೫ನೇ ಬಳ್ಳಾರಿ ಜಿಲ್ಲಾ ಸಿ.ಪಿ.ಐ.[ಎಂ] ಸಮ್ಮೇಳನ

ಕಳೆದ 3 ವರ್ಷಗಳಲ್ಲಿ ಜಿಲ್ಲೆಯ ರಾಜಕೀಯ ಬಲಾಬಲದ ಸ್ಥಿತಿಯ ಅವಲೋಕಿಸಿದ ಸಿ.ಪಿ.ಐ.(ಎಂ)ನ 5ನೇ ಜಿಲ್ಲಾ ಸಮ್ಮೇಳನವು, ಜಿಲ್ಲೆಯಲ್ಲಿ ಮುಂಬರುವ 3 ವರ್ಷಗಳಲ್ಲಿ ಬಂಡವಾಳ ಶಾಹಿ-ಭೂಮಾಲಕರ ವಿಚಾರಗಳಿಗೆದುರಾಗಿ-ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ-ಕೋಮುವಾದಿ-ಜಾತಿವಾದ ಕ್ಕೆದುರಾಗಿ-ಜಾತಿವಾದಿ ಸಂಘಟನೆಗಳ ಐಕ್ಯ ಭಂಜಕತೆಯ ಅಪಾಯ ಹಾಗೂ ನಕ್ಸಲೈಟ್‌ವಾದದ ವಿರುದ್ಧ ಸೆಣಸುವ ಹಾಗೂ ಸ್ವತಂತ್ರ ಚಟುವಟಿಕೆಯನ್ನು ವಿಸ್ತರಿಸುವ ರಾಜಕೀಯ ನಿರ್ಧಾರವನ್ನು ಜಿಲ್ಲಾ ಸಮಿತಿ ಪರವಾಗಿ ಕಾರ್ಯದರ್ಶಿ ಕಾಂ|| ಎಸ್. ಪ್ರಸನ್ನ ಕುಮಾರ್ ಮಂಡಿಸಿದ ಕರಡು ವರದಿಯ ಮೇಲೆ ಪ್ರತಿನಿಧಿ ಅಧಿವೇಶನ ಚರ್ಚಿಸಿ ಅಂಗೀಕರಿಸಿದೆ.

ಒಟ್ಟು 33 ಪ್ರತಿನಿಧಿ ಸಂಗಾತಿಗಳು ಕರಡು ವರದಿಯ ಮೇಲೆ ಮಾತನಾಡಿ ಮುಂಬರುವ ಜಿಲ್ಲಾ ಸಮಿತಿಯು ಸೈದ್ಧಾಂತಿಕವಾಗಿ ಬಲಗೊಳ್ಳುವ ಹಾಗೂ-ಸಾಮೂಹಿಕ ಕಾರ್ಯ ನಿರ್ವಹಣೆಯನ್ನು ಬಲ ಪಡಿಸುವ ಮತ್ತು ತಾಲುಕಾ ಸಮಿತಿಗಳು, ಆಯಾ ತಾಲೂಕಿನಲ್ಲಿ ರಾಜಕೀಯವಾಗಿ ಮಧ್ಯಪ್ರವೇಶಿಸುವಷ್ಟು ಬಲಿಷ್ಠಗೊಳಿಸಲು - ಸಾಮೂಹಿಕ ಚಳುವಳಿಯನ್ನು ಘಟಕಗಳ ನಾಯಕತ್ವದಲ್ಲಿ ವಿಸ್ತರಿಸಲು ಒತ್ತು ನೀಡುವಂತೆ ಅಭಿಪ್ರಾಯ ವ್ಯಕ್ತ ಪಡಿಸಿದರು.

ಮುಂದೆ ಪ್ರತಿನಿಧಿಗಳ ಅಭಿಪ್ರಾಯದ ಮೇಲೆ ಜಿಲ್ಲಾ ಸಮಿತಿಯ ಅಭಿಪ್ರಾಯ ಮಂಡಿಸುತ್ತಾ ಕಾಂ|| ಪ್ರಸನ್ನಕುಮಾರ್ ಕಳೆದ ಸಮ್ಮೇಳನಕ್ಕೆ ಹೋಲಿಸಿದರೆ ಈ ಅಧಿವೇಶನದ ಪ್ರತಿನಿಧಿಗಳ ಚರ್ಚೆ ಗುಣಾತ್ಮಕವಾಗಿದ್ದು-ನಮ್ಮ ಪಕ್ಷದ ಗುಣಾತ್ಮಕ ಬೆಳವಣಿಗೆಯನ್ನು ಎತ್ತಿ ತೋರಿಸುತ್ತದೆ ಎಂದರು. ಜಿಲ್ಲಾ ಸಮಿತಿಯು ಪ್ರತಿನಿಧಿಗಳ ಹಲವು ಅಭಿಪ್ರಾಯಗಳನ್ನು ಒಪ್ಪಿ ಕರಡು ವರದಿಯನ್ನು ತಿದ್ದುಪಡಿಗಳೊಂದಿಗೆ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಜಿಲ್ಲೆಯಲ್ಲಾದ ಹೊಸ ಆರ್ಥಿಕ ಹಾಗೂ ಕೈಗಾರಿಕಾ ಬೆಳವಣಿಗೆಯ ಪರಿಣಾಮಗಳ ಕುರಿತು ಪ್ರತ್ಯೇಕ ನಿರ್ಣಯವನ್ನು ಸಮ್ಮೇಳನ ಅಂಗೀಕರಿಸಿತು.

ನಿರೀಕ್ಷೆಗೆ ಮೀರಿ ಜಿಲ್ಲೆಗೆ ಬಂದಿರುವ-ಬರುತ್ತಿರುವ 20 ಸಾವಿರ ಕೋಟಿಯಷ್ಟು ಬಂಡವಾಳವು ಹೊಸ ತಂತ್ರಜ್ಞಾನ ಬೆಳೆಸುವ ಮೂಲಕ ಜಿಲ್ಲೆಯ ನಿರುದ್ಯೋಗಿಗಳಿಗಾಗಲೀ-ರಾಜ್ಯದ ನಿರುದ್ಯೋಗಿಗಳಿಗೆ ಸಹಾಯಕವಾಗಿಲ್ಲ, ಬದಲಿಗೆ ಗುತ್ತೇದಾರಿ ಬಂಡವಾಳದಾರರಿಗೆ ಪ್ರದೇಶದ ನೆಲ-ಜಲ-ಗಣಿ, ವಿದ್ಯುತ್ ಹಾಗೂ ಮಾನವ ಸಂಪನ್ಮೂಲಗಳನ್ನು ಲೂಟಿಗೈಯ್ಯಲು ತೆರೆದಿಟ್ಟಂತಾಗಿದೆ ಎಂದು ಸಮ್ಮೇಳನ ಆತಂಕ ವ್ಯಕ್ತಪಡಿಸಿದೆ.

ಹೊಸ ಕೃಷಿ ನೀತಿಗೆ ತುತ್ತಾದ ಬಳ್ಳಾರಿ ಜಿಲ್ಲೆಯ ಕೃಷಿ ರಂಗವು ತೀವ್ರ ಬಿಕ್ಕಟ್ಟಿಗೆ ಒಳಪಟ್ಟಿದ್ದು ಶ್ರೀಮಂತ ರೈತರು-ಮಧ್ಯಮ ರೈತರು-ಸಾಲಗಾರರಾಗಿ ದಿವಾಳಿಯಾಗಿ ಕೆಳಸ್ಥಳಕ್ಕೆ ದೂಡಲ್ಪಟ್ಟರೆ.... ಬಡ ರೈತರು ಭೂಮಿ ಮಾರಿಕೊಂಡು ಕೂಲಿಕಾರರ ಪಡೆಯನ್ನು ಗಣನೀಯವಾಗಿ ಹೆಚ್ಚಿಸಿರುವುದು; ಹೊಸ ಯಂತ್ರಗಳ ಜೊತೆಗಿನ ಕೃಷಿ ಪದ್ಧತಿಯು ಕೂಲಿ ಕೆಲಸವನ್ನು ತೀವ್ರ ಕಡಿತಗೊಳಿಸುವುದು ದಾರಿದ್ರ್ಯವನ್ನು ಹೆಚ್ಚಿಸುತ್ತಿದೆ ಎಂದು ಅದು ತಿಳಿಸಿದೆ.

ರಾಜ್ಯ ಸರ್ಕಾರದ ಹೊಸ ಭೂ ಸುಧಾರಣೆಯ ತಿದ್ದುಪಡಿಯಿಂದ ಕೃಷಿ ಯೋಗ್ಯ ಭೂಮಿಯು ನಗರ ಕಾಳಸಂತೆಕೋರರ, ಬಡ್ಡಿವ್ಯವಹಾರಸ್ಥರ, ಭ್ರಷ್ಟರ, ದಲ್ಲಾಳಿಗಳ, ವ್ಯಾಪಾರಸ್ಥರ ಭೂಮಾಲಿಕರ, ಗುತ್ತೇದಾರರ ಕಬಳಿಕೆಗೆ ಒಳಪಟ್ಟು ಬೀಳಾಗುತ್ತಿರುವುದನ್ನು ಆಹಾರ ಧಾನ್ಯಗಳಿಂದ ವಾಣಿಜ್ಯ ಬೆಳೆಗೆ ಭೂಮಿ ಬದಲಾಗುತ್ತಿರುವುದನ್ನು ಸಮ್ಮೇಳನ ಗುರುತಿಸಿದೆ.

ಈ ಹಿನ್ನೆಲೆಯಲ್ಲಿ ಹೊಸ ಕೃಷಿನೀತಿ-ಹೊಸ ಆರ್ಥಿಕ ನೀತಿಯನ್ನು ವಿರೋಧಿಸಿ, ಪರ್ಯಾಯ ಆರ್ಥಿಕ ಧೋರಣೆಯನ್ನು ಜಿಲ್ಲೆಯ ಅಭಿವೃದ್ಧಿಯ ಬೇಡಿಕೆಗಳನ್ನು ವ್ಯಾಪಕ ಪ್ರಚಾರಗೈದು ರಾಜ್ಯ-ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಜನವರಿ 15ರಂದು ಜಿಲ್ಲೆಯಾದ್ಯಂತ ಪ್ರತಿಭಟನಾ ಧರಣಿ ನಡೆಸಲು 5 ನೇ ಜಿಲ್ಲಾ ಸಮ್ಮೇಳನ ಕರೆ ನೀಡಿದೆ.

8, 9 ಡಿಸೆಂಬರ್ 1997 ರಂದು 2 ದಿನಗಳ ಕಾಲ ನಡೆದ ಪ್ರತಿನಿಧಿಗಳ ಅಧಿವೇಶನವನ್ನು ಅಧ್ಯಕ್ಷೀಯ ಮಂಡಳಿಯಾಗಿ ಕಾಂ|| ಎನ್.ರಾವ್. ಕಾಂ|| ಗಣೇಶ್, ಕಾಂ|| ರಾಮಾಂಜನೇಯಲು, ಕಾಂ|| ಲೋಕೇಶ್ವರಿ, ಕಾಂ|| ನಾಗರತ್ನಮ್ಮ ನಡೆಸಿಕೊಟ್ಟರು. ಕಾಂ|| ಜಿ.ಎನ್. ನಾಗರಾಜ್, ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರು ಸಮ್ಮೇಳನವನ್ನು ಉದ್ಘಾಟಿಸಿ ಅಂತರ್ರಾಷ್ಟ್ರೀಯ-ರಾಷ್ಟ್ರೀಯ ಹಾಗೂ ರಾಜ್ಯದ ರಾಜಕೀಯ ಬೆಳವಣಿಗೆಯನ್ನು ಹಾಗೂ ಕಾಂ|| ಎಸ್.ವೈ. ಗುರುಶಾಂತ್ ರವರು ಜಿಲ್ಲಾ ಸಮ್ಮೇಳನದಲ್ಲಿ ಭಾಗವಹಿಸಿ ಪ್ರತಿನಿಧಿ ಸಂಗಾತಿಗಳಿಗೆ ಕ್ಯೂಬಾದ ಅನುಭವವನ್ನು ವಿವರಿಸಿದರು. ಮತ್ತೊಬ್ಬ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ|| ನಿತ್ಯಾನಂದ ಸ್ವಾಮಿಯವರು ಮುಕ್ತಾಯ ಸಮಾರಂಭದಲ್ಲಿ ಜಿಲ್ಲೆಯಲ್ಲಿ ಪಕ್ಷವನ್ನು ಬಲಿಷ್ಠವಾಗಿ ಕಟ್ಟಿ ಬೆಳಸಲು ಕರೆ ನೀಡಿದರು.

ದಿನಾಂಕ 7-12.1997 ರಂದು ಕುರುಗೋಡು ಘಟಕದ ದೊಡ್ಡ ಬಸವೇಶ್ವರ ದೇವಸ್ಥಾನದ ಪ್ರಸಾದ ನಿಲಯದ ಕಾಂ|| ಬಸವಪೊನ್ನಯ್ಯ ಮಂಟಪದ ಮುಂಭಾಗದಲ್ಲಿ ಸಾವಿರಾರು ಬೆಂಬಲಿಗರ ನಡುವೆ ರಾಜ್ಯ ಸಮಿತಿ ಸದಸ್ಯರಾದ ಕಾಂ|| ಯು. ಬಸವರಾಜ್ ಕೆಂಬಾವುಟವನ್ನು ಹಾರಿಸಿದರು. ನಂತರ ಸುಮಾರು 1300 ಜನರ ರೈತ-ಕೂಲಿಕಾರ, ಕಾರ್ಮಿಕರ- ಮಹಿಳೆಯರ - ಯುವಜನರ - ವಿದ್ಯಾರ್ಥಿಗಳ ಬೃಹತ್ ಮೆರವಣಿಗೆಯು ಸಾವಿರಾರು ಕೆಂಬಾವುಟಗಳೊಂದಿಗೆ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ನಡೆಯಿತು. 4.20ಕ್ಕೆ ಸಾರ್ವಜನಿಕ ಸಮಾರಂಭವು ಕಾಂ|| ಯು.ಬಸವರಾಜ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಂ|| ಜಿ.ಎನ್. ನಾಗರಾಜ್, ಕಾಂ|| ನಿತ್ಯಾನಂದ ಸ್ವಾಮಿಯವರು ಬಳ್ಳಾರಿ ಜಿಲ್ಲೆಯ ಜನತೆಯು ಕಾಂಗ್ರೆಸ್ ಹಾಗೂ ಕೋಮುವಾದಿ ಬಿ.ಜೆ.ಪಿ.ಯನ್ನು ಏತಕ್ಕಾಗಿ ಸೋಲಿಸಬೇಕೆಂದು ಕಳೆದ 5 ವರ್ಷಗಳ ತಮ್ಮ ಅನುಭವವನ್ನು ವಿವರಿಸಿದರು. ಕುರುಗೋಡುನಂತಹ ಪಾಳೆಯಗಾರಿ ಧೋರಣೆಗಳಿಗೆದುರಾಗಿ ಹೇಗೆ ದಿಟ್ಟವಾಗಿ ಸಿ.ಪಿ.ಐ.(ಎಂ) ಬೆಳೆದು ಬಂದಿತೆಂಬುದನ್ನು, ದೊರೆಗಳ ಆಟವಿನ್ನು ಸಾಗದೆಂದು ಎಸ್.ವೈ. ಗುರುಶಾಂತ್ ಹೇಳಿದರು. ಕಾಂ|| ಪ್ರಸನ್ನಕುಮಾರ್ ಜಾತಿವಾದವನ್ನು-ಕೋಮುವಾದವನ್ನು ತಿರಸ್ಕರಿಸಲು-ವ್ಯಾಪಕವಾಗಿ ಸಾಮೂಹಿಕ ಚಳುವಳಿ ಬೆಳೆಸಲು ಕರೆ ನೀಡಿದರು. ಕಾಂ|| ವಿ.ಎಸ್. ಶಿವಶಂಕರ್ ಸ್ವಾಗತಿಸಿದರು. ಕಾಂ|| ಕೆ. ಗಾದಿಲಿಂಗಪ್ಪ ವಂದಿಸಿದರು.

ಬಹಿರಂಗ ಅಧಿವೇಶನದಲ್ಲಿ ತುಂಗಭದ್ರ ನದಿಯ ಹೂಳೆತ್ತುವ ಹಾಗೂ ಈ ಭಾಗದ ರೈತರ ನೀರಿನ ಭವಣೆಗೆ ಶಾಶ್ವತ ಪರಿಹಾರ ಕಲ್ಪಿಸುವ ಮತ್ತು ಕೃಷಿಕೂಲಿಕಾರರಿಗೆ ಸಮಗ್ರ ಕಾನೂನಿಗಾಗಿ ಒತ್ತಾಯಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಪ್ರತಿನಿಧಿಗಳ ಅಧಿವೇಶನವು ಮುಂದಿನ ಮೂರು ವರ್ಷಗಳಿಗೆ ಒಟ್ಟು 16 ಸ್ಥಾನಗಳಲ್ಲಿ 2 ನ್ನು ಖಾಲಿ ಬಿಟ್ಟು 14 ಜನರ ಜಿಲ್ಲಾ ಸಮಿತಿಯನ್ನು ಗುಪ್ತ ಮತದಾನದ ಮೂಲಕ ಅಂಗೀಕರಿಸಿತು. ಪ್ರಸನ್ನಕುಮಾರ್, ಯು.ಬಸವರಾಜ್, ಡಿ. ವೆಂಕಟರಮಣಾ, ಎನ್. ರಾವ್, ಎಂ.ಜೆ.ನಾಯಕ್, ರಘುನಾಥ್, ಗಾದಿಲಿಂಗಪ್ಪ, ಬಿ. ಗಣೇಶ್, ಎಸ್. ಜಗನ್ನಾಥ್, ಈ.ಆರ್. ಯಲ್ಲಪ್ಪ, ರಾಮಾಂಜನೇಯಲು, ಡಿ.ಎಂ. ಮರಿಯಪ್ಪ, ವಿ.ಎಸ್. ಶಿವಶಂಕರ್, ಕೆ. ನಾಗರತ್ನ.

ಜಿಲ್ಲಾ ಕಾರ್ಯದರ್ಶಿಯಾಗಿ ಕಾಂ|| ಪ್ರಸನ್ನಕುಮಾರ್ ಪುನಾರಾಯ್ಕೆಯಾದರು. ಕಾಂ|| ಯು. ಬಸವರಾಜ್, ಕಾಂ|| ಡಿ.ವೆಂಕಟರಮಣಾ ಹಾಗೂ ಕಾಂ|| ಹೆಚ್.ಎನ್.ರಾವ್ ಒಳಗೊಂಡ ಕಾರ್ಯದರ್ಶಿ ಮಂಡಳಿ ಆಯ್ಕೆ ಆಯಿತು.

ವರದಿ **ಯು. ಬಸವರಾಜ್**

ಅಸಂಘಟಿತ ಕಾರ್ಮಿಕರ ಯಶಸ್ವೀ ಸಮಾವೇಶ

ನಗರದ ಹೊರವಲಯದ ಕಾಮಾಕ್ಷಿ ಪಾಳ್ಯ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕರ ಸಮಾವೇಶವೊಂದನ್ನು ಸಿ.ಐ.ಟಿ.ಯು ಸಂಘಟಿಸಿತ್ತು. ಡೆಂಟಲ್ ಕಾರ್ಮಿಕರು ಸಮರಧೀರ ಹೋರಾಟ ನಡೆಸುತ್ತಿರುವ ಈ ಪ್ರದೇಶದಲ್ಲಿ ಹೋರಾಟ ನಿರತ ಕಾರ್ಮಿಕರ ಮೇಲೆ ಪೋಲೀಸ್, ಗೂಂಡಾ ಗಳ ಹಾಗೂ ಮಾಲೀಕರ ದಬ್ಬಾಳಿಕೆಗಳು ಸಾಗುತ್ತಿವೆ. ಇಂತಹ ಕಾರ್ಮಿಕ ವಿರೋಧಿ ಕೃತ್ಯಗಳನ್ನು ಐಕ್ಯವಾಗಿ ಎದುರಿಸುವ ಮತ್ತು ಹೋರಾಟವನ್ನು ಮುಂದುವರೆಸುವ ಸ್ಫೂರ್ತಿಯನ್ನು ಈ ಸಮಾವೇಶ ಹುರಿದುಂಬಿಸಿತು.

ಸಮಾವೇಶಕ್ಕೂ ಮುನ್ನ ಸಾವಿರಾರು ಕಾರ್ಮಿಕರು ಕೆಂಬಾವುಟಗಳನ್ನು ಹಿಡಿದಿದ್ದ ಆಕರ್ಷಕ ರ್‍ಯಾಲಿ ನಡೆಯಿತು.

ಸಮಾವೇಶವನ್ನು ಉದ್ಘಾಟಿಸಿದ ಕಾಂ|| ಎಸ್. ಸೂರ್ಯನಾರಾಯಣ ರಾವ್, ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ಕನಿಷ್ಟ ಕೂಲಿ ಇಲ್ಲದೆ ಇಂದಿನ ದುಬಾರಿ ದಿನ ಗಳಲ್ಲಿ ಅತೀವ ಸಂಕಷ್ಟಗಳನ್ನು ಎದುರಿಸಿ ಬದುಕುತ್ತಿರುವ ಅಸಂಘಟಿತ ಕಾರ್ಮಿಕರ ಪರಿಸ್ಥಿತಿಯ ಬಗ್ಗೆ ವಿವರಿಸಿದರು.

ಕಾರ್ಮಿಕರಲ್ಲಿ ವರ್ಗ ಜಾಗೃತಿ ಬೆಳೆಯಬೇಕು. ಉತ್ತಮ ಜೀವನ ಮಟ್ಟಕ್ಕೆ ಹೋರಾಟ ನಡೆಸುತ ಜೊತೆಗೆ ದುಡಿಯುವ ವರ್ಗದ ಅಧಿಕಾರಕ್ಕಾಗಿ ದುಡಿಯಬೇಕೆಂದು ಕರೆ ನೀಡುತ್ತಾ ಜನ ವಿರೋಧಿ ಕಾಂಗ್ರೆಸ್ ಮತ್ತು ಕೋಮುವಾದಿ ಬಿ.ಜೆ.ಪಿ.ಗಳ ನೀತಿಗಳನ್ನು ಬಯಲಿ ಗೆಳೆದರು.

ಸಮಾವೇಶದಲ್ಲಿ ಪಾಲ್ಗೊಂಡಿದ್ದ ಕುಮಾರಸ್ವಾಮಿಯವರನ್ನು ಕನಿಷ್ಟ ಕೂಲಿ ಜಾರಿಗೊಳಿಸುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಿ.ಪಿ.ಐ.(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ|| ಪಿ.ಜಗನ್ನಾಥ್ ಸಮಾವೇಶವನ್ನು ಅಭಿನಂದಿಸಿ ಮಾತನಾಡಿದರು.

ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯ ದರ್ಶಿ ಗೋಪಾಲಕೃಷ್ಣ, ಸಿ.ಐ.ಟಿ.ಯು. ಮುಖಂಡರಾದ ಪಿ.ಕೆ.ಸುಬ್ರಮಣಿ, ಬಿ.ಇ.ಯು.ಎಲ್.ನ ಗಂಗಣ್ಣ, ಗಾರ್ಮೆಂಟ್ಸ್ ಕಾರ್ಮಿಕ ಸಂಘದ ಯಶೋದ, ಜಿ.ರಾಮಯ್ಯ ಸಮಾವೇಶ ದಲ್ಲಿ ಹೋಟಲ್ ವರ್ಕರ್ಸ್ ಯೂನಿಯನ್ನಿನ ಇ.ಕೆ .ಎನ್. ರಾಜನ್ ಉಪಸ್ಥಿತರಿದ್ದು ಮಾತ ನಾಡಿ ಕಾರ್ಮಿಕರು ಹೋರಾಟದ ಮನೋಭಾವವನ್ನು ಬೆಳಸಿಕೊಳ್ಳಬೇಕೆಂದು ಕರೆಯಿತ್ತರು.

ವೀರಭದ್ರಗೌಡ ಸ್ವಾಗತಿಸಿ, ಯೋಗೀಶ್ ವಂದನಾರ್ಪಣೆ ಮಾಡುವುದ ರೊಂದಿಗೆ ಸಮಾವೇಶ ಮುಗಿಯಿತು.

ನಿವೇಶನಕ್ಕಾಗಿ ಒತ್ತಾಯಿಸಿ ಮನವಿ

ಪಕ್ಷದ ಹರಿಹರ ಘಟಕವು ನಗರದ ಸಾವಿರಾರು ನಿವೇಶನ ರಹಿತ ಕುಟುಂಬಗಳಿಗೆ ನಿವೇಶನಗಳನ್ನು ನೀಡುವಂತೆ ಒತ್ತಾಯಿಸಿ ಡಿ. 27 ರಂದು ತಹಸೀಲ್ದಾರರಿಗೆ ಮನವಿ ಪತ್ರವನ್ನು ಸಲ್ಲಿಸಿದೆ.

ಪಕ್ಷದ ಘಟಕದೊಂದಿಗೆ, ದಾವಣಗೆರೆ ಜಿಲ್ಲಾ ಸರ್ಕಾರಿ, ಸರ್ಕಾರೇತರ ದಿನಗೂಲಿ ನೌಕರರ ಸಂಘ ಹಾಗೂ ಒಂಟೆತ್ತಿನ ಗಾಡಿ ಕೆಲಸಗಾರರ ಸಂಘಗಳು ಈ ಸಂದರ್ಭದಲ್ಲಿ ಮೆರವಣಿಗೆಯನ್ನು ಸಂಘಟಿಸಿದ್ದವು.

ಮೈಸೂರು ಕಿರ್ಲೋಸ್ಕರ್ ಕಾರ್ಖಾನೆಯಿಂದ ಹೊರಟ ಮೆರವಣಿಗೆಗಾರರು ತಹಸೀಲ್ದಾರ್ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿ ಸಭೆ ನಡೆಸಿದರು.

ಮೆರವಣಿಗೆಯ ನೇತೃತ್ವವನ್ನು ವಹಿಸಿದ್ದ ಸಿ.ಪಿ.ಐ.(ಎಂ)ನ ನಗರ ಘಟಕದ ಕಾರ್ಯದರ್ಶಿ ರುದ್ರಪ್ಪ ವೆರಾಟೆ ಬೆನ್ನೂರು, ಹಾಗೂ ದಿನಗೂಲಿ ನೌಕರರ ಸಂಘದ ಗೌರವ ಅಧ್ಯಕ್ಷರಾದ ಬಿ. ಸದಾಶಿವಪ್ಪ, ಕಾರ್ಯದರ್ಶಿ ಹೆಚ್.ಬಿ. ಕೊಟ್ರೇಶಯ್ಯ ಮುಂತಾದವರು ಸಭೆಯಲ್ಲಿ ಭಾಗವಹಿಸಿ ಮಾತನಾಡಿ ಸಾವಿರಾರು ನಿವೇಶನ ರಹಿತ ಕುಟುಂಬಗಳಿಗೆ ನಿವೇಶನ ನೀಡುವಂತೆ ಹಾಗೂ ಕೇಂದ್ರ ಸರಕಾರದ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರಿ ನೌಕರರಿಗೂ ಅನ್ವಯ ಗೊಳಿಸುವಂತೆ ಆಗ್ರಹ ಪಡಿಸಿದರು.

ಪಕ್ಷದ ಪ್ರಾಥಮಿಕ ಸದಸ್ಯತನದಿಂದ ಕೆ. ಮೂಸಬ್ಬ ಉಚ್ಛಾಟನೆ

ಸಿ.ಪಿ.ಐ.(ಎಂ) ಪಕ್ಷದ ದ.ಕ. ಮತ್ತು ಉಡುಪಿ ಜಿಲ್ಲಾ ಸಮಿತಿಯ ಸದಸ್ಯ ಕೆ. ಮೂಸಬ್ಬನವರನ್ನು ಪಕ್ಷದ ಶಿಸ್ತಿನ ಗಂಭೀರ ಉಲ್ಲಂಘನೆಗಾಗಿ ಪಕ್ಷದ ಪ್ರಾಥಮಿಕ ಸದಸ್ಯತನದಿಂದ ಕಿತ್ತು ಹಾಕಲಾಗಿದೆ ಎಂದು ಪಕ್ಷದ ಜಿಲ್ಲಾ ಸಮಿತಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಜನವರಿ 20ರಂದು ಸಭೆ ಸೇರಿದ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಈ ಜಿಲ್ಲಾ ಸಮಿತಿಯ ನಿರ್ಣಯವನ್ನು ದೃಢೀಕರಿಸಿದೆ

ಬಳ್ಳಾರಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಒತ್ತಾಯಿಸಿ ಸಿ.ಪಿ.ಐ.(ಎಂ) ಪಕ್ಷದ ಧರಣಿ

ಕುರುಗೋಡು ಜನವರಿ ರಂದು ಸಿ.ಪಿ.ಐ.(ಎಂ) ಪಕ್ಷದ ಬಳ್ಳಾರಿ ಜಿಲ್ಲಾ ಸಮ್ಮೇಳನದ ಕರೆಯ ಮೇರೆಗೆ ಕುರುಗೋಡು ವಾರ್ಡ್ ಕಾರ್ಯಾಲಯದ ಮುಂದೆ ಪಕ್ಷದ ಬಳ್ಳಾರಿ ತಾಲೂಕು ಸಮಿತಿಯು ಒಂದು ದಿನದ ಧರಣೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಧರಣೆಯಲ್ಲಿ ಸುಮಾರು ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು. ಈ ಧರಣೆಯನ್ನು ಉದ್ದೇಶಿಸಿ ಜಿಲ್ಲಾ ಸಮಿತಿಯ ಸದಸ್ಯರಾದ ಬಸವರಾಜ್ ಮಾತನಾಡಿ ಕೇಂದ್ರ ಸರ್ಕಾರದ ಹೊಸ ಆಥಿ4ಕ ನೀತಿ ಮತ್ತು ಉದಾರವಾದ ನೀತಿಗಳಿಂದ ಬಹುರಾಷ್ಟ್ರೀಯ ಕಂಪನಿಗಳ ಆಗಮನದಿಂದ ದೇಶಿಯ ಕೈಗಾರಿಕೆಗಳು ಮುಚ್ಚುತ್ತಿರುವ ಮತ್ತು ಕಾರ್ಮಿಕರು ಬೀದೀಪಾಲಾಗುತ್ತಿರುವ ನೀತಿಗಳನ್ನು ಖಂಡಿಸಿದರಲ್ಲದೆ, ಸಂಯುಕ್ತ ರಂಗವನ್ನು ಅಧಿಕಾರಕ್ಕೆ ತರಲು ಮೂಲಕ ಭ್ರಷ್ಟಾಚಾರಿ ಕಾಂಗ್ರೆಸ್ ಪಕ್ಷವನ್ನು ಮತ್ತು ಕೋಮುವಾದಿ ಬಿ.ಜೆ.ಪಿಯನ್ನು ಸೋಲಿಸಬೇಕೆಂದು ಕರೆ ನೀಡಿದರು.

ಮತ್ತೊಬ್ಬ ಪಕ್ಷದ ಮುಖಂಡರಾದ ವಿ.ಎಸ್. ಶಿವಶಂಕರ್ ಇವರು ಮಾತನಾಡುತ್ತಾ ನಮ್ಮ ಸಮಸ್ಯೆಗಳಾದ ವಿದ್ಯುತ್ ದೀಪ, ಕುಡಿಯುವ ನೀರು ಇನ್ನಿತರ ಮೂಲಭೂತ ಸೌಲಭ್ಯಗಳು ಪಡೆಯಲು ಕೃಷಿ ಕೂಲಿಕಾರರ ಸಂಘಟನೆ ಅವಶ್ಯ. ಅಲ್ಲದೆ, ಕೃಷಿ ಕೂಲಿಕಾರರಿಗೆ 12 ತಿಂಗಳು ಕೆಲಸ ಸಿಗಬೇಕು ಮತ್ತು ಅವರಿಗೆ ಜೀವನದ ಭದ್ರತೆ ಒದಗಿಸಿ ಬೇಕೆಂದು ಸರಕಾರಕ್ಕೆ ಒತ್ತಾಯಿಸಿದರು.

ಗಾದಿಲಿಂಗಪ್ಪ ಇವರು ಮಾತನಾಡುತ್ತಾ ಹೊಸ ಆರ್ಥಿಕ ನೀತಿಗಳಿಂದಾಗಿ ಗ್ರಾಮಾಂತರ ಪ್ರದೇಶಕ್ಕೆ ಹೊಸ ಹೊಸ ತಂತ್ರಗಳು ಬಂದಿರುವುದಿಂದ ಈಗಾಗಲೇ ಕೃಷಿ ಕೂಲಿಕಾರರಿಗೆ ಕೆಲಸವಿಲ್ಲದೆ, ವಲಸೆ ಹೋಗುವ ಪರಿಸ್ಥಿತಿ ಬಂದೊದಗಿದೆ ಎಂದರು. ಡಿ.ವೈ.ಎಫ್.ಐ.ನ ಕೆ. ಬಸವರಾಜ್ ಮಾತನಾಡುತ್ತಾ ಎಡರಂಗ ನೇತೃತ್ವ ಸರಕಾರಗಳ ನೀತಿಯಂತೆ ಕೃಷಿಕೂಲಿಕಾರರಿಗೆ ಸಮಗ್ರ ಕಾನೂನು ಜಾರಿಯಾಗಬೇಕು. ನಿವೃತ್ತ ಯಾದ ಮೇಲೆ ಕೃಷಿಕೂಲಿ ಕಾರರಿಗೆ ಪಿಂಚಣಿ ವ್ಯವಸ್ಥೆಯಾಗಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಈ ಧರಣಿಯಲ್ಲಿ ಡಿ.ವೈ.ಎಫ್.ಐ.ನ ಎಂ. ರಾಜನಾಬ್, ಟಿ. ಇನಾಂದಾರ್ ಹಾಗೂ ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿದ್ದರು. ತಹಶೀಲ್ದಾರರಾದ ಶಿವರಾಜ್ ಗಂಟೆಗೆ ಇವರಿಗೆ ಮನವಿ ಸಲ್ಲಿಸಲಾಯಿತು.

"ಕೆಂಪು ಪತಾಕೆ ನಮ್ಮದು.... ಕೀಳಲು ಬಿಡೆವು...."


ಅರೆ ದೇಕ್ ವಹಾ ಪೇ, ಕೋಯಿ ತೋಡ್‌ರಹಾ ಹೈ ಲಾಲ್ ಜಂಡೇ ಕೋ, ಪಕಡ್ ಉನೇ, ಮಾರ್ ಸಾಲೋಂಕೋ! ಇದು ಕೆಂಪು ಪತಾಕೆ ನಮ್ಮದು, ನೀವ್ಯಾರು ನಮ್ಮ ಏರಿಯಾಗೆ ಬಂದು ಅವುಗಳನ್ನು ಕೀಳಲು, ಅವಕ್ಕೇನಾದರು ಕೈಹಾಕಿದರೆ, ಹೊಡೆದುರುಳಿಸುತ್ತೇವೆ ನಿಮ್ಮನ್ನು....!. ಎಂದು ಎಚ್ಚರಿಸಿದರು. ಬೀದಿ ಬದಿಯಲ್ಲಿ ನಿಂತಿದ್ದ ಕ್ಲಾಕ್ ಟವರಿನ ಆ ಜನ, ಅಲ್ಲಿಗೆ ನಿಲ್ಲದೆ, ಪತಾಕೆ ಬಿಚ್ಚಲು ಹೋದ ಜನ, ಕಂಬ ಏರಲು ಮುಂದಾದಾಗ ದೊಡ್ಡ ರಂಪವೇ ಆಯಿತು, ಅಲ್ಲಿಯೇ ಇದ್ದ ಪೋಲೀಸರು ಬಂದು ಮಧ್ಯಸ್ಥಿಕೆ ವಹಿಸಿ ಸಮಸ್ಯೆ ಬಗೆಹರಿಸಬೇಕಾಯಿತು.

ಏನಿದು, ಯಾರವರು ನಮ್ಮ ಬಾವುಟ, ಬಂಟಿಂಗ್ಸ್ ಕೀಳಲು ಹೋಗಿದ್ದವರು, ಅವರಿಗೆ ನಾಲ್ಕು ಬಿಗಿಯಬೇಕಿತ್ತು ಎನ್ನುತ್ತೀರಲ್ಲವೇ? ಹೌದು ಎನ್ನುತ್ತೇವೆ ನಾವು ಕೂಡ... ಆದರೆ ಹಾಗೇನಾದರು ಆಗಿದ್ದರೇ, ನಮ್ಮ ಕೆಲವು ಕಾಮ್ರೇಡ್ಸ್‌ಗಳನ್ನು ಆಸ್ಪತ್ರೆಯಲ್ಲಿ ನೋಡ ಬೇಕಾಗಿ ಬರುತ್ತಿ ತ್ತೇನೋ ಎಂಬುದು ನನ್ನ ಅನುಮಾನ.

ಅದೇಗೆ ಕಾಮ್ರೇಡ್? ಎನ್ನುತ್ತೀರಿ ಅದೇಗೆಂದರೆ, ಆ ಬಂಟಿಂಗ್ಸ್ ಬಿಚ್ಚಲು ಹೋಗಿದ್ದವರು ಬೇರೆ ಯಾರೂ ಅಲ್ಲ, ಅವುಗಳನ್ನು ಕಟ್ಟಿದ, ಕೋಲಾರದಲ್ಲಿ ನಮ್ಮ ಪಕ್ಷದ ಸಮ್ಮೇಳನವನ್ನು ಯಶಸ್ವಿಗೊಳಿಸಲು ಹಗಲಿರುಳು ತಿಂಗಳುಗಟ್ಟಲೆ ದುಡಿದ ನಮ್ಮ ಎಸ್‌ಎಫ್‌ಐ-ಡಿವೈಎಫ್‌ಐ ಸಂಗಾತಿಗಳು. ಸಮ್ಮೇಳನಕ್ಕೆ ಕೋಲಾರ ನಗರವನ್ನು ಸಿಂಗರಿಸಲೆಂದು ನಗರದೆಲ್ಲೆಡೆ ಕಟ್ಟಿದ ಬಂಟಿಂಗ್ಸ್-ಬಾವುಟಗಳ ರೀತಿಯಲ್ಲೆ, ಅಲ್ಲಿನ ಕ್ಲಾಕ್ ಟವರ್ ವೃತ್ತದಲ್ಲೂ ಸಹ ನಮ್ಮ ಸ್ವಯಂ ಸೇವಕ ಸಂಗಾತಿಗಳು ಕಟ್ಟಿದ್ದರು. ಸಮ್ಮೇಳನದ ನಂತರ ಪಕ್ಷದ ತೀರ್ಮಾನದ ಮೇರೆಗೆ ಎಲ್ಲಡೆ ಬಂಟಿಂಗ್ಸ್- ಬಾವುಟಗಳನ್ನು ಬಿಚ್ಚಿಕೊಂಡ ರೀತಿಯಲ್ಲೆ ಕ್ಲಾಕ್ ಟವರ್ ವೃತ್ತದಲ್ಲಿ ಸಹ ಕಟ್ಟಲಾಗಿದ್ದ ಬಂಟಿಂಗ್ಸ್ ಮತ್ತು ಬಾವುಟಗಳನ್ನು ಬಿಚ್ಚಲು ಸ್ವಯಂ ಸೇವಕ ಸಂಗಾತಿಗಳು ಹೋದಾಗ, ಅಲ್ಲಿನ ನಾಗರೀಕ ಬಂಧುಗಳು ಪ್ರತಿಕ್ರಿಯಿಸಿದ ರೀತಿಯಿದು. ಕೊನೆಗೆ ತಮ್ಮ ವಿವರಗಳನ್ನು ನೀಡಿ, ನಾವು ಬಂದಿರುವುದು ಅವುಗಳನ್ನು ಕಿತ್ತು ಹಾಕಲು ಅಲ್ಲ, ಅವುಗಳನ್ನು ಬಿಚ್ಚಿಕೊಂಡು ಹೋಗಿ, ಮುಂದಿನ ಕಾರ್ಯಕ್ರಮಗಳಿಗೆ ಉಪಯೋಗಿಸಲು, ನಾವು ಬೇರೆ ಯಾರು ಅಲ್ಲ, ನಾವು ಸಿ.ಪಿ.ಐ.(ಎಂ) ಪಕ್ಷದವರೆ ಎಂದು ಕಷ್ಟ ಪಟ್ಟು ಮನವರಿಕೆ ಮಾಡಿ ಕೊಡಬೇಕಾದ ಪ್ರಮೇಯ ಸ್ವಯಂ ಸೇವಕ ಸಂಗಾತಿಗಳಿಗೆ ಬಂದಿತ್ತು.

ಸಮ್ಮೇಳನದ ನಂತರ 10-1-1998 ರಂದು ಕೋಲಾರದಲ್ಲಿ ಸೇರಿದ್ದ ಸ್ವಯಂ ಸೇವಕರ ಸಭೆಯಲ್ಲಿ, ಈ ಘಟನೆಯ ಅನುಭವ ಹಂಚಿಕೊಂಡ, ಡಿ.ವೈ. ಎಫ್.ಐ. ಸಂಗಾತಿ, ಸಭೆಯಲ್ಲಿದ್ದವರೆಲ್ಲರಿಗೂ ಸಾಮಾನ್ಯ ಜನ ನಮ್ಮ ಕೆಂಬಾವುಟವನ್ನು ಎಷ್ಟು ಪ್ರೀತಿಸುತ್ತಾರೆ, ಜನತೆಯೆಡೆಗೆ ಕೆಂಬಾವುಟ ಕೊಂಡೊಯ್ದರೆ, ಅವರೆಷ್ಟು ಅದನ್ನು ಬಯಸಿ, ಜೋಪಾನ ಮಾಡಲು ಉತ್ಸುಕರಿದ್ದಾರೆ ಎಂಬುದನ್ನು ತಿಳಿಸಿದಾಗ, ಸಭೆ ಯಲ್ಲಿದ್ದ ಅನೇಕರ ಕಣ್ಣಲ್ಲಿ ಆನಂದಬಾಷ್ಪ ಚಿಮ್ಮಿದ್ದನ್ನು ಸೂಕ್ಷ್ಮವಾಗಿ ಗಮನಿಸ ಬಹುದಾಗಿತ್ತು. ಜನತೆಯೆಡೆಗೆ ನಮ್ಮ ರಾಜಕೀಯ ಬಾವುಟ ಕೊಂಡೊಯ್ದರೆ ಅದನ್ನು ಎದೆಗೊತ್ತಿಕೊಂಡು ಜೋಪಾನ ಮಾಡಲು ಜನ ಸಿದ್ಧರಿದ್ದಾರೆ. ಅವರೆಡೆಗೆ ಕೊಂಡೊಯ್ಯುವುದು ನಮ್ಮ ಕರ್ತವ್ಯವಲ್ಲವೇ?

- ಕೆ.ಎನ್.ಉಮೇಶ್



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಕಾಂಗ್ರೆಸಿನ ಕರಾಚಿ ಅಧಿವೇಶದ ಕೆಲವೇ ದಿನಗಳ ಮೊದಲು ಇನ್ನೊಂದು ಘಟನೆ ನಡೆಯಿತು. ಅದೊಂದು ದುರಂತ ಘಟನೆ. 24 ಮಾರ್ಚ್ 1931 ರಂದು ಕಾನ್‌ಪುರದಲ್ಲಿ ಕೋಮುಗಲಭೆ ಭುಗಿಲೆದ್ದಿತು. ನೂರಾರು ಹಿಂದುಗಳು, ಮುಸಲ್ಮಾನರು ಜೀವ ಕಳೆದುಕೊಂಡರು. ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು, ಕಾನ್ಪುರದ ಪತ್ರಿಕೆ "ಪ್ರತಾಪ್"ನ ಸಂಪಾದಕರು, ಗೌರವಾನ್ವಿತ **ಗಣೇಶ ಶಂಕರ್ ವಿದ್ಯಾರ್ಥಿ** ಕೂಡಾ ಈ ಗಲಭೆಗಳಲ್ಲಿ ಕೊಲ್ಲಲ್ಪಟ್ಟರು. ಹಿಂದೂ ಪ್ರದೇಶಗಳಲ್ಲಿ ಮುಸಲ್ಮಾನರನ್ನು, ಮುಸಲ್ಮಾನರ ಪ್ರದೇಶಗಳಲ್ಲಿ ಹಿಂದುಗಳನ್ನು ರಕ್ಷಿಸುತ್ತಿದ್ದಾಗ ಅವರು ಬಲಿಯಾದರು. ಮಾರ್ಚ್ 29 ರಂದಷ್ಟೇ ಅವರ ಮೃತ ದೇಹ ಪತ್ತೆಯಾಯಿತು.



ಹಿಂದಿನ ಸಂಚಿಕೆಯಲ್ಲಿ ಹೇಳಿರುವಂತೆ ಜನಗಳಲ್ಲಿ ತೀವ್ರ ಅಂಸತೃಪ್ತಿ ಹಾಗೂ ಕ್ರೋಧಗಳಿದ್ದರೂ ಕಾಂಗ್ರೆಸ್‌ನ ಕರಾಚಿ ಅಧಿವೇಶನ ಗಾಂಧಿ-ಇರ್ವಿನ್ ಒಪ್ಪಂದವನ್ನು ಅನುಮೋದಿಸಿತು. ಆದರೆ ಸರ್ಕಾರ ಈ ಒಪ್ಪಂದವನ್ನು ಪಾಲಿಸುವುದಿಲ್ಲ ಎಂಬುದು ಆರಂಭದಿಂದಲೇ ಸ್ಪಷ್ಟವಾಗಿತ್ತು. ಗಾಂಧೀಜಿ ಲಂಡನ್ನಿನಲ್ಲಿ ನಡೆದ ದುಂಡು ಮೇಜಿನ ಪರಿಷತ್ತಿನಿಂದ ಬರಿಗೈಯಲ್ಲಿ ಹಿಂದಿರುಗುವ ವೇಳೆಗೆ ಕಾನೂನುಭಂಗ ಚಳುವಳಿಯನ್ನು ದಮನ ಮಾಡಲು ಬ್ರಿಟಿಶ್ ಸರಕಾರ ಸಜ್ಜಾಗುತ್ತಿತ್ತು. ಜನವರಿ 4, 1932 ರಂದು ಕಾಂಗ್ರೆಸ್ ಮತ್ತು ಅದರ ಅಂಗ ಸಂಸ್ಥೆಗಳನ್ನು ನಿಷೇಧಿಸಿಲಾಯಿತು. ಗಾಂಧೀಜಿ ಮತ್ತಿತರ ಮುಖಂಡರನ್ನು ಬಂಧಿಸಲಾಯಿತು.

ಆದರೆ ಜನ ಸೋಲೊಪ್ಪಲಿಲ್ಲ. ಚಳುವಳಿ ಮುಂದುವರಿಸಿದರು. ನಾಲ್ಕೇ ತಿಂಗಳಲ್ಲಿ 80000 ಜನರ ಬಂಧನವಾಯಿತು. 1933 ರ ಮಾರ್ಚ್ ವೇಳೆಗೆ ಈ ಸಂಖ್ಯೆ 1.2 ಲಕ್ಷಕ್ಕೇರಿತು. ಹಲವೆಡೆ ಗೋಳೀಬಾರ್, ಲಾಠೀ ಪ್ರಹಾರ, ದಂಡ, ಆಸ್ತಿವಶ ಇತ್ಯಾದಿ ದಮನ ಚಕ್ರ ನಡೆಯಿತು.

ಜನಸಾಮಾನ್ಯರ ಹೋರಾಟ ಕ್ರಮೇಣ ತಣ್ಣಗಾಗಲಾರಂಭಿಸಿತು. ನೇತೃತ್ವವಿಲ್ಲದ ಜನ ಹತಾಶರಾಗಲಾರಂಭಿಸಿದರು. ಜುಲೈ 1933 ರಲ್ಲಿ ಗಾಂಧೀಜಿ ವೈಸರಾಯನ್ನು ಭೇಟಿ ಮಾಡಲಿಚ್ಛಿಸಿದರು. ವೈಸರಾಯ್ ನಿರಾಕರಿಸಿದ. ಕಾಂಗ್ರೆಸ್‌ನ ಕಾರ್ಯಕ್ರಮ, ಕಾಂಗ್ರೆಸ್ಸಿನ ಸಂಘಟನೆಗಳನ್ನೆಲ್ಲಾ ವಿಸರ್ಜಿಸಿ ಬ್ರಿಟಿಶ್‌ರೊಂದಿಗೆ ರಾಜಿಗೆ ದಾರಿ ಪ್ರಶಸ್ತಗೊಳಿಸಿದರು. 1934 ರಲ್ಲಿ ಗಾಂಧೀಜಿ ಕಾನೂನುಭಂಗ ಚಳುವಳಿಯನ್ನು ಹಿಂದಕ್ಕೆ ಪಡೆದು ವೈಯಕ್ತಿಕ ಸತ್ಯಾಗ್ರಹ ಆರಂಭಿಸುವುದಾಗಿ ಸಾರಿದರು. ಎಐಸಿಸಿ ಯ ಪಾಟ್ನಾ ಅಧಿವೇಶನದಲ್ಲಿ ಕಾನೂನುಭಂಗ ಚಳುವಳಿಯನ್ನು ಹಿಂತೆಗೆದುಕೊಳ್ಳುವ ವ್ಯವಸ್ಥೆ ಮಾಡಲಾಯಿತು. ಜೂನ್ 1934 ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಮೇಲಿನ ನಿಷೇಧವನ್ನು ತೆಗೆಯಲಾಯಿತು. ಆದರೆ ವಾಯುವ್ಯ ಪ್ರಾಂತ್ಯಗಳಲ್ಲಿನ ಲಾಲ್‌ಕುರ್ತಾ (ರೆಡ್‌ಶರ್ಟ್) ಸಂಘಟನೆ ಹಾಗೂ ಕಿಸಾನ್‌ಸಭಾದ ಮೇಲಿನ ನಿಷೇಧವನ್ನು, ಯೂತ್‌ಲೀಗಿನ ಮೇಲಿನ ನಿಷೇಧವನ್ನು ಮಾತ್ರ ತೆಗೆಯಲಿಲ್ಲ.

ಈ ನಡುವೆ ಉಗ್ರಗಾಮಿ ಚಟುವಟಿಕೆಗಳು ಹೆಚ್ಚಿದವು. ಹಲವು ಯುವ ಜನ ಗಲ್ಲಿಗೇರಿದರು. ಹಲವರು ಪೋಲೀಸ್ ಗುಂಡುಗಳಿಗೆ ಬಲಿಯಾದರು. ಇನ್ನೂ ಹಲವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಇವರಲ್ಲಿ ಹಲವು ಶಾಲಾ ವಿದ್ಯಾರ್ಥಿನಿಯರು, ಮಹಿಳೆಯರೂ ಇದ್ದರು. ಕೋಮಿಲ್ಲಾದ ಮ್ಯಾಜಿಸ್ಟ್ರೇಟ್‌ನನ್ನು ಗುಂಡಿಟ್ಟು ಕೊಂದ **ಶಾಂತಿಘೋಷ** ಹಾಗೂ **ಸುನೀತಿ ಚೌಧರಿ** ಅಪ್ರಾಪ್ತ ವಯಸ್ಕರಾದ್ದರಿಂದ ಮರಣದಂಡನೆ ಬದಲು ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಬಂಗಾಳದ ಗವರ್ನರ್‌ಗೆ ಗುಂಡೇಟು ಹಾಕಿ ವಿಫಲಳಾದ **ಬೀನಾದಾಸ್‌**ಗೆ ಜೀವಾವಧಿ ಶಿಕ್ಷೆಯಾಯಿತು. ಇವು ಕೆಲವು ಉದಾಹರಣೆಗಳಷ್ಟೆ. ಹಲವರು ಜೈಲಿನಲ್ಲೇ ಚಿತ್ರಹಿಂಸೆ ಎದುರಿಸಿ ಹುತಾತ್ಮರಾದರು. ಇನ್ನೂ ಕೆಲವರು ಬ್ರಿಟಿಶ್ ಜೈಲುಗಳಿಂದ ಪರಾರಿಯಾಗಿ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು.



ಈ ಅವಧಿಯ ಒಂದು ಗಮನ ಸೆಳೆದ ಘಟನೆಯೆಂದರೆ ಅಂಡಮಾನ್ ಜೈಲಿನಲ್ಲಿ ಬಂಧಿಗಳ ಉಪವಾಸ ಸತ್ಯಾಗ್ರಹ. ತಮ್ಮ ಕೆಲವು ಬೇಡಿಕೆಗಳ ಬಗ್ಗೆ ಬಂಧಿತರು ಮುಖ್ಯ ಕಮಿಶನರ್‌ಗೆ ಬೇಡಿಕೆ ಪತ್ರ ಸಲ್ಲಿಸಿದ್ದರು. ಪುಸ್ತಕ, ಮ್ಯಾಗಝಿನ್‌ಗಳನ್ನು ಓದುವ ಹಕ್ಕು, ಸಾಕಷ್ಟು ಒಳ್ಳೆಯ ಆಹಾರ ಹಾಗೂ ಬೆಳಕು ಇತ್ಯಾದಿ ಒದಗಿಸಬೇಕೆಂಬುದು ಅವರ ಆಗ್ರಹ. ಕಮಿಷನರ್ 'ಸಾಧ್ಯವಿಲ್ಲ' ಎಂದಾಗ ಬಂಧಿತರು ಆಮರಣ ಉಪವಾಸ ಆರಂಭಿಸಿದರು. ಅವರ ಕೈಕಾಲು ಕಟ್ಟಿ ಉಪವಾಸ ಮುರಿಯುವ ಪ್ರಯತ್ನದಲ್ಲಿ ಮೂವರು ಮರಣಗೊಂಡರು. ಈ ಸುದ್ದಿ ಸಮುದ್ರ ದಾಟಿ ಭಾರತ ತಲುಪಿದಾಗ ಎಲ್ಲೆಡೆ - ಪ್ರತಿಭಟನೆಗಳು ನಡೆದವು. ಜನ ಬೀದಿಗಿಳಿದರು. ಕೊನೆಗೆ ಕೆಲವು ಬೇಡಿಕೆಗಳು ಈಡೇರಿದವು. ಸ್ವಲ್ಪ ಸುಧಾರಿತ ಆಹಾರ, ಬೆಳಕು ಹಾಗೂ ಪುಸ್ತಕಗಳು ದೊರೆಯಲಾರಂಭಿಸಿದರು. ಮೂವರು ಸಂಗಡಿಗರನ್ನು ಬಲಿತೆಗೆದುಕೊಂಡ ಮೇಲೆ ಇವನ್ನು ಕೊಡಲಾಯಿತು.

ಮೇರಠ್ ಪಿತೂರಿ ಮೊಕದ್ದಮೆಯಿಂದಾಗಿ ಕಮ್ಯುನಿಸ್ಟ್ ಆಂದೋಲನ ಬಹಳ ಕಷ್ಟಗಳನ್ನು ಎದುರಿಸಬೇಕಾಗಿ ಬಂದು. ಆದರೆ ಮೇರಠ್ ಬಂಧಿಗಳು ಬಿಡುಗಡೆಯಾದ ಕೂಡಲೇ ಪಕ್ಷದ, ಕಾರ್ಮಿಕ ಸಂಘಗಳ ಐಕ್ಯತೆಯನ್ನು ಮತ್ತೆ ಬೆಸೆದರು. ಮುಂಬೈ ಗಿರಣಿ ಕಾರ್ಮಿಕರ ಒಂದು ದೊಡ್ಡ ಮುಷ್ಕರ ಕಾರ್ಯಾಚರಣೆ ನಡೆಯಿತು.

ಬಹಳಷ್ಟು ಕಾಂಗ್ರೆಸ್ ಕಾರ್ಯಕರ್ತರೂ, ಮುಖಂಡರೂ ಕೂಡಾ ಕಾನೂನುಭಂಗ ಚಳುವಳಿಯನ್ನು ಬೇಷರತ್ ವಾಪಸು ಪಡೆದದ್ದನ್ನು ಒಪ್ಪಲಿಲ್ಲ. ಅವರಲ್ಲಿ ಕೆಲವರು ಎಡ ಪಂಥದತ್ತ ವಾಲಲಾರಂಭಿಸಿದರು. ಈ ಹಿನ್ನೆಲೆಯಲ್ಲಿ 19334 ಅಕ್ಟೋಬರ್‌ನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಸ್ಥಾಪನೆಯಾಯಿತು. ಹೆಸರೇ ಸೂಚಿಸುವಂತೆ ಕಾಂಗ್ರೆಸ್ಸಿನ ಚೌಕಟ್ಟಿನೊಳಗೇ ಈ ಪಕ್ಷ ಕೆಲಸ ಮಾಡ ಬಯಸಿತ್ತು.

(ಮುಂದುವರಿಯುವುದು)

ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ನಾಯಕರಾದ ಜಯಪ್ರಕಾಶ್ ನಾರಾಯಣ್ ಮತ್ತು ಆಚಾರ್ಯ ನರೇಂದ್ರ ದೇವ್



ಭಾರತೀಯ ರಿಸರ್ವ್ ಬ್ಯಾಂಕಿನ ತಿರುಮಂತ್ರ



ಯಾರೂ ಕಂಗಾಲಾಗುವ ಅವಶ್ಯಕತೆಯಿಲ್ಲ ಎಂದು ಹೇಳಿದ್ದು ಈ ಭಾರತೀಯ ರಿಸರ್ವ್ ಬ್ಯಾಂಕ್. ಡಾಲರ್‌ನ ಬೆಲೆ ನಲವತ್ತು ರೂಪಾಯಿಗಳನ್ನು ದಾಟಿದಾಗ ಬಂದದ್ದು ಈ ಹೇಳಿಕೆ. ಆದರೆ ಈ ಹೇಳಿಕೆ ನೀಡಿದ ಮರುದಿನವೇ ಭಾರತೀಯ ರಿಸರ್ವ್ ಬ್ಯಾಂಕ್ ತಾನೇ ಕಂಗಾಲಾಗಿದೆ ಎಂಬುದುನ್ನು ಜಗಜ್ಜಾಹೀರುಪಡಿಸಿತು.

ಡಾಲರಿಗೆದುರು ರೂಪಾಯಿಯ ಕುಸಿತವನ್ನು ತಡೆದು ರೂಪಾಯಿಯ ಬೆಲೆ ದೃಢವಾಗುವಂತೆ ಬಡ್ಡಿದರಕ್ಕೆಲ್ಲ ತಳಹದಿಯಾಗಿರುವ ಬ್ಯಾಂಕ್ ದರ (ಭಾರತೀಯ ರಿಸರ್ವ್ ಬ್ಯಾಂಕಿನ ಬಡ್ಡಿ ದರ) ವನ್ನು ಶೇ.9 ರಿಂದ ಶೇ.11 ಕ್ಕೆ ಏರಿಸಿತು. ನಗದು ಮೀಸಲು ಅನುಪಾತವನ್ನು ಈಗಿರುವ ಶೇ 10 ರಿಂದ ಶೇ 10.50 ಕ್ಕೆ ಏರಿಸಿದೆ. ಹೀಗೆ ಹಲವು ಇಂತಹ ಕ್ರಮಗಳನ್ನು ಕೈಗೊಂಡಿದೆ ಭಾರತೀಯ ರಿಸರ್ವ್ ಬ್ಯಾಂಕ್. ಈ ಕ್ರಮಗಳೆಲ್ಲ ಹಣಕಾಸು ವಲಯದ ಉದಾರೀಕರಣದ ಹೆಸರಿನಲ್ಲಿ ಬಂದ ಕ್ರಮಗಳ ತಿರುವು ಮುರುವು.

ಅಂದರೆ? ಅಂದರೆ ಹಿಂದೆ ಮುಂದೆ ನೋಡದೆ ಕೈಗೊಂಡ ಉದಾರೀಕರಣದ ಕ್ರಮಗಳನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯ ಆರ್ಥಿಕಕ್ಕೆ ಇರಲಿಲ್ಲ. ಆದ್ದರಿಂದ ಆರ್ಥಿಕದಲ್ಲಿ ಒಂದಲ್ಲ ಒಂದು ಸಮಸ್ಯೆ ಕಾಡುತ್ತಲೇ ಇದೆ. ಹಾಗೆ ಉದಾರೀಕರಣವೇ ಆರ್ಥಿಕವನ್ನು ಹಾಳುಗೆಡಹುವ ಕ್ರಮ. ಈ ಕ್ರಮಗಳನ್ನು ಈಗ ತೊಡೆದು ಹಾಕಿ ಮೊದಲಿನ ಸ್ಥಿತಿಗೆ ಹೋಗಬೇಕಾದ ಅನಿವಾರ್ಯತೆ.

ಆರ್ಥಿಕದ ಪೂರ್ತಿ ಲಗಾಮು ನಮ್ಮ ಕೈಯಲ್ಲೇ ಇದೆ ಎಂದೆಲ್ಲ ಹೇಳುತ್ತಿದ್ದವರು ಈಗ ರೂಪಾಯಿಯ ಬೆಲೆಯ ಕುಸಿತ ಔದ್ಯಮಿಕ ಸ್ಥಗಿತತೆ, ರಫ್ತು ಬೆಳವಣಿಗೆಯ ಹಿನ್ನಡೆ ಇತ್ಯಾದಿಗಳನ್ನೆಲ್ಲ ಕಂಡು ಕಂಗಾಲಾಗಿರುವುದು ಸ್ಪಷ್ಟ. ಒಂದನ್ನು ಸರಿಪಡಿಸ ಹೊರಟರೆ ಇನ್ನೊಂದು ಹದಗೆಡುತ್ತದೆ. ನೆಗಡಿಗೆ ಔಷಧಿ ತೆಗೆದು ಕೊಂಡರೆ ಜ್ವರ ಬರುತ್ತದೆ. ಜ್ವರಕ್ಕೆ ಔಷಧಿ ತೆಗೆದು ಕೊಂಡರೆ ಭೇದಿ ಶುರು ಎನ್ನುತ್ತಾರಲ್ಲ, ಹಾಗಾಗಿದೆ.

ಈ ಉದಾರೀಕಣವಾದಿಗಳ ಸ್ಥಿತಿ ತಾವೇ ದೇಶಕ್ಕೆ ಬಹಳ ಒಳ್ಳೆಯ ಕ್ರಮಗಳು ಇವೆಂದು ಜಾರಿಗೆ ತಂದ ಕ್ರಮಗಳನ್ನು ಈಗ ತಿರುವು ಮುರುವು ಮಾಡುವ ಪ್ರಸಂಗ. ಅದಕ್ಕಾಗಿಯೇ ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ.ಜಾಲನ್ ಮಹಾಶಯ ಈ ಕ್ರಮಗಳ ಬಗ್ಗೆ ಯಾವುದೇ ವಿವರಣೆ ನೀಡದೆ ಈ ಕ್ರಮಗಳೇ ಅವುಗಳ ಬಗ್ಗೆ ಹೇಳುತ್ತವೆ ಎಂದಿದ್ದಾರೆ.

ಏಶಿಯಾದ ಹುಲಿಳೆನಿಸಿಕೊಂಡ ದೇಶಗಳ ಆರ್ಥಿಕ ಅಲ್ಲೋಲವಾಗಿರುವು ದನ್ನು ಕಂಡು ಉದಾರೀಕರಣ ವಾದಿಗಳು ಭಾರತದಲ್ಲಿ ಇದೇ ಪುನರಾವರ್ತನೆ ಆಗಬಹುದಾದ ಸಾಧ್ಯತೆ ಕಂಡು ಭಯಗೊಂಡಿದ್ದಾರೆ. ಆದ್ದರಿಂದಲೇ ಇಂತಹ ತರಾತುರಿಯ ಕ್ರಮಗಳು ಬಂದಿವೆ.

ಈ ನಡುವೆ ರಫ್ತುದಾರರು ಭಾರತೀಯ ರಿಸರ್ವ್ ಬ್ಯಾಂಕಿನ ಕ್ರಮ ಗಳಿಂದ ದೇಶವೇ ಹಾಳಾಗಿ ಹೋಗುತ್ತದೆಂದು ಬೊಬ್ಬೆ ಹಾಕತೊಡಗಿದ್ದಾರೆ. ಇದು ಸರ್ಕಾರ ಮಾಡಿರುವ ಭಯಂಕರ ಮೋಸ ಎಂದು ಅವರಲ್ಲಿ ಕೇಲವರು ಹೇಳಿದ್ದಾರೆ. ಅವರ ಲಾಭಕ್ಕೆ ಕಲ್ಲು ಬಿದ್ದೀತೆಂಬ ಅಸಮಾಧಾನ ಅವರದು.

ಈ ಕ್ರಮಗಳಿಂದ ರೂಪಾಯಿಯ ಬೆಲೆಯ ಕುಸಿತವಂತೂ ಏರುತ್ತದೆ ಅದಕ್ಕೆ ಮತ್ತೆ ಬಂಡವಾಳಿಗರ ಬೊಬ್ಬೆ ಶುರು. ಮತ್ತದೇ ಕತೆ ನೆಗಡಿ, ಜ್ವರ, ಭೇದಿ.

ಕಾರು ಕೊಳ್ಳಿರೊ ನಿವೆಲ್ಲರೂ(ಉದಾರೀಕರಣವೆಂಬ) ಕಾರು ಕೊಳ್ಳಿರೊ ನೀವೆಲ್ಲರು



ಇದು ಜನವರಿ 15 ರಿಂದ 21 ರವರೆಗೆ ನವದೆಹಲಿಯ ಪ್ರಗತಿ ಮೈದಾನದಲ್ಲಿ ರಣರಣಿಸುವ ಕಾರು - ಅಲ್ಲ ಆಟೊ ಎಕ್ಸ್‌ಪೊ-ಕಾರುಗಳ ಬೃಹತ್ ಪ್ರದರ್ಶನ. ಜಗತ್ತಿನ ಸುಮಾರು ಸಾವಿರ ಮಾದರಿ ಕಾರುಗಳ ಪ್ರದರ್ಶನ. ಭಾರತಕ್ಕೆ ಬಂದು ಕಾರು ಮಾರುಕಟ್ಟೆಯಲ್ಲಿ ವ್ಯಾಪಾರ ವ್ಯವಹಾರ ಪ್ರಾರಂಭಿಸ ಬಯಸುವ ಹಲವರು ಬಂದಿದ್ದಾರೆ-ದಕ್ಷಿಣ ಕೊರಿಯದ ದೇವೂ ಕಂಪನಿ, ಜಪಾನಿನ ಹ್ಯುಂಡ್ಯಾ ಬಂದಿದೆ. ಇನ್ನೂ ಹಲವು ಬಹುರಾಷ್ಟ್ರೀಯ ಕಂಪನಿಗಳು ಬಂದಿವೆ.

ಎಲ್ಲೆಲ್ಲೂ ಕಾರುಗಳದ್ದೇ ಕಾರುಬಾರು ವಿವಿಧ ಅನುಕೂಲ ಆಕರ್ಷಣೆಗಳುಳ್ಳ ಮಾದರಿಗಳು-ಕುಳಿತುಕೊಳ್ಳಲು, ಕಾಲು ಚಾಚಲು, ಸಂಗೀತ ಕೇಳಲು ಅಪಘಾತವಾದಾಗ ತಡೆದುಕೊಳ್ಳುವ ಸಾಮರ್ಥ್ಯವಿರುವ ಇತ್ಯಾದಿ ಗುಣಗಳ ಕಾರುಗಳು ಒಂದಕ್ಕಿಂತ ಒಂದು ಚೂಟಿ. ಈ ಸಂತೆಯೊಳಗೆ ಹೋದರೆ ಮರುಳು ಹಿಡಿದೀತು.

ಆದರೆ ಇಷ್ಟು ದೊಡ್ಡ ಕಾರುಗಳ ಪ್ರದರ್ಶನ ನಮಗೆ ಬೇಕೆ? ದೇಶದ ಶೇ. 40 ಕ್ಕೂ ಹೆಚ್ಚು ಜನ ಬಡತನ ರೇಖೆಗಿಂತ ಕೆಳಗಿರುವಾಗ ಇಂದು ಶೇ.36 ಕ್ಕಿಂತ ಹೆಚ್ಚು ಜನ ಅನಕ್ಷರಸ್ಥರಿರುವಾಗ, ಆರೋಗ್ಯ ಶಿಕ್ಷಣ ಆಹಾರ ವಸತಿ ಇತ್ಯಾದಿ ಸಮಸ್ಯೆಗಳಿರುವಾಗ ಈ ಸಮಸ್ಯೆಗಳತ್ತ ಗಮನ ಹರಿಸವವರಾರು ಇಲ್ಲ. ಆದರೆ ಈ ಕಾರು ಪ್ರದರ್ಶನಕ್ಕೆ ಕಾರು ಮಾರಾಟಕ್ಕೆ ಎಂತಹ ಅಬ್ಬರಾಟ! ಭಾರತದ ಶೇ 10 ರಷ್ಟು ಜನರಾದರೂ ಕಾರು ಕೊಳುವ ಸಾಮರ್ಥವಿರುವವರು ಎಂದೇ ಇಟ್ಟು ಕೊಳ್ಳೋಣ. ಈ ಶೇ.10 ರಷ್ಟಿರುವ ಜನರಿಗಾಗಿ ಎಂತಹ ವೈಭವ! ಉಳಿದ ವರಿಗೆ ಅಂದರೆ ಶೇ 90 ರಷ್ಟು ಜನಕ್ಕೆ ಅವಶ್ಯಕವಾದದ್ದಲ್ಲ-ಇದು ಎಟುಕುವಂತಹದ್ದು ಅಲ್ಲ.

ನಮ್ಮದು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಎಂದು ಹೆಮ್ಮೆಯಿಂದ ಹೇಳಿಕೊಳ್ಳಲಾಗುತ್ತದೆ. ಆದರೆ ಬಂಡವಳ ಶಾಹಿ ಪ್ರಜಾಪ್ರಭುತ್ವವೆಂದರೆ ಶೇ 10 ಕ್ಕೂ ಕಡಿಮೆ ಜನರ ಹಿತಕ್ಕಾಗಿ ಶೇ 90 ರಷ್ಟು ಜನರ ಹಿತವನ್ನು ಬಲಿಕೊಡುವ ಪ್ರಜಾಪ್ರಭುತ್ವ ಇದು. ತಮಾಷೆಯಲ್ಲವೇ ಇದು!

ಈ ನಡುವೆ ಇದೇ ಸಂದರ್ಭದಲ್ಲಿ ನಮ್ಮ ದೊಡ್ಡ ಬಂಡವಾಳಿಗ ಟಾಟಾ ತಮ್ಮ ಮಿಂಟ್ ಎಂಬ ಹೊಸಕಾರನ್ನು ಪ್ರದಶನಕ್ಕೆ ಬಿಟ್ಟಿದ್ದಾರೆ.

ಭಾರತದಲ್ಲಿ ಕಾರು ಮಾರಾಟದ ಯುದ್ಧ ಪ್ರಾರಂಭವಾಗುವುದಂತೂ ಖಾತ್ರಿ.

○

ರೂಪಾಯಿಯ ಗೋಳು

ರೂಪಾಯಿಯ ಗೋಳೆಂದರೆ ಬರೀ ರೂಪಾಯಿಗೆ ಸಂಬಂಧಪಟ್ಟದ್ದೆಂದು ಕೊಳ್ಳಬೇಡಿ ಇದು ಭಾರತದ ಜನ ಸಾಮಾನ್ಯರ ಗೋಳೂ ಆಗಿರುತ್ತದೆ. ಆಗ್ನೇಯ ಏಶ್ಯಾದ ದೇಶದ ಆರ್ಥಿಕಗಳು ಮುಳುಗುತ್ತಿರುವಾಗ ಇಲ್ಲಿ ರೂಪಾಯಿ ಕುಸಿಯುತ್ತಲೇ ಹೋಗುತ್ತಿದೆ. ಈಗ ಅದು ಡಾಲರಿಗೆ ನಲವತ್ತರ ಗಡಿ ದಾಟಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯವೂ ಬೆಚ್ಚಿಬೀಳುವಂತೆ ಮಾಡಿದೆ. ರೂಪಾಯಿಯ ಬೆಲೆಯ ಕುಸಿತದಿಂದ ತಮಗೆ ಲಾಭವಾಗುತ್ತದೆಂದು ಕೂಗುತ್ತಿದ್ದವರು ರಫ್ತುದಾರರು. ಅವರಿಗೆ ರೂಪಾಯಿಯ ಬೆಲೆ ಕುಸಿದಷ್ಟು ಒಳ್ಳೆಯದು. ಆದರೆ ಈವರೆಗೆ ಆಗಿರುವ ಕುಸಿತದಿಂದ ಯಾವುದೇ ಲಾಭ ಆಗಿಲ್ಲವೆಂದು ಅಂಬೋಣ. ಯಾಕೆಂದರೆ ಈ ಏಶಿಯಾದ ಹುಲಿಗಳೆನಿಸಿದ ಕೊರಿಯಾ ಇಂಡೋನೇಶಿಯಾ ಇತ್ಯಾದಿ ದೇಶಗಳ ನಾಣ್ಯಗಳ ಬೆಲೆ ಡಾಲರಿಗೆದುರು ಪಾತಾಳ ಕಂಡಿರುವುದರಿಂದ ಅಲ್ಲಿಯ ಸರಕುಗಳು ಅಪಾರ ಅಗ್ಗವಾಗಿ ಅವುಗಳ ಸ್ಪರ್ಧಾತ್ಮಕತೆ ತೀರ ಹೆಚ್ಚಿದೆ (ಇದರ ನೋವನ್ನು ಆ ದೇಶಗಳ ಜನತೆ ಅನುಭವಿಸುತ್ತಿದ್ದರೆ ಎಂಬುದು ಬೇರೆ ಮಾತ್ರ) ಆದ್ದರಿಂದ ನಮ್ಮ ರಫ್ತುಗಾರರಿಗೆ ಲಾಭವಾಗಿಲ್ಲ. ರೂಪಾಯಿಯ ಬೆಲೆ ಇನ್ನೂ ಕುಸಿಯಬೇಕೆಂಬುದೇ ಅವರ ಬಯಕೆ.

ದೇಶದ ಆರ್ಥಿಕ ಯಾರ ಹತೋಟಿಯಲ್ಲೂ ಇರುವಂತೆ ಕಾಣುವುದಿಲ್ಲ. ಸರ್ಕಾರ ಕೈಗೊಂಡ ಕ್ರಮವೂ ಒಂದೊಂದು ತರಹದ ದುಷ್ಪರಿಣಾಮವನ್ನು ಬೀರುತ್ತಿದೆ.

ಹೀಗೆ ರೂಪಾಯಿಯ ಗೋಳು ಜನತೆಯ ಗೋಳಾಗಿ ಪರಿಣಮಿಸುತ್ತಿದೆ ಉದಾರೀಕರಣವಾದಿಗಳು ಇವೆಲ್ಲವಕ್ಕೂ ಕಾರಣಗಳನ್ನು ತಮ್ಮ ಮೂಗಿನ ನೇರಕ್ಕೆ ಹುಡುಕುತ್ತಿರುವುದರಿಂದ ಸಮಗ್ರ ಪರಿಹಾರದ ಸುಳಿವೂ ಅವರಿಗೆ ಸಿಗುತ್ತಿಲ್ಲ.

ಇದಲ್ಲದೆ ಬಂಡವಾಳ ಶಾಹಿಯ ಬಿಕ್ಕಟ್ಟು!


ಮೂಡಿಯ ಮಾನ ಉಳಿಸಿಕೊಳ್ಳುವತಂತ್ರ

ಅಂತರ್ರಾಷ್ಟ್ರೀಯ ರೇಟಿಂಗ್ ಕಂಪನಿ ಮೂಡಿಸ್ ಭಾರತವನ್ನು ತನ್ನ ಸಮೀಕ್ಷೆಗೆ ಒಳಪಡಿಸಿ ರೇಟನ್ನು ಕೆಳಗಿಳಿಸಿರುವುದು ಗೊತ್ತಲ್ಲ. ಇದು ಇಂತಹ ಕ್ರಮ ಕೈಗೊಳ್ಳಲು ಬಹಳ ಪ್ರಬಲವಾದ ಕಾರಣವೇ ಇದೆಯಂತೆ. ಆ ಕಾರಣವೇನು ಗೊತ್ತೆ? ಏಶಿಯಾದ ದೇಶಗಳ ಆರ್ಥಿಕ ತಳಮಳವನ್ನು ಗ್ರಹಿಸಿ ವರದಿ ಮಾಡವಲ್ಲಿ ಅದು ವಿಫಲವಾಯಿತೆಂದು ಪಾಶ್ಚಿಮಾತ್ಯ ದೇಶಗಳಲ್ಲಿ ಈ ಕಂಪನಿಯ ಬಗ್ಗೆ ಟೀಕೆಗಳು ಬರುತ್ತಿವೆಯಂತೆ. ಅಭಿವೃದ್ಧಿ ಹೊಂದಿದ ದೇಶವನ್ನು ಬಂಡವಾಳಿಗರ ಬೇರೆ ಬೇರೆ ದೇಶಗಳಲ್ಲಿ ಹಣ ಹೂಡಬಹುದೊ ಬೇಡವೊ ಎನುವುದನ್ನು ಈ ಮೂಡಿಸ್ ನ ರೇಟಿಂಗ್ ನಿಂದ ನಿರ್ಧರಿಸುವುದರಿಂದ ಈ ಬಂಡವಾಳಿಗರಿಗೆ ಇದು ಬಹಳ ಮುಖ್ಯ.

ಆಗ್ನೇಯ ಏಶಿಯಾದ ದೇಶಗಳಲ್ಲಿ ಹಣ ಹೂಡಿ ಕಳೆದುಕೊಂಡವರು ಈಗ ಮೂಡಿಸ್ ಅನ್ನು ಮಾದಲಿಸತೊಡಗಿದ್ದಾರೆ. ಅದಕ್ಕಾಗಿಯೇ ಬಹಳ ವಸ್ತುನಿಷ್ಠ ಮತ್ತು ನಿಷ್ಠುರ ಎಂದು ತೋರಿಸಿ ಕೊಳ್ಳಲು ಅದು ಭಾರತವನ್ನು ಸಮೀಕ್ಷೆಗೊಳಪಡಿಸಬೇಕಾದ ದೇಶವೆಂಬ ನಿಲುವು ತಾಳಿದೆ. ಕಳೆದು ಹೋದ ಮಾನವನ್ನು ಪುನ ಪಡೆಯಬೇಕಲ್ಲ.

ಅಂದ ಹಾಗೆ ಈ ಮೂಡಿಸ್ ಭಾರತ ರೇಟಿಂಗ್ ಕೆಳಗಿಳಿದುದರಿಂದ ಭಾರತದೊಳಕ್ಕೆ ವಿದೇಶೀ ಹೂಡಿಕೆ ಹರಿದು ಬರುವುದು ಕಡಿಮೆ ಆಗುತ್ತದೆ ಎಂದು ಆಗಲೇ ಹೇಳಲಾಗುತ್ತಿದೆ. ಹೇಗಿದೆ ಉದಾರೀಕರಣದ ಈ ವಿಷವರ್ತುಲ

○



ಎಡಪಕ್ಷಗಳಿಗೆ ಮತ ನೀಡುವುದೆಂದರೆ ಬಲಿಷ್ಠ ಜಾತ್ಯಾತೀತ ಪ್ರಜಾಪ್ರಭುತ್ವ ವ್ಯವಸ್ಥೆಗೆ, ಸಾಮಾಜಿಕ-ಆರ್ಥಿಕ ನ್ಯಾಯಕ್ಕೆ ಭ್ರಷ್ಟಾಚಾರ - ಮುಕ್ತ ಆಡಳಿತಕ್ಕೆ ಜನಾದೇಶ



ಎಡಪಕ್ಷಗಳ ಚುನಾವಣಾ ಪ್ರಣಾಳಿಕೆ

"ಭಾರತದ ಜನತೆ ಮತ್ತೊಮ್ಮೆ ಹೊಸದೊಂದು ಲೋಕಸಭೆಯನ್ನು ಆರಿಸಬೇಕಾಗಿದೆ. ಈ ಮಧ್ಯಾವಧಿ ಮತದಾನ ಸಂಯುಕ್ತ ರಂಗ ಸರಕಾರಕ್ಕೆ ಬೆಂಬಲ ಹಿಂತೆಗೆದುಕೊಳ್ಳುವ ಕಾಂಗ್ರೆಸ್ಸಿನ ತರ್ಕಹೀನ, ಬುದ್ಧಿ ಹೀನ ನಿರ್ಣಯದಿಂದಾಗಿ ದೇಶದ ಮೇಲೆ ಹೇರಲ್ಪಟ್ಟಿದೆ. ನಾವು ಈಗ ಭಾರತದ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ಜನತೆ ನಮ್ಮ ಈ ಗಣತಂತ್ರವನ್ನು ಮತ್ತು ಎಲ್ಲಾ ನಾಗರೀಕರ ಆಕಾಂಕ್ಷೆಗಳನ್ನು ಈಡೇರಿಸಬಲ್ಲ ಅದರ ಜಾತ್ಯಾತೀತ - ಪ್ರಜಾಪ್ರಭುಚತ್ವ ಆಧಾರವನ್ನು ಹೇಗೆ ಬಲಿಷ್ಠಗೊಳಿಸುವುದು ಎಂದು ನಿರ್ಧರಿಸಬೇಕಾಗಿದೆ" ಎಂದು ಆರಂಭವಾಗಿರುವ ದೇಶದ ನಾಲ್ಕು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ. ಹಾಗೂ ಫಾರ್ವರ್ಡ್ ಬ್ಲಾಕ್ ಚುನಾವಣಾ ಪ್ರಣಾಳಿಕೆ ದೇಶದ ಆಗು-ಹೋಗುಗಳ ಬಗ್ಗೆ ಪ್ರಾಮಾಣಿಕ ಕಾಳಜಿ ಹೊಂದಿರುವವರೆಲ್ಲರ ಗಮನ ಸೆಳೆದಿದೆ.

ಮೊತ್ತಮೊದಲ ಬಾರಿಗೆ ಎಡಪಕ್ಷಗಳೆಲ್ಲಾ ಒಟ್ಟಾಗಿ ಸೇರಿ ಇಂತಹ ಒಂದು ಚುನಾವಣಾ ಪ್ರಣಾಳಿಕೆಯನ್ನು ಹೊರಡಿಸಿರುವುದು ಒಂದು ಮಹತ್ವಪೂರ್ಣ ಬೆಳವಣಿಗೆ; ದೇಶದ ರಾಜಕಾರಣಕ್ಕೆ ಜನ-ಪರ ದಿಕ್ಕು ನೀಡುವತ್ತ ಒಂದು ಪ್ರಮುಖ ಹೆಜ್ಜೆ.

ಬಿಜೆಪಿಯ ಉದಯದ ಹಿಂದಿರುವ ಪ್ರತಿಗಾಮಿ ಅಂಶಗಳನ್ನು, ಕಾಂಗ್ರೆಸ್ ಹೇಗೆ ಅವನೀತಶೀಲವಾದ ಪಕ್ಷ ಎಂಬುದನ್ನು 'ಮೊದಲ ಮಾತಿ'ನಲ್ಲಿ ವಿವರಿಸಿರುವ ಪ್ರಣಾಳಿಕೆ 'ಹೊಸದೊಂದು ಪರ್ಯಾಯದ ಅಗತ್ಯವಿದ್ದಾಗ ಕಳಂಕಿತವಾದ ಕಾಂಗ್ರೆಸ್‌ಗೆ ಒಂದು ಪರ್ಯಾಯವಾಗಿ ಬಿಜೆಪಿಯ ಕೋಮುವಾದಿ ವೇದಿಕೆಗೆ ಒಂದು ಧೃಢ ಜಾತ್ಯಾತೀತ ಪ್ರತಿಸ್ಪಂದನವಾಗಿ ಸಂಯುಕ್ತ ರಂಗ ಅಸ್ತಿತ್ವಕ್ಕೆ ಬಂತು. ಮುಂಬರುವ ದಿನಗಳಲ್ಲಿ ಸಮ್ಮಿಶ್ರ ಸರಕಾರಗಳೇ ಭಾರತದಲ್ಲಿ ಆಳ್ವಿಕೆ ನಡೆಸುವಂತದ್ದು. ಆದ್ದರಿಂದ ಇಲ್ಲಿರುವ ಪ್ರಶ್ನೆ ಯಾವ ವಿಧದ ಸಮ್ಮಿಶ್ರ ಸರಕಾರ ಎಂಬುದೇ. ಸಂಯುಕ್ತ ರಂಗ ತಾನು ಭಾರತದ ಜನಗಳ ಶ್ರೀಮಂತ ವೈವಿಧ್ಯತೆಯನ್ನು ಪ್ರತಿನಿಧಿಸುವ ಒಂದು ಐಕ್ಯ ಹಾಗೂ ಸ್ಥಿರ ಸಮ್ಮಿಶ್ರ ರಂಗ ಎಂದು ಸಾಬೀತು ಪಡಿಸಿದೆ" ಎಂದು ಹೇಳುತ್ತಾ ಇಂತಹ ಸಂದರ್ಭದಲ್ಲಿ ಎಡ ವೇದಿಕೆಯೊಂದರ ಮಹತ್ವಪೂರ್ಣ ಪಾತ್ರವನ್ನು ಸಂಕ್ಷಿಪ್ತವಾಗಿ ಹೇಳಿದೆ - "ಎಡಪಕ್ಷಗಳು ಸಂಯುಕ್ತ ರಂಗವನ್ನು ಬಲಿಷ್ಠಗೊಳಿಸಲು, ಜಯಶೀಲವಾಗಿಸಲು ಶ್ರಮ ಪಡುವುದರೊಂದಿಗೇ ತಮ್ಮ ಪರ್ಯಾಯ ನೀತಿಗಳನ್ನು ಹಾಗೂ ಭಾರತವನ್ನು ಒಂದು ಹುರುಪು ತುಂಬಿಕೊಂಡ ಸ್ಪಂದನಶೀಲ ಪ್ರಜಾಸತ್ತಾತ್ಮಕ ಹಾಗೂ ನ್ಯಾಯಪೂರ್ಣ ಸಮಾಜವನ್ನಾಗಿ ಮಾಡುವ ದಾರಿಯನ್ನು ಜನತೆಯು ಮುಂದಿಡ ಬಯಸುತ್ತದೆ" ಎನ್ನುತ್ತಾ ಈ ಪ್ರಣಾಳಿಕೆಯನ್ನು ಜನತೆಯ ಮುಂದಿಟ್ಟಿದೆ.

ನಾಲ್ಕು ವಿಭಾಗಗಳು

ಈ ಚುನಾವಣೆಯಲ್ಲಿ ಪ್ರಧಾನ ಪ್ರಶ್ನೆಗಳನ್ನು ಜನಗಳ ಮುಂದಿಟ್ಟಿರುವ ಎಡಪಕ್ಷಗಳ ಈ ಪ್ರಣಾಳಿಕೆ ನಾಲ್ಕು ಭಾಗಗಳಲ್ಲಿ ಇವನ್ನು ಪ್ರಸ್ತಾಪಿಸಿ ಈ ಬಗ್ಗೆ ಎಡಪಕ್ಷಗಳ ಕಣ್ಣೋಟವನ್ನು ಹಾಗೂ ಕಾರ್ಯಕ್ರಮವನ್ನು ಪಟ್ಟಿ ಮಾಡಿದೆ.

ಈ ನಾಲ್ಕು ವಿಭಾಗಗಳೆಂದರೆ -

1. ಜಾತ್ಯಾತೀತತೆ ಹಾಗೂ ಒಕ್ಕೂಟ ತತ್ವ- ಭಾರತೀಯ ಐಕ್ಯತೆಯ ಮೂಲಾಧಾರ

2. ಒಂದು ಪರ್ಯಾಯ ಆರ್ಥಿಕ ಧೋರಣೆಗಾಗಿ

3. ನಾಗರೀಕರ ಬಾಳನ್ನು ಉತ್ತಮಗೊಳಿಸಲು

4. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಲು

ಸುಪ್ರೀಂಕೋರ್ಟ್ ಸಂವಿಧಾನದ ಒಂದು ಮೂಲಭೂತ ಅಂಶ ಎಂದಿರುವ ಜಾತ್ಯಾತೀತತೆ ಕೋಟಿಗಟ್ಟಲೆ ಜನಗಳ ದೈನಂದಿನ ಜೀವನದ ಅನುಭವದ ಭಾಗವಾಗಿರುವ ಒಂದು ವಾಸ್ತವ ಸಂಗತಿ. ಏಕೆಂದರೆ ಈ ಕೋಟ್ಯಾಂತರ ಜನ ಜಾತಿ, ಮತ, ಸಂಪ್ರದಾಯಗಳ ಭೇದವಿಲ್ಲದೆ ಸಾಮರಸ್ಯದಿಂದ ಕೆಲಸ ಮಾಡುತ್ತಿದ್ದಾರೆ, ಬಾಳುತ್ತಿದ್ದಾರೆ. ಆದರೆ ಬಿಜೆಪಿ ಮತ್ತು ಅದರ ಗುರು ಆರ್.ಎಸ್.ಎಸ್. ಪ್ರತಿನಿಧಿಸುವ ಶಕ್ತಿಗಳಿಂದಾಗಿ ಈ ತತ್ವದ ಮೇಲೆ ಹಲ್ಲೆಯಾಗುತ್ತಿದೆ. ನಮ್ಮ ರಾಜಕೀಯ ವ್ಯವಸ್ಥೆಯ ಜಾತ್ಯಾತೀತ ಆಧಾರದ ಮೇಲೆ ಧಾಳಿ ಮಾಡುವ ಶಕ್ತಿಗಳೊಂದಿಗೆ ರಾಜಿ ಎಂದೆಂದಿಗೂ ಸಾಧ್ಯವಿಲ್ಲ ಎಂದು ಪುನರುಚ್ಚರಿಸುವ ಪ್ರಣಾಳಿಕೆ ಈ ಬಗ್ಗೆ ತನ್ನ ನಿಲುವನ್ನು ಮೂರ್ತ ರೀತಿಯಲ್ಲಿ ಮುಂದಿಟ್ಟಿದೆ.

ಎಡಪಕ್ಷಗಳು ಭಾರತೀಯ ಐಕ್ಯತೆಯ ಬಗ್ಗೆ ಪರ್ಯಾಯ ಕಣ್ಣೋಟ ಹೊಂದಿವೆ. ಇದು ಎಲ್ಲಾ ಅಧಿಕಾರಗಳು ಕೇಂದ್ರದಲ್ಲೇ ಇರುವ ಪ್ರಜಾಪ್ರಭುತ್ವ ವಿರೋಧಿ ಕಣ್ಣೋಟಕ್ಕೆ ತದ್ವಿರುದ್ಧವಾದದ್ದು, ಒಕ್ಕೂಟ ತತ್ವವನ್ನು ಎತ್ತಿ ಹಿಡಿಯುವ ಕಣ್ಣೋಟವಿದು. ಈಗಿನ ಮೂರ್ತ ಪರಿಸ್ಥಿತಿಯಲ್ಲಿ ಒಕ್ಕೂಟವಾದದ ಅರ್ಥವೇನು ಎಂದು ನಾಲ್ಕು ಪ್ರಸ್ತಾಪಗಳ ಮೂಲಕ ಈ ಪ್ರಣಾಳಿಕೆ ಸ್ಪಷ್ಟ ಪಡಿಸಿದೆ.

ಪ್ರತ್ಯೇಕತೆಯ, ಪರಕೀಯತೆಯ ಭಾವನೆಯನ್ನು ತೊಡೆದು ದೇಶದ ಐಕ್ಯತೆಯನ್ನು ಬಲಿಷ್ಠಗೊಳಿಸುವುದು ಅಗತ್ಯ ಎಂದಿರುವ ಪ್ರಣಾಳಿಕೆ ಇಂತಹ ಭಾವನೆಗಳನ್ನು ತೊಡೆದು ಹಾಕುವ ನಿರ್ದಿಷ್ಟ ಕ್ರಮಗಳನ್ನು ಪಟ್ಟಿ ಮಾಡಿದೆ. ಈ ಸಂದರ್ಭದಲ್ಲೇ ವಿದೇಶಾಂಗ ಧೋರಣೆಯ ಬಗ್ಗೆಯೂ ಎಡಪಕ್ಷಗಳ ನಿಲುವನ್ನು ವಿಷದ ಪಡಿಸುತ್ತಾ ಸಾಮ್ರಾಜ್ಯಶಾಹಿಗಳ ಪಿತೂರಿ, ತಂತ್ರಗಳಿಗೆ, ಒತ್ತಡಗಳಿಗೆ ಶರಣಾಗದೆ ದೇಶದ ಸ್ವತಂತ್ರ ಸ್ಥಾನಮಾನವನ್ನು ಉಳಿಸಿಕೊಳ್ಳುವುದು, ದೇಶದ ಹಿತಾಸಕ್ತಿಗಳನ್ನು ರಕ್ಷಿಸುವುದು ವಿದೇಶಾಂಗ ನೀತಿಯ ಮುಖ್ಯ ಅಂಶ ಎಂದಿದೆಯಲ್ಲದೆ ಈ ದಿಕ್ಕಿನಲ್ಲಿ ಸಂಯುಕ್ತ ರಂಗ ಪ್ರಶಂಸಾರ್ಹ ಹೆಜ್ಜೆಗಳನ್ನಿಟ್ಟಿದೆ ಎಂದೂ ಪ್ರಣಾಳಿಕೆ ಹೇಳಿದೆ. ಈ ವಲಯದಲ್ಲೂ ಎಡಪಕ್ಷಗಳ ನಿರ್ದಿಷ್ಟ ಕಾರ್ಯಕ್ರಮವನ್ನು ಈ ಪ್ರಣಾಳಿಕೆ ಜನಗಳ ಮುಂದೆ ಇಟ್ಟಿದೆ.

ಆರ್ಥಿಕ ಸುಧಾರಣೆಗಳಿಗೆ ಒಂದು ಭಿನ್ನ ದಿಕ್ಕು

ಎರಡನೇ ಭಾಗದಲ್ಲಿ ಸ್ವಾತಂತ್ರ್ಯದ 50 ವರ್ಷಗಳ ನಂತರವೂ 40 ಕೋಟಿ ಭಾರತೀಯರು ದಟ್ಟ ದರಿದ್ರರಾಗಿರುವ ಕಟು ವಾಸ್ತವತೆಯನ್ನು ನೆನಪಿಸಿರುವ ಪ್ರಣಾಳಿಕೆ ಐಎಂಎಫ್-ವಿಶ್ವಬ್ಯಾಂಕ್ ಹೇರಿದ ಮಾದರಿಯಲ್ಲಿ ದೇಶದ ಆರ್ಥಿಕ ಬೆಳವಣಿಗೆಯ ಆದ್ಯತೆಗಳನ್ನು ಬಹುಪಾಲು ಜನಸಾಮಾನ್ಯರ ಹಿತಾಸಕ್ತಿಗಳನ್ನು ಗಮನಿಸದೆ, ಕೇವಲ ಒಂದು ದೇಶಿ-ವಿದೇಶೀ ಶ್ರೀಮಂತ ಸಂಕುಚಿತ ವಿಭಾಗದ ಪ್ರಯೋಜನದ ಆಧಾರದ ಮೇಲಷ್ಟೇ ನಿರ್ಧರಿಸಲಾಗುತ್ತಿದೆ ಎನ್ನುತ್ತಾ ಈ ಧೋರಣೆಗಳಿಂದ ಕೇವಲ 10% ಉಳಿದ 90% ಜನರ ಹೊಟ್ಟೆ ಬಡಿದು ಸಿರಿವಂತರಾಗುತ್ತಿದ್ದಾರೆ ಎಂದು ಖೇದ

ಪುಟ 5 ನೋಡಿ

ಇದು ಎಡಪಕ್ಷಗಳ ಗೆಲುವು

- ಎನ್.ಕೆ.ಉಪಾಧ್ಯಾಯ

ಲೋಕಸಭೆ, ವಿಧಾನ ಸಭೆ ಚುನಾವಣೆಗಳು ಬಂದಾಗ ಚುನಾವಣೆಯಲ್ಲಿ ಸ್ಪರ್ಧಿಸುವ ರಾಜಕೀಯ ಪಕ್ಷಗಳೆಲ್ಲ ತಾವು ಅಧಿಕಾರಕ್ಕೆ ಬಂದರೆ ದೇಶ ಹಾಗೂ ಜನತೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸುತ್ತೇವೆ, ಅವುಗಳ ಪರಿಹಾರಕ್ಕೆ ಯಾವ ಕ್ರಮಕೈಗೊಳ್ಳುತ್ತೇವೆ, ಯಾವ ಸಮಸ್ಯೆಗಳು ಅತಿಮುಖ್ಯವಾಗಿರುತ್ತವೆ, ಯಾವ ಯಾವ ಸಮಸ್ಯೆಗಳಿಗೆ ತುರ್ತು ಪರಿಹಾರವನ್ನು ಯಾವ ರೀತಿ ಒದಗಿಸಲಾಗುವುದೆಂಬುದನ್ನು ವಿವರಿಸಿ ತಂತಮ್ಮ ಪಕ್ಷಗಳ ನಿಲುಮೆಗಳನ್ನು ಮತದಾರರ ಮುಂದಿಟ್ಟು, ಅವರಿಂದ ಮತಯಾಚಿಸಲು ಚುನಾವಣಾ ಪ್ರಣಾಳಿಕೆಗಳನ್ನು ಬಿಡುಗಡೆ ಮಾಡುತ್ತಿರುವುದು ರೂಢಿಯಲ್ಲಿರುವ ಸಂಗತಿ. ಮತದಾರರನ್ನು ಆಕರ್ಷಿಸುವ ಸಲುವಾಗಿ "ಗರೀಬಿ ಹಟಾವೋ" "ಪುಕ್ಕಟೆ ಬಂಗಾರದ ತಾಳಿ, ವಧುವರರಿಗೆ, ಪುಕ್ಕಟೆಯಾಗಿ ಸೀರೆ ಧೋತರದಂತಹ ಘೋಷಣೆಗಳಿಗೆ ಪ್ರಾಧಾನ್ಯತೆ ನೀಡಲಾಗುತ್ತಿತ್ತು. ಹಾಗೆಯೆ ಹಿಂದುತ್ವದ ಹೆಸರಲ್ಲಿಯೂ ಮತಗಳಿಸಿ ಬಿಜೆಪಿ ತನ್ನ ಬಂಡವಾಳವನ್ನು ಇಮ್ಮಡಿಗೊಳಿಸಿಕೊಂಡಿತು. ದೇಶ ಹಾಗೂ ಜನತೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಯಾವ ರೀತಿಯ ಪರಿಹಾರ ಒದಗಿಸಿಕೊಡಲಿಕ್ಕೆ ಸಾಧ್ಯತೆ ಇದೆಂಬುದನ್ನು ವಿವರಿಸುವ ಎಡಪಕ್ಷಗಳ ಚುನಾವಣಾ ಪ್ರಣಾಳಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ, ಪ್ರಚಾರ ಸಿಗುತ್ತಿರಲಿಲ್ಲ. ಯಾಕೆಂದರೆ ಅವುಗಳಲ್ಲಿ ಜನರಿಗೆ ಮೋಸ ಮಾಡುವ ತಂತ್ರಗಳಿರುವುದಿಲ್ಲ. ಆದ್ದರಿಂದ ಅದು ಅಷ್ಟು ಆಕರ್ಷಿತವಾಗುತ್ತಿರಲಿಲ್ಲ. ಬಂಡವಾಳಶಾಹಿ ಪತ್ರಿಕೆಗಳಿಗೆ ಎಡಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲಿರುವ ವಸ್ತುನಿಷ್ಠ ವಿಶೇಷ ಪ್ರಚಾರ ನೀಡುವ ಮನಸ್ಸು ಇರುತ್ತಿರಲಿಲ್ಲ. ಆ ರೀತಿ ಎಡಪಕ್ಷಗಳ ಘೋಷಣೆಗೆ ಪ್ರಚಾರ ನೀಡಿ ತಮ್ಮ ವರ್ಗದ ಕಾಲಮೇಲೆ ಕಲ್ಲು ಹಾಕಿಸಿಕೊಳ್ಳಲು ಆ ಪತ್ರಿಕೆಗಳು ಹಿಂದೇಟು ಹಾಕುತ್ತಿದ್ದವು. ಈಗ ಕಾಲ ಬದಲಾಗುತ್ತಿದೆ, ಇನ್ನೂ ಬದಲಾಗುತ್ತದೆಂಬುದನ್ನು ಕೆಲವು ಪತ್ರಿಕೆಗಳಾದರೂ ಮನಗಂಡಿರುವುದು ಸ್ವಾಗತಾರ್ಹ.

ಇಷ್ಟು ಸಲ ನಡೆದ ಚುನಾವಣೆಗಳಲ್ಲಿ ಎಡಪಕ್ಷಗಳು ಸಿ.ಪಿ.ಐ (ಎಂ), ಸಿ.ಪಿ.ಐ, ಪುರೋಗಾಮಿ ಪಕ್ಷ ಮತ್ತು ಆರ್.ಎಸ್.ಪಿ ಪಕ್ಷಗಳು ತಮ್ಮ ಪಕ್ಷಗಳ ಪ್ರತ್ಯೇಕವಾದ ಚುನಾವಣಾ ಪ್ರಣಾಳಿಕೆಗಳನ್ನೇ ಜನರ ಮುಂದಿಡುತ್ತಿದ್ದವು. ಈ ಸಲ ಇದರಲ್ಲಿ ಬದಲಾವಣೆ ಬಂದಿದೆ. ೧೯೯೬ ಚುನಾವಣೆಯ ನಂತರ ಕೇಂದ್ರದಲ್ಲಿ ಬಿಜೆಪಿ, ಕಾಂಗ್ರೆ ವಿರುದ್ಧ ಸಂಯುಕ್ತರಂಗ ಸರಕಾರ ಅನುಸರಿಸಬೇಕಾದ ನೀತಿ ನಿರೂಪಣೆ ಕುರಿತು ಕನಿಷ್ಠ ಕಾರ್ಯಕ್ರಮ ರೂಪಿಸಲಾಗಿತ್ತು, ಆದರೆ ಸರಕಾರದ ನೀತಿ, ಅದರಲ್ಲಿಯೂ ಆರ್ಥಿಕ, ಕೈಗಾರಿಕಾ ಮಂತ್ರಿಗಳ ನೀತಿ ಇದರ ಅಪಾರ್ಥವಾಗಿಯೇ ಮುಂದುವರಿಯಿತು, ಅವನ್ನೆಲ್ಲಾ ವಿರೋಧಿಸಿ ಜನಪರಗೊಳಿಸುವ ಹಾಗೆಯೇ ಕನಿಷ್ಠ ಕಾರ್ಯಕ್ರಮದಲ್ಲಿ ನಮೂದಿಸಲಾದ ಮಹಿಳಾ ಮೀಸಲಾತಿ, ಕೃಷಿಕಾರ್ಮಿಕರಿಗೆ ಕನಿಷ್ಠ ಕೂಲಿ ಇತ್ಯಾದಿ ಜನ-ಪರ ಆಶ್ವಾಸನೆಗಳನ್ನು ಕಡೆಗಣಿಸಿ, ಹಿಂದಿನ ಕಾಂಗ್ರೆ ಸರಕಾರದ ಆರ್ಥಿಕ ನೀತಿಗಳನ್ನೇ ಅದಕ್ಕಿಂತ ಹೆಚ್ಚಿನ ಉತ್ಸಾಹದಿಂದಲೇ ಜಾರಿಗೊಳಿಸುವ ಸಂಯುಕ್ತ ರಂಗ ಸರಕಾರದ ನಿಲುಮೆಯನ್ನು ಖಂಡಿಸುತ್ತಾ ಅದರ ಬದಲಾವಣೆಗಾಗಿ ಎಡಪಕ್ಷಗಳು ಪ್ರಯತ್ನಿಸುತ್ತಾ ಬಂದಿವೆ. ಜನಾಂದೋಲನದ ಮೂಲಕವೂ ಸರಕಾರದ ಮೇಲೆ ಒತ್ತಡ ತರಲಿಕ್ಕೆ ಪ್ರಯತ್ನಿಸಿವೆವು. ಅವುಗಳಿಂದ ಹೆಚ್ಚಿನ ಪರಿಣಾಮವಾಗದೆ ಸಂಯುಕ್ತ ರಂಗ ಸರಕಾರ ತನ್ನ ಬಂಡವಾಳಶಾಹಿ ಪರ ನೀತಿಯನ್ನೇ ಮುಂದುವರಿಸುತ್ತಿದ್ದಾಗ, ಸಂಯುಕ್ತ ರಂಗ ಸರಕಾರಕ್ಕೆ ಬೆಂಬಲ ನೀಡುತ್ತಿದ್ದ (ಸ.ರ.ಸರಕಾರದಲ್ಲಿ ಸಿಪಿಐ ಪಕ್ಷದ ಇಬ್ಬರು ಮಂತ್ರಿಗಳಿದ್ದಾರೆ) ಎಡಪಕ್ಷಗಳ ಕುರಿತು ಜನರಲ್ಲಿ ತಪ್ಪು ಕಲ್ಪನೆ ಉಂಟಾಗುವ ಸಂಭವವಿರುವುದರಿಂದ ಈ ಸಲ ನಡೆಯುತ್ತಿರುವ ಲೋಕಸಭೆ ಚುನಾವಣೆಯಲ್ಲಿ ಎಡ ಪಕ್ಷಗಳು ಸೇರಿ ಎಡಪಕ್ಷಗಳ ಒಮ್ಮತದ ನೀತಿ ನಿರೂಪಣೆಗಳನ್ನು ಜನರ ಮಧ್ಯೆ ಕೊಂಡೊಯ್ಯುವ ನಿರ್ಧಾರ ಮಾಡಿ ನಾಲ್ಕು ಎಡಪಕ್ಷಗಳ ಪರವಾಗಿ ಒಮ್ಮತದ ಚುನಾವಣಾ ಪ್ರಣಾಳಿಕೆಯನ್ನು ಮತದಾರರ ಮುಂದಿಟ್ಟಿವೆ. ಕಾಂಗ್ರೆ, ಬಿಜೆಪಿ ಮುಂತಾದ ಬಂಡವಾಳಶಾಹಿ ಪಕ್ಷಗಳು ಕೇವಲ ಸ್ಥಿರತೆಗೆ ಒತ್ತು ಕೊಡುತ್ತಿರುವಾಗ, ನಾಲ್ಕು ಎಡಪಕ್ಷಗಳು ಒಟ್ಟಿಗೆ ಸೇರಿ ಇಂದು ದೇಶ ಹಾಗೂ ಜನತೆ ಎದುರಿಸುತ್ತಿರುವ ಮೂಲಭೂತ, ಅತ್ಯಾವಶ್ಯಕ ಸಮಸ್ಯೆಗಳನ್ನು ವಿವರಿಸಿ, ಅವುಗಳಿಗಾಗಿ, ಅವುಗಳ ಅನುಷ್ಠಾನಕ್ಕಾಗಿ ನಿರಂತರ ಪ್ರಯತ್ನಿಸುವುದಾಗಿ ಪಣ ತೊಟ್ಟಿರುವ ಚುನಾವಣಾ ಪ್ರಣಾಳಿಕೆ ಬಂಡವಾಳಶಾಹಿ ಪತ್ರಿಕೆಗಳನ್ನು ಆಕರ್ಷಿಸಿವೆ. ಇದು ಇಂದು ಬದಲಾಗುತ್ತಿರುವ ರಾಜಕೀಯ ಪರಿಸ್ಥಿತಿಯ ಒಂದು ಮುಖ್ಯ ಅಂಶವಾಗಿದೆ. ದೇಶದಲ್ಲಿ ಪರ್ಯಾಯ ವ್ಯವಸ್ಥೆ ಮೂಡಿಬಾರದಿದ್ದರೆ, ದೇಶ ಮತ್ತು ಜನತೆಯೆದುರಿಸುತ್ತಿರುವ ಮೂಲ ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಒದಗಿಸಿ ಕೊಡದಿದ್ದರೆ, ದೇಶದ ಸ್ವಾತಂತ್ರ್ಯಕ್ಕೂ ಅಪಾಯ ಉಂಟಾಗುವ ಸಂಭವವಿರುವುದರಿಂದ ನಾಲ್ಕು ಎಡಪಕ್ಷಗಳು, ಮುಖ್ಯವಾಗಿ ಸಿಪಿಐ(ಎಂ) ಪಕ್ಷ ದೃಢ ನಿರ್ಧಾರದಿಂದ ಸಂಯುಕ್ತ ರಂಗ ರಚಿಸಲಿಕ್ಕೆ ಅದರ ಸರಕಾರಕ್ಕೆ ಅಪಾಯ ಉಂಟಾದಾಗ ಸಂಯುಕ್ತ ರಂಗವನ್ನು ಭದ್ರವಾಗಿ ಉಳಿಸಿಕೊಳ್ಳಲಿಕ್ಕೆ ಪಟ್ಟ ಶ್ರಮ ದೇಶದ ಜನರ ಮಾತ್ರವಲ್ಲ, ಬಂಡವಾಳ ಶಾಹಿ ವರ್ಗದ, ಬಂಡವಾಳಶಾಹಿ ರಾಜಕೀಯ ಪಕ್ಷಗಳ ಹಾಗೂ ಪತ್ರಿಕೆಗಳ ಗಮನ ಸೆಳೆದಿದೆ. ಎಡಪಕ್ಷಗಳ ದೃಢ ನಿರ್ಧಾರ, ಅವರು ಮುಂದಿಟ್ಟ ಪರಿಹಾರಗಳು ಈಗ ಹಲವು ಜನರಿಗೆ ಆಕರ್ಷಕವಾಗತೊಡಗಿವೆ. ದೇಶದ ಹಾಗೆಯೇ ಸಮಾಜದ ಪಾವಿತ್ರ್ಯವನ್ನೇ ಕೊರೆದು ನಾಶಗೊಳಿಸಿ ಅಧೋಗತಿಗಿಳಿಸುತ್ತಿರುವ ಭ್ರಷ್ಟಾಚಾರದ ವಿರುದ್ಧ ಹೋರಾಡಲು ಇತರ ಎಲ್ಲಾ ಪಕ್ಷಗಳು ಹಿಂದೇಟು ಹಾಕುತ್ತಿರುವಾಗ ಎಡ ಪಕ್ಷಗಳ ನಿಲುಮೆ ಜನರ ಮಧ್ಯೆ ಪ್ರಭಾವ ಬೀರಿವೆ. ಈ ಎಲ್ಲಾ ಕಾರಣಗಳಿಂದಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಭಾರತ ಕಮ್ಯುನಿಸ್ಟ್ ಪಕ್ಷ ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್.ಪಿ. ಪಕ್ಷಗಳ ಜಂಟೀ ಚುನಾವಣಾ ಪ್ರಣಾಳಿಕೆಯನ್ನು 'ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಮತ್ತಿತರ ಪತ್ರಿಕೆಗಳು ಸ್ವಾಗತಿಸಿವೆ.

"ಇತರ ರಾಜಕೀಯ ಪಕ್ಷಗಳು ಭ್ರಷ್ಟಾಚಾರವನ್ನು ಖಂಡಿಸಲು ಹಿಂದೆ ಮುಂದೆ ನೋಡುತ್ತಿರುವಾಗ ವಾಮಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲಿ ಭ್ರಷ್ಟಾಚಾರವನ್ನು ಖಂಡಿಸುವುದರಲ್ಲಿರುವ ನೈಜತೆ ತನ್ಮೂಲಕ ಇತರ ಪ್ರಜಾತಾಂತ್ರಿಕ ಹಾಗೂ ಜಾತ್ಯಾತೀತ ಪಕ್ಷಗಳು ವಾಮ ಪಕ್ಷಗಳ ಜೊತೆಗೂಡಲು ಅವಕಾಶ ಕಲ್ಪಿಸಿದಂತಾಗಿದೆ. ರಾಜಕೀಯ ಅಸ್ಥಿರತೆಯಿಂದಾಗಿ ರಾಷ್ಟ್ರ ಆರ್ಥಿಕ ಅವನತಿಯತ್ತ ಸಾಗಿರುವಾಗ ಜನಸಾಮಾನ್ಯರ ದಿನನಿತ್ಯದ ಜೀವನ ದುರ್ಭರವಾಗಿರುವಾಗ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಕೆಲವು ತತ್ವಾದರ್ಶಗಳನ್ನು ವಾಮಪಕ್ಷಗಳು ಮತದಾರರ ಮುಂದೆ ಇರಿಸಿವೆ. ಪ್ರಾಯಶಃ ಅವರು ಮತದಾನಕ್ಕೆ ಮುಂಚಿತವಾಗಿ ಇದರ ಬಗ್ಗೆ ಚಿಂತನೆ ನಡೆಸುವುದು ಸೂಕ್ತ"

ಎಂದು ೨೦.೧.೯೮ ರ ಪ್ರಜಾವಾಣಿ ಸಂಪಾದಕೀಯ ಅಭಿಪ್ರಾಯ ವ್ಯಕ್ತ ಮಾಡಿದೆ.

'ನೀತಿ ಬದ್ಧ ನಿಲುವು' ಎಂಬ ಶಿರೋನಾಮೆಯಲ್ಲಿ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಸಂಪಾದಕೀಯ(ಜನವರಿ ೧೯, ೧೯೯೮)

'ರಾಜಕೀಯ ಮತ್ತು ಆರ್ಥಿಕ ನೀತಿಗಳಿಗೆ ಬದ್ಧತೆ ಅಥವಾ ಸರ್ವಸಮ್ಮತಿ ಇಲ್ಲದೆಯೇ ವ್ಯವಹಾರ ಕುದುರಿಸುವ ರಾಜಕೀಯ ಪಕ್ಷಗಳ ಚಟುವಟಿಕೆಗಳಿಗೆ ಸಂಪೂರ್ಣ ಭಿನ್ನವಾದ ಚೈತನ್ಯಕಾರಿ ಚುನಾವಣಾ-ಪೂರ್ವ ಪ್ರಕಟಣೆಯಿದು. ಎಡಪಕ್ಷಗಳ ಸರ್ವಾಂಗೀಣ ನಿಲುವು ತರ್ಕಬದ್ಧವಾಗಿದೆ. ಏಕೆಂದರೆ ಅದು ಬಹುಪಾಲು ಜನತೆಯ ಅಗತ್ಯಗಳನ್ನು ಆಧರಿಸಿದೆ. ... ಎಡಪಕ್ಷಗಳು ಹೀಗೆ ಒಂದು ಸುಸಂಗತ ಶಕ್ತಿ ಮತ್ತು ಇತರ ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವವಾದೀ ಪಕ್ಷಗಳಲ್ಲಿ ಐಕ್ಯತೆ ತರುವ ಶಕ್ತಿ ಎಂದು ಹೇಳಿಕೊಳ್ಳಲು ಸಾಧ್ಯವಾಗಿದೆ... ಈಗ ಎಡಪಕ್ಷಗಳು ಇತರರ ಅಜೆಂಡಾಗಳಲ್ಲಿ . ತುಂಬಿಹೋಗಿರುವ ಸಮಯಸಾಧಕತನವನ್ನು ಟೀಕಿಸಲು ಸಾಧ್ಯವಿದೆ. ... ಹೆಚ್ಚುತ್ತಿರುವ ಅಸಮಾನತೆಗಳು ಹಾಗೂ ರಾಜಕೀಯ ದಿಕ್ಕೇಡಿತನ ಜನಸಾಮಾನ್ಯರ ಬಾಳಿನ ಗೋಳು ಹೆಚ್ಚುಸುತ್ತಿರುವಾಗ ಎಡಪಕ್ಷಗಳು ಯಾವ ಮೂಲಭೂತ ತತ್ವಗಳ ಮೇಲೆ ಸ್ವಾತಂತ್ರ್ಯವನ್ನು ಪಡೆಯಲಾಯಿತೋ ಅವನ್ನು ನೆನಪಿಸಿವೆ. ಅವರಿಗೆ ಉತ್ತಮ ಫಲ ನೀಡಬಲ್ಲದು" - ಎಂದಿದೆ. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಇದು ಎಡಪಕ್ಷಗಳ ಗೆಲುವು ○

ಪುಟ 4 ರಿಂದ

ವ್ಯಕ್ತಪಡಿಸಿದೆ. ಇತ್ತೀಚಿನ ದಕ್ಷಿಣ-ಪೂರ್ವ ಏಷ್ಯಾದ ದೇಶಗಳನ್ನು ಅಲುಗಾಡಿಸಿದ ಆರ್ಥಿಕ ಅಲ್ಲೋಲಕಲ್ಲೋಲ ಹಾಗೂ ಆರ್ಥಿಕ ಬಿಕ್ಕಟ್ಟು ನಮ್ಮ ದೇಶದಲ್ಲಿ ಲಂಗುಲಗಾಮಿಲ್ಲದ ಉದಾರೀಕರಣವನ್ನು ನಡೆಸುವವರಿಗೊಂದು ಸರಿಯಾದ ಸಮಯಕ್ಕೆ ಬಂದಿರುವ ಎಚ್ಚರಿಕೆ ಎಂದಿರುವ ಪ್ರಣಾಳಿಕೆ ಭಾರತ ಈ ವಿನಾಶಕಾರಿ ಪಥವನ್ನು ಅನುಕರಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಸಾರಿದೆ.

ಆರ್ಥಿಕ ಸುಧಾರಣೆಗಳಿಗೆ ಭಿನ್ನವಾದ ದಿಕ್ಕು ನೀಡಬೇಕಾಗಿದೆ. ಈ ದಿಕ್ಕಿನಲ್ಲಿ ಎಡಪಕ್ಷಗಳು ನಿರಂತರವಾಗಿ ಸ್ವಾವಲಂಬೀ ಆರ್ಥಿಕ ಬೆಳವಣಿಗೆಗೆ ಒಂದು ಪರ್ಯಾಯ ಧೋರಣೆಯನ್ನು ಹೇಳುತ್ತಾ ಬಂದಿವೆ ಎಂದು ನೆನಪಿಸಿರುವ ಎಡಪಕ್ಷಗಳ ಪ್ರಣಾಳಿಕೆ ಭೂಸುಧಾರಣೆ, ಕೃಷಿ, ಕೈಗಾರಿಕೆ, ಹಣಕಾಸು ವಲಯ, ಮೂಲರಚನೆ, ಅಗತ್ಯವಾದ ಸಂಪನ್ಮೂಲ ಸಂಗ್ರಹ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕುರಿತಂತೆ ಈ ಪರ್ಯಾಯ ಧೋರಣೆಯ ರೂಪರೇಷೆಯನ್ನು ನಿರ್ದಿಷ್ಟವಾಗಿ ಮುಂದಿಟ್ಟಿದೆ. ಅಲ್ಲದೆ ಉದಾರೀಕರಣದ ನೀತಿಗಳಿಂದ ಅತ್ಯಂತ ಹೆಚ್ಚು ಸಂಕಟಕ್ಕೀಡಾಗಿರುವ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರ ಹಕ್ಕುಗಳು, ಸೌಲಭ್ಯಗಳ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯಗಳನ್ನು ಪುನರುಚ್ಚರಿಸಿದೆ.

ಜನಸಾಮಾನ್ಯರ ಬದುಕನ್ನು ಹಸನುಗೊಳಿಸಲು

ಜನಗಳ ಭೌತಿಕ ಹಾಗೂ ಸಾಂಸ್ಕೃತಿಕ ಬದುಕು ಸಾರ್ವತ್ರಿಕ ರೀತಿಯಲ್ಲಿ ಉತ್ತಮಗೊಂಡರೆ ಮಾತ್ರವೇ ದೇಶದ ಸರ್ವಾಂಗೀಣ ಪ್ರಗತಿ ಸಾಧ್ಯ ಎಂಬ ತತ್ವದೊಡನೆ ಆರಂಭವಾಗುವ ಮೂರನೇ ವಿಭಾಗ ಹೀಗೆ ನಾಗರೀಕರ ಬದುಕನ್ನು ಉತ್ತಮಪಡಿಸಲು ಅಗತ್ಯವಾದ ಶಿಕ್ಷಣ, ಆರೋಗ್ಯ, ಜಲಸಂಪನ್ಮೂಲ, ವಸತಿ, ಉದ್ಯೋಗವಕಾಶ ಕುರಿತಂತೆ ಒಂದು ಸ್ಪಷ್ಟ ಕಾರ್ಯಕ್ರಮವನ್ನು ಮುಂದಿಟ್ಟಿದೆ. ಮಹಿಳೆಯರ ಸಮಸ್ಯೆಗಳು, ಜಾತಿ ಪಕ್ಷಪಾತ ಹಾಗೂ ಸಾಮಾಜಿಕ ದಮನದ ವಿರುದ್ಧ ಹೋರಾಟ, ದಲಿತರು ಮತ್ತ ಆದಿವಾಸಿಗಳ ಮೇಲೆ ಮುಂದುವರಿಯುತ್ತಿರುವ ಅತ್ಯಾಚಾರಗಳ ವಿರುದ್ಧ ಹಾಗೂ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯ ವಿರುದ್ಧ ಹೋರಾಟಗಳನ್ನು ಬೆಂಬಲಿಸಿರುವ ಎಡಪಕ್ಷಗಳ ಪ್ರಣಾಳಿಕೆ ಈ ಜನವಿಭಾಗಗಳ ನಿರ್ದಿಷ್ಟ ಸಮಸ್ಯೆಗಳಿಗೆ ಪರಿಹಾರಕ್ಕೆ ಮೂರ್ತ ಕಾರ್ಯಕ್ರಮಗಳನ್ನು ಸೂಚಿಸಿದೆ. ಅದೇ ರೀತಿ ಯುವಜನರನ್ನು ಕುರಿತಂತೆ ಒಂದು ರಾಷ್ಟ್ರೀಯ ನೀತಿಯನ್ನು ಅಂಗೀಕರಿಸಬೇಕು, ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಸಂಸ್ಕೃತಿಯ ಅಭಿವೃದ್ಧಿಗೆ ಸೌಲಭ್ಯಗಳನ್ನು ನೀಡಬೇಕು, ಇವೆಲ್ಲದರಲ್ಲಿ ರಾಜ್ಯಗಳು ಭಾಗವಹಿಸುವಂತೆ ವ್ಯವಸ್ಥೆಯಿರಬೇಕು ಎಂದು ಪ್ರಣಾಳಿಕೆ ಹೇಳಿದೆ. ವೈಜ್ಞಾನಿಕ ಸಂಸ್ಥೆಗಳನ್ನು ಹಾಗೂ ಭಾರತದ ಸಂಶೋಧನಾ ಸಾಮರ್ಥ್ಯವನ್ನು ಹೆಚ್ಚಿಸುವಂತಹ ಒಂದು ವೈಜ್ಞಾನಿಕ ಮತ್ತು ತಂತ್ರಜ್ಞಾನ ಧೋರಣೆಯನ್ನು ಅಂಗೀಕರಿಸಬೇಕು, ತ್ವರಿತ ಹಾಗೂ ತಾಳಿಕೊಳ್ಳಬಲ್ಲ ಅಭಿವೃದ್ಧಿಯ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಒಂದು ಪರಿಸರ ನೀತಿಯ ಬಗ್ಗೆಯೂ ಎಡ ಪಕ್ಷಗಳ ಪ್ರಣಾಳಿಕೆ ನಿರ್ದಿಷ್ಟ ಸೂಚನೆಗಳನ್ನು ಮುಂದಿಟ್ಟಿದೆ.

ಆತ್ಮವಿಶ್ವಾಸ

'ಎಡಪಕ್ಷಗಳು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಲು ಕೆಲಸ ಮಾಡುತ್ತವೆ' ಎಂಬ ವಚನದಿಂದ ಆರಂಭವಾಗುವ ಪ್ರಣಾಳಿಕೆಯ ಕೊನೆಯ ವಿಭಾಗ ಈ ದಿಕ್ಕಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಲಹೆ ಸೂಚನೆಗಳನ್ನು ಮುಂದಿಟ್ಟಿದೆ.

ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವ ಮೊದಲ ಹೆಜ್ಜೆ ಚುನಾವಣಾ ಸುಧಾರಣೆಯಿಂದಲೇ ಆರಂಭವಾಗಬೇಕು ಎಂದಿರುವ ಪ್ರಣಾಳಿಕೆ ಇಂತಹ ಅಗತ್ಯ ಸುಧಾರಣೆಗಳ ಪಟ್ಟಿ ಮಾಡಿದೆ. ಈ ದಿಕ್ಕಿನಲ್ಲಿ ಭ್ರಷ್ಟಾಚಾರವನ್ನು ತಡೆಯುವ ಕ್ರಮಗಳ ಅಗತ್ಯವನ್ನು ಒತ್ತಿಹೇಳುತ್ತಾ 'ಆಡಳಿತ ವ್ಯವಸ್ಥೆ ಹೆಚ್ಚು ಜವಾಬುದಾರಿಯಾಗಿರಬೇಕು. ಇದಕ್ಕೆ ನಾಗರೀಕರಿಗೆ ಮಾಹಿತಿ ಹಕ್ಕು ಇರಬೇಕು. ಇದಕ್ಕಾಗಿ ಮಾಹಿತಿ ಹಕ್ಕು ಶಾಸನವನ್ನು ಅಂಗೀಕರಿಸಬೇಕು" ಎಂದು ಎಡಪಕ್ಷಗಳು ಸ್ಪಷ್ಟವಾಗಿ ಪ್ರತಿಪಾದಿಸಿವೆ.

ನ್ಯಾಯಾಂಗ ಸುಧಾರಣೆ ಈ ದಿಕ್ಕಿನಲ್ಲಿ ಕೈಗೊಳ್ಳಬೇಕಾದ ಮತ್ತೊಂದು ಅಗತ್ಯ ಕ್ರಮ. ರಾಷ್ಟ್ರೀಯ ನ್ಯಾಯಾಂಗ ಆಯೋಗದ ರಚನೆ, ಜನಸಾಮಾನ್ಯರು ತೆರಬಲ್ಲ ಖರ್ಚಿನಲ್ಲಿ ತ್ವರಿತ ಪರಿಹಾರ ಒದಗಿಸಲು ಕ್ರಮ, ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗದ ನಡುವೆ ಸರಿಯಾದ ಸಂಬಂಧಗಳು, ಅಧಿಕಾರಗಳ ವಿಕೇಂದ್ರೀಕರಣ ಈ ವಿಷಯದಲ್ಲಿ ಎಡಪಕ್ಷಗಳು ಮುಂದಿಟ್ಟಿರುವ ಸೂಚನೆಗಳು.

ಅಧ್ಯಕ್ಷೀಯ ಮಾದರಿ ಸರಕಾರದ ಹೆಸರಲ್ಲಿ ಸಂಸದೀಯ ಪ್ರಜಾಪ್ರಭುತ್ವವನ್ನು ಮೊಟಕುಗೊಳಿಸುವ ಅಥವಾ ಬದಲಿಸುವ ಯಾವುದೇ ಪ್ರಯತ್ನವನ್ನು ತಾವು ವಿರೋಧಿಸುವುದಾಗಿ ಒತ್ತಿ ಹೇಳಿರುವ ಎಡಪಕ್ಷಗಳು ಇಂತಹ ಪ್ರಯತ್ನಗಳು ಸರ್ವಾಧಿಕಾರಶಾಹಿಯನ್ನು ತರವು ಪ್ರಯತ್ನಗಳು ಎಂದು ಖಂಡಿಸಿದೆ.

'ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾಗಳ ಎಡನೇತೃತ್ವದ ಸರಕಾರಗಳು ಎಡಪಕ್ಷಗಳು ವಿಶ್ವಾಸಾರ್ಹತೆಯನ್ನು ಸಾಬೀತುಪಡಿಸಿವೆ. ಭೂಸುಧಾರಣೆಗಳ ಅನುಷ್ಠಾನ, ದುಡಿಯುವ ಜನಗಳ ಹಕ್ಕುಗಳ ರಕ್ಷಣೆ, ಪಂಚಾಯಿತಿಗಳಿಗೆ ಅಧಿಕಾರಗಳ ವಿಕೇಂದ್ರಿಕರಣ, ಕೋಮುಸೌಹಾರ್ದ ರಕ್ಷಣೆ ಹಾಗೂ ಪ್ರಜಾ ಪ್ರಭುತ್ವವನ್ನು ಬುಡಮಟ್ಟದವರೆಗೆ ಒಯ್ದಿರುವುದು ಇವುಗಳ ಕೆಲವು ಸಾಧನೆಗಳು. ಈ ಜನಪರ ಪ್ರಜಾಸತ್ತಾತ್ಮಕ ಧೋರಣೆಗಳು ಕೇಂದ್ರದ ಅಜೆಂಡಾದಲ್ಲಿ ಬರಬೇಕು ಎಂದು ಎಡಪಕ್ಷಗಳು ಬಯಸುತ್ತಿವೆ" ಎಂದಿರುವ ಪ್ರಣಾಳಿಕೆ ಎಡ ಪಕ್ಷಗಳಿಗೆ ಮತ ನೀಡುವುದೆಂದರೆ

- ಭಾರತೀಯ ಗಣತಂತ್ರದ ಜಾತ್ಯಾತೀತ-ಪ್ರಜಾಸತ್ತಾತ್ಮಕ ಆಧಾರ ಹಾಗೂ ರಾಷ್ಟ್ರೀಯ ಐಕ್ಯತೆ
- ಜನಪರ ಆರ್ಥಿಕ ನೀತಿಗಳಿಗೆ,
- ಒಂದು ಭ್ರಷ್ಟಾಚಾರ-ಮುಕ್ತ ಸರಕಾರ ಮತ್ತು ವ್ಯವಸ್ಥೆಗಾಗಿ ಹಾಗೂ
- ನ್ಯಾಯಪೂರ್ಣವಾದ ಬೆಳವಣಿಗೆಗಾಗಿ ಕೆಲಸ ಮಾಡುವ ಒಂದು ಸ್ಥಿರ ಸಂಯುಕ್ತ ರಂಗ ಸರಕಾರ ಬರಲಿಕ್ಕಾಗಿ ನೀಡುವ ಜನಾದೇಶ" ಎಂದು ಎಡಪಕ್ಷಗಳ ಈ ಜಂಟಿ ಪ್ರಣಾಳಿಕೆ ಹೇಳಿದೆ. ಈ ಆತ್ಮವಿಶ್ವಾಸ ಎರಡು ದಶಕಗಳ ಹೋರಾಟಗಳು, ಅನುಭವಗಳಿಂದ ಒಂದು ಜನ-ಪರ ಕಣ್ಣೋಟದಿಂದ ಮೂಡಿಬಂದಿರುವ ಆತ್ಮವಿಶ್ವಾಸ ಎಂದು ಬೇರೆ ಹೇಳಬೇಕಾಗಿಲ್ಲ.



ಕೃಪೆ : ಟೈಂಸ್ ಆಫ್ ಇಂಡಿಯಾ - ಆರ್.ಕೆ.ಲಕ್ಷ್ಮಣ್

ನೋಡಿ ಈ ಬಿಜೆಪಿಯ ಅಸ್ಥಿರತೆಯ ಜನಜಂಗುಳಿ!

13 ಪಕ್ಷಗಳ ಸಂಯುಕ್ತ ರಂಗ ಹೇಗೆ ಸ್ಥಿರತೆ ನೀಡಬಲ್ಲದು ಎಂದು ಹರಿಹಾಯುತ್ತಿದ್ದ ಬಿಜೆಪಿ ಈಗ 'ಸ್ಥಿರತೆ' ನೀಡಲು ತಾನೇ ಒಂದು ರಂಗ ರಚಿಸಲು ಎದ್ದು-ಬಿದ್ದು ಪ್ರಯತ್ನಿಸು ತ್ತಿದೆ ಎಂದು ಎಲ್ಲರಿಗೂ ಗೊತ್ತಿದೆ. ಈ ರಂಗದಲ್ಲಿನ ಪಕ್ಷಗಳ ಸಂಖ್ಯೆ ಆಗಲೇ ಇಪ್ಪತ್ತು ತಲುಪಿದೆ. ಯಾವುದೇ ಸಮಾನ ಸೈದ್ಧಾಂತಿಕ ನಿಲುವಿಲ್ಲದ ಕೇವಲ ಅಧಿಕಾರ ದಾಹಿಗಳ ಕೂಟ ಈ ಸ್ಥಿರತೆ ನೀಡ ಬಲ್ಲದು ಎಂದರೆ ಜನ ನಂಬಬೇಕೆ? ಈ ಕೂಟದ ಸದಸ್ಯ ಪಕ್ಷಗಳ ಪಟ್ಟಿ ನೋಡಿ, ಇದು ಇನ್ನೂ ಅಪೂರ್ಣ ಎಂದು ನೆನಪಿನಲ್ಲಿಡಿ!

ತಮಿಳುನಾಡು
1. ಸುಬ್ರಮಣ್ಯ ಸ್ವಾಮಿಯ ಇತ್ತೀಚೆಗೆ ರಾಷ್ಟ್ರೀಯ ಪಕ್ಷದ ಸ್ಥಾನಮಾನ ಕಳಕೊಂಡ ಜನತಾ ಪಾರ್ಟಿಯೆಂಬ ಪಕ್ಷ
2. ಜಯಲಲಿತಾ ನೇತೃತ್ವದ ಎಐಎಡಿಎಂಕೆ
3. ಎಂಡಿಎಂಕೆ
4. ಡಿಕೆ., 5. ಪಿ.ಎಂ.ಕೆ., 6. ವಿ.ರಾಮಮೂರ್ತಿ ನೇತೃತ್ವದ ಕಾಂಗ್ರೆಸ್ ಬಣ.

ಕೇರಳ
7. ಹಿಂದು ಮನ್ನಾಣಿ

ಕರ್ನಾಟಕ
8. ಲೋಕಶಕ್ತಿ

ಆಂಧ್ರಪ್ರದೇಶ
9. ಲಕ್ಷ್ಮಿ ಪಾರ್ವತಿ

ಒರಿಸ್ಸಾ
10. ಬಿಜು ಜನತಾದಳ

ಪಶ್ಚಿಮ ಬಂಗಾಳ
11. ಮಮತಾ ಬ್ಯಾನರ್ಜಿಯ ತೃಣಮೂಲ ಕಾಂಗ್ರೆಸ್

ಬಿಹಾರ
12. ಸಮತಾ ಪಾರ್ಟಿ

ಉತ್ತರ ಪ್ರದೇಶ
13. ಕಾಂಗ್ರೆಸ್ ಪಕ್ಷಾಂತರಿಗಳ ಲೋಕತಾಂತ್ರಿಕ್ ಕಾಂಗ್ರೆಸ್
14. ಬಿಎಸ್‌ಪಿಯಿಂದ ಪಕ್ಷಾಂತರಗೊಂಡ ಗುಂಪು.

ಹರ್ಯಾಣ
15. ಬನ್ಸಿಲಾಲರ ಹೆಚ್‌ವಿಪಿ

ಪಂಜಾಬ್
16. ಅಕಾಲಿದಳ

ಜಮ್ಮು-ಕಾಶ್ಮೀರ
17. ಕೋಬ ಪತ್ರ ಗುಂಪು

ರಾಜಸ್ಥಾನ
18. ಶೇಖಾವತ್ ಸರಕಾರ ಈಗಾಗಲೇ ಹಲವು 'ಪಕ್ಷೇತರರ' ಬೆಂಬಲದ ಮೇಲಷ್ಟೇ ನಿಂತಿದೆ.

ಮಹಾರಾಷ್ಟ್ರ
14. ಶಿವಸೇನೆ

ಗುಜರಾತ್
20. ವಾಘೇಲಾರ ಆರ್.ಜೆ.ಪಿ. ಯಿಂದ ಸಿಡಿದು ಹೋದ ಆತ್ಮಾರಾಂ ಗುಂಪನ್ನು ಸೆಳೆಯುವ ಭಾರೀ ಪ್ರಯತ್ನ ನಡೆಸಲಾಯಿತು. (ಮೇ 1996 ರಲ್ಲಿ 'ಸಮರ್ಥ ಪ್ರಧಾನಿ' ಯ ಅಭ್ಯರ್ಥಿ ವಾಜಪೇಯಿ ಯವರ ಸಮ್ಮುಖವೇ) ಬಿಜೆಪಿ ಗೂಂಡಾಗಳ ಹಲ್ಲೆಗೊಳಗಾದ ವ್ಯಕ್ತಿಯೇ ಈ ಆತ್ಮಾರಾಂ)

ಬೇರೆ ಯಾವುದೇ ರಾಜ್ಯದಲ್ಲಿ
21. ಈ ಪಟ್ಟಿ ಇನ್ನೂ ತೆರೆದಿದೆ....

ಇದು ನಿಮಗೆ ತಿಳಿದಿರಲಿ

ತಾನೊಂದು ಸಾಂಸ್ಕೃತಿಕ ಸಂಘಟನೆಯೆಂದು ಹೇಳಿಕೊಳ್ಳುವ ಆರ್.ಎಸ್.ಎಸ್. ಐವತ್ತು ವರ್ಷಗಳ ಹಿಂದೆ ಬಹಿರಂಗವಾಗಿ ರಾಜಕೀಯ ಅಧಿಕಾರದ ಮಾತನಾಡಿತ್ತು ಎಂಬುದು ನಿಮಗೆ ಗೊತ್ತೆ?

*ಡಿಸೆಂಬರ್ **1947.** ಆಗ ಆರ್.ಎಸ್.ಎಸ್. ಮುಖ್ಯಸ್ಥರಾಗಿದ್ದ 'ಗುರೂಜಿ' ಗೋಲ್ವಾಲ್ಕರ್ ಅಧಿಕಾರ ವಹಿಸಿಕೊಳ್ಳಲು ಸಿದ್ಧರಾಗಿ ಎಂದು ತಮ್ಮ ಅನುಯಾಯಿಗಳಿಗೆ ದಿಲ್ಲಿಯ ರಾಮಲೀಲಾ ಮೈದಾನದಲ್ಲಿ ಕರೆ ನೀಡಿದರು. ಮೊತ್ತಮೊದಲ ಬಾರಿಗೆ ಆರ್.ಎಸ್.ಎಸ್. ತನ್ನ ಗುಪ್ತ ಚಟುವಟಿಕೆಗಳಿಂದ ಹೊರಬಂದು ಸಂಸ್ಕೃತಿ-ಧರ್ಮದ ಬದಲು ರಾಜಕೀಯದ, ಅಧಿಕಾರದ ಮಾತನಾಡುತ್ತಿತ್ತು, ಪತ್ರಿಕಾರಂಗವನ್ನು ಈ ಸಭೆಗೆ ಆಹ್ವಾನಿಸಲಾಗಿತ್ತು. ಕೆಲವೇ ವಾರಗಳಲ್ಲಿ ಗಾಂಧೀಜಿಯ ಕೊಲೆಯಾಯ್ತು.-ಅತ್ಯಂತ ಜಾಗರೂಕ ಸಂಚಿನ ಮೂಲಕ ಇದು ನಡೆಯಿತು. ಆರ್.ಎಸ್.ಎಸ್. ಸಿಹಿ ಹಂಚಿ ಇದನ್ನು ಆಚರಿಸಿತು. ಇದನ್ನು ಬೇರಾರೂ ಅಲ್ಲ ಈಗ ಸಂಘ ಪರಿವಾರ ಹಾಡಿಹೊಗಳುತ್ತಿರುವ ದೇಶದ ಪ್ರಥಮ ಗೃಹ ಮಂತ್ರಿ ಸರ್ದಾರ್ ವಲ್ಲಭಬಾಯಿ ಪಟೇಲರೇ, ಸೆಪ್ಟೆಂಬರ್ **11, 1948** ರಂದು ಗೋಲ್ವಾಲ್ಕರ್ ರವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ!*

*ಗಾಂಧೀಜಿಯ ಕೊಲೆಯಿಂದ ದೇಶಾದ್ಯಂತ ಆರ್.ಎಸ್.ಎಸ್. ಮತ್ತು ಹಿಂದೂ ಮಹಾ ಸಭಾದ ವಿರುದ್ಧ ರೇಜಿಗೆಯ ಭಾವನೆ ಭುಗಿಲೆದ್ದಿತು. ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟದಲ್ಲಿ ನಿರತರಾಗಿದ್ದವರ ವಿರುದ್ಧ ಕೋಮು ವಿಷ ಕಾರುತ್ತಿದ್ದ ಮುಸ್ಲಿಂ ಲೀಗ್ ಬಗ್ಗೆಯೂ ಇದೇ ಭಾವನೆ ವ್ಯಕ್ತವಾಯಿತು. ಆದರೆ ಮಹಾತ್ಮರವರ ಕೊಲೆಗೆ ಬಂದ ಪ್ರತಿಕ್ರಿಯೆಯಿಂದಾಗಿ ಇತರ ಕೊಲೆ ಪಿತೂರಿಗಳನ್ನು ತರಾತುರಿಯಿಂದ ಕೈ ಬಿಡಲಾಯಿತು. ಸಾರ್ವಜನಿಕ ಕೋಪವನ್ನು ತಾಳಲಾರದ ಆರ್.ಎಸ್.ಎಸ್. ತಲೆ ಮರೆಸಿಕೊಂಡಿತು. ಎಲ್ಲರಲ್ಲಿ ಸಂದೇಹ ಹುಟ್ಟಿಸಿದ ಆರ್.ಎಸ್.ಎಸ್. ಮೂರು ವರ್ಷಗಳ ನಂತರ **1951** ರಲ್ಲಿ ಒಂದು ಪ್ರತ್ಯೇಕ ರಾಜಕೀಯ ಪಕ್ಷವನ್ನೇ ಕಟ್ಟಬೇಕಾಯಿತು. ಅದೇ ಭಾರತೀಯ ಜನಸಂಘ. ಬಹಳ ಕಾಲ ಆರ್.ಎಸ್.ಎಸ್.ನ ಅಧಿಕಾರದಾಹದ ವಾಹನವಾಗಿ ಕೆಲಸ ಮಾಡಿದ ಇದು ೧೯೭೭ ರಲ್ಲಿ ಜನತಾ ಪಕ್ಷದಲ್ಲಿ ವಿಲೀನಗೊಂಡು **1979** ರ ವೇಳೆಗೆ ಬಿಜೆಪಿ ಯ ಅವತಾರ ಪಡೆಯಿತು.*

ಈಗ ಆರ್. ಎಸ್.ಎಸ್.ನ ಅಧಿಕಾರ ದಾಹಕ್ಕೆ ಬಿಜೆಪಿ ಕೇವಲ ಒಂದು ವಾಹನ! ವಾಜಪೇಯಿಯವರು ಅದಕ್ಕೊಂದು ಮುಖವಾಡ!!

ಆದರೆ ಈ ಮುಖ ವಾಡವೂ ಕಳಚಿ ಬೀಳುತ್ತಿದೆ!!!

✪ ✪ ✪

'ಎರಡು-ರಾಷ್ಟ್ರ" ಸಿದ್ಧಾಂತವನ್ನು ಮೊದಲು ಮುಂದಿಟ್ಟವರು ಯಾರು?
ಮುಸ್ಲಿಂ ಲೀಗ್ ಅಥವಾ ಸಂಘ ಪರಿವಾರವೇ?

ಭಾರತದ ವಿಭಜನೆ ಹಾಗೂ ರಾಷ್ಟ್ರೀಯ ಐಕ್ಯತೆ ಛಿದ್ರಗೊಳ್ಳಲು ಎರಡು ರಾಷ್ಟ್ರ ಸಿದ್ಧಾಂತ(ಹಿಂದೂ ಮುಸ್ಲಿಮರು ಪ್ರತ್ಯೇಕ ರಾಷ್ಟ್ರಗಳೆಂಬ ಸಿದ್ಧಾಂತ) ಕಾರಣ ಎಂದು ಅಡ್ವಾಣಿಯವರು ಚುನಾವಣಾ ಪ್ರಚಾರ ಸಭೆಯೊಂದರಲ್ಲಿ ಹೇಳಿದ್ದಾರೆ. ಇದನ್ನು ಮುಸ್ಲಿಂ ಲೀಗ್ ಮುಂದಿಟ್ಟಿತು. ತಮ್ಮ ಪೂರ್ವಜರು ಅದನ್ನು ಆರಂಭದಿಂದಲೂ ವಿರೋಧಿಸಿದವರು ಎಂದು ಅಡ್ವಾಣಿ ಹೇಳಿದ್ದಾರೆ.


ಜನವರಿ 30, 1998 ಕ್ಕೆ 50 ವರ್ಷಗಳಾಗುತ್ತವೆ.

ಅಡ್ವಾಣಿಯವರ ಈ 'ಇತಿಹಾಸ ಜ್ಞಾನ' ಎಷ್ಟು ಸತ್ಯ ಎಂದು ಕೆಲವು ಸಂಶೋಧನಕಾರರು ಪ್ರಶ್ನಿಸಿದ್ದಾರೆ. ಬಿಜೆಪಿಯ ಜನಕರಾದ ಆರ್.ಎಸ್.ಎಸ್. ಮಂದಿ ಈ 'ಎರಡು ರಾಷ್ಟ್ರ' ಗಳ ಸಿದ್ಧಾಂತದ ಒಂದು ಆವೃತ್ತಿಯನ್ನು ಮೊದಲು ಪ್ರತಿಪಾದಿಸಿದರು. ಇದಕ್ಕೆ ಸಮಮಾದ ಹಾಗೂ ವಿರುದ್ಧವಾದ ಪ್ರತಿಕ್ರಿಯೆಯಾಗಿ ಮುಸ್ಲಿಂ ಲೀಗ್ ಈ ಸಿದ್ಧಾಂತದ ತನ್ನ ಆವೃತ್ತಿಯನ್ನು ಅಂಗೀಕರಿಸಿತು! 'ಗುರೂಜಿ' ಗೋಲ್ವಾಲ್ಕರ್‌ರವರ 'ನಾವು ನಮ್ಮ ರಾಷ್ಟ್ರೀಯತ್ವದ ನಿರ್ವಚನೆ(**WE Our National Defined)** *ಎಂಬ **1939** ರಲ್ಲಿ ಪ್ರಕಟವಾದ ಕಿರುಹೊತ್ತಿಗೆಯಲ್ಲಿ ಈ ಸಿದ್ಧಾಂತವನ್ನು ಕಾಣಬಹುದು. ಯೆಹೂದಿಯರ ನಿರ್ಮೂಲನದ ಕೆಲಸ ಮಾಡುತ್ತಿದ್ದ ನಾಝೀ ಕಾರ್ಯಕ್ರಮವನ್ನು ಪ್ರಶಂಸಿಸುತ್ತಾ 'ಗುರೂಜಿ' ಯವರು ಆ ಪುಸ್ತಕದಲ್ಲಿ ಹೀಗಂದಿದ್ದರು-"ಈ ಜರ್ಮನಿಯಲ್ಲಿ ಜನಾಂಗ ಹೆಮ್ಮೆಯ ಅತ್ಯುಚ್ಚ ಸ್ವರೂಪ ಪ್ರಕಟಗೊಂಡಿತು. ಭಿನ್ನತೆಗಳುಳ್ಳ ಜನಾಂಗಗಳು, ಸಂಸ್ಕೃತಿಗಳು ಒಂದು ಐಕ್ಯ ಸಮಗ್ರದಲ್ಲಿ ಸಮರಸಗೊಳ್ಳಲು ಸಾಧ್ಯವಿಲ್ಲ ಎಂದು ಜರ್ಮನಿ ತೋರಿಸಿಕೊಟ್ಟಿದೆ. ಇದರಿಂದ ಹಿಂದೂಸ್ಥಾನದಲ್ಲಿರುವ ನಾವು ಪಾಠ ಕಲಿತು ಪ್ರಯೋಜನ ಪಡೆಯಬೇಕು" ಹಿಂದೂಗಳು, ಮುಸಲ್ಮಾನರು ಬೇರೆ ಬೇರೆ ರಾಷ್ಟ್ರಗಳೆಂಬ ಪರಿಕಲ್ಪನೆಯಲ್ಲವೇ ಇಲ್ಲಿ ಕಾಣುತ್ತಿರುವುದು?*

ಈ ಕಿರುಹೊತ್ತಿಗೆಯನ್ನು ಆಗ ಕೆಲವೇ ದಿನಗಳಲ್ಲಿ ಹಿಂತೆಗೆದುಕೊಳ್ಳಲಾಯಿತು. ಏಕೆ?

ಈಗ ವಾಜಪೇಯಿಯವರು ಇಂತಹುದೇ ರೀತಿಯ ಬಿಜೆಪಿಯ ಇಂಟರನೆಟ್‌ನ ಲೇಖನವನ್ನು ಹಿಂತೆಗೆದು ಕೊಳ್ಳಲಾಗಿದೆಯಂತೆ. ಏಕೆ?

✪ ✪ ✪

ಅಡ್ವಾಣಿಯವರೂ ಈಗ ಲೋಕಸಭಾ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿ. ಇದರಿಂದ ವಾಜಪೇಯಿಯವರ 'ಪ್ರಧಾನ ಮಂತ್ರಿತ್ವಕ್ಕೆ' ಸಂಚಕಾರವಿದೆಯೇ? ಆದರೆ ಮುಖವಾಡದ ಅವಶ್ಯಕತೆಯಿರುವವರಿಗೆ ಈ 'ಮುಖವಾಡ' ದ ಅವಶ್ಯಕತೆಯೂ ಇದೆ. ಆದರೂ 'ಮುಖವಾಡ' ಕ್ಕೆ ಏಕೋ ಅನುಮಾನ ಬಿದ್ದಂತಿದೆ. ದಿಲ್ಲಿಯಲ್ಲಿ ಬಿಜೆಪಿಯ ಮಹಿಳಾ ರ್‍ಯಾಲಿಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ವಾಜಪೇಯಿಯವರು ಶ್ರೀರಾಮಚಂದ್ರನಂತೆ 'ರಾಜತಿಲಕ' ದ ದಿನವೇ ವನವಾಸದ ನೋಟೀಸು ಕೊಡಬಹುದು ಎಂದು ಭಯ ವ್ಯಕ್ತಪಡಿಸಿದ್ದರಂತೆ.

ಏನೇ ಆಗಲಿ, ವಾಜಪೇಯಿಯವರೇ ಮುಂದಿನ ಪ್ರಧಾನ ಮಂತ್ರಿಯೆಂದು ಈ 'ಮುಖವಾಡ' ಎಂಬ ಪದದ ಕರ್ತೃ ಗೋವಿಂದಾಚಾರ್ಯರೇ ಹೇಳಿದ್ದಾರೆ. ಆದರೆ ಇದು ಬಹಳ ಅನ್ಯಾಯ ಸ್ವಾಮಿ! ಅಡ್ವಾಣಿಯವರ ವಿಷ ಉಗುಳುವ ಕೋಮುವಾದಿ ಪ್ರಚಾರದಿಂದ, ರಥಯಾತ್ರೆಗಳಿಂದಲೇ, ಆ ಕೋಮುವಾದವನ್ನು ಧರ್ಮದ ತೊಡಿಸಿ ಬಳಸಿದ್ದರಿಂದಲೇ ಲೋಕಸಭೆಯಲ್ಲಿ ಎರಡು ಸ್ಥಾನ ಹೊಂದಿದ್ದ ಬಿಜೆಪಿ ಎರಡಂಕಿಯನ್ನು ದಾಟಿ ಮೂರಂಕಿಗೆ ಬಂದದ್ದು? ಆದರೆ ಯಾವುದಕ್ಕಾಗಿ ಕೋಮು ವಾದವನ್ನು ಬಹಳ ತೀವ್ರವಾಗಿ ಬಳಸಿದ್ದಿರೋ ಗದ್ದುಗೆಯೇರಲು ವಾಜಪೇಯಿಯವರನ್ನು ಮುಂದಿಡಬೇಕಾಗಿ ಬಂದಿದೆ. ಯವರನ್ನು ಮುಂದಿಟ್ಟರೆ ಮಾತ್ರ ಉದಾರವಾದಿಗಳಾದ ಭಾರತದ ಬಿಜೆಪಿಯಿಂದ ದೂರ ಓಡಿ ಹೋಗುತ್ತಾರೆ ಭಯದಿಂದಲೇ ಅಲ್ಲವೆ ಆ ಮುಖವಾಡ. ಆದರೆ ಮುಖವಾಡದ ಅವಶ್ಯ ಮೇಲೆ 'ಮುಖವಾಡ' ಪ್ರಧಾನ ಮಂತ್ರಿ ಉಳಿಯಬಲ್ಲುದೇ ಅಥವಾ ರಾಷ್ಟ್ರದಲ್ಲಾದಂತೆ ರಿಮೋಟ್ ಇರುತ್ತದೆಯೋ!

(ಅನಾಮಿಕ)

ಶರತ್ ಚಂದ್ರ

ಪ್ರಧಾನಿ ಶರೀಫ್ ಅಭ್ಯರ್ಥಿ ತರಾರ್ ಪಾಕಿಸ್ತಾನದ ಅಧ್ಯಕ್ಷ

ಪ್ರಧಾನಿ ನವಾಜ್ ಶರೀಫರ ಅಭ್ಯರ್ಥಿ ಮಹಮ್ಮದ್ ರಫೀಕ್ ತರಾರ್ ಪಾಕಿಸ್ತಾನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮಾಜಿ ಸುಪ್ರೀಂಕೋರ್ಟ್ ನ್ಯಾಯಾಧೀಶರು ಹಾಗೂ ಲಾಹೋರ್ ಹೈಕೋರ್ಟ್ ಮುಖ್ಯ ನ್ಯಾಯಾಧೀಶ ರಾಗಿದ್ದ ತರಾರ್ ಆಯ್ಕೆ ಪಾಕಿಸ್ತಾನದ ಹಲವು ಜನವಿಭಾಗಗಳು ಹುಬ್ಬೇರಿಸುವಂತೆ ಮಾಡಿದೆ. ತರಾರ್‌ರ ಚುನಾವಣೆ ಪ್ರಧಾನಿ ನವಾಜ್ ಶರೀಫರ ಪಕ್ಷದ ಭಾರಿ ಬಹುಮತದಿಂದ ಸುಗಮವಾಗಿ ನಡೆದರೂ (ಅಧ್ಯಕ್ಷರನ್ನು ಭಾರತದಂತೆ ಪಾರ್ಲಿಮೆಂಟು ಮತ್ತು ವಿಧಾನಸಭೆಗಳು ಚುನಾಯಿಸುತ್ತವೆ), ಅವರ ಧಾರ್ಮಿಕ ಮೂಲಭೂತವಾದಿ ಹಾಗೂ ಮಹಿಳಾ/ಅಲ್ಪಸಂಖ್ಯಾತ - ವಿರೋಧಿ ನಿಲುವುಗಳಿಂದಾಗಿ, ಹಲವು ಮಹಿಳಾ/ಅಲ್ಪಸಂಖ್ಯಾತರ ಸಂಘಟನೆಗಳು, ಮಾನವ ಹಕ್ಕುಸಂಘಟನೆಗಳು ಅವರ ಆಯ್ಕೆಯನ್ನು ವಿರೋಧಿಸಿವೆ. ಅವರ ಚುನಾವಣೆಯ ಮೊದಲು, ಆಗಿನ ಹಂಗಾಮಿ ಮುಖ್ಯ ಚುನಾವಣಾ ಕಮೀಶನರ್, ಹಿಂದೆ ಕೋರ್ಟಿನ ಜಡ್ಜ್‌ಗಳಿಗೆ ಅವಮಾನ ಮಾಡಿದ ಆಪಾದನೆ ಮೇಲೆ ಅವರ ಉಮೇದುವಾರಿಕೆಯನ್ನೇ ಅನರ್ಹಗೊಳಿಸಿ ಆಜ್ಞೆ ಹೊರಡಿಸಿದ್ದರು.

ಇನ್ನೊಂದು ಕಾರಣಕ್ಕಾಗಿಯೂ ಅವರ ಆಯ್ಕೆ ವಿವಾದಾಸ್ಪದವಾಗಿದೆ. ಅದು ಅವರು ಪ್ರಧಾನಿ ನವಾಜ್ ಶರೀಫರ ಅತ್ಯಂತ ನಿಕಟವರ್ತಿಯಾಗಿದ್ದು, ಪಂಜಾಬಿನವರಾಗಿದ್ದಾರೆ. ಅವರು ಶರೀಫರ ಹಲವಾರು ಭ್ರಷ್ಟಾಚಾರದ ಹಗರಣಗಳನ್ನು ಮುಚ್ಚಿಹಾಕಲು ಸಹಾಯ ಮಾಡಿದ್ದಕ್ಕೆ ಎಂದು ಟೀಕಿಸುವವರಿದ್ದಾರೆ. ಅಲ್ಲದೆ ಸದ್ಯಕ್ಕೆ, ದೇಶದ 50 ಉನ್ನತ ಹುದ್ದೆಗಳಲ್ಲಿ 41 ಹುದ್ದೆಗಳಲ್ಲಿ ಪಂಜಾಬಿಗಳು, ಅದೂ ಶರೀಫರ ನಿಕಟವರ್ತಿಗಳು ಇದ್ದಾರೆ ಎಂಬುದೂ ವಿವಾದಾಸ್ಪದವಾಗಿದೆ.

ಇಂತಹ ಅಧ್ಯಕ್ಷರ ಆಯ್ಕೆ ಶರೀಫರ ರಾಜಕೀಯ ಭವಿಷ್ಯಕ್ಕಾಗಲಿ, ಪಾಕಿಸ್ತಾನದ ಪ್ರಜಾಪ್ರಭುತ್ವ ಭದ್ರಗೊಳಿಸಲಾಗಲಿ ಒಳ್ಳೆಯದಲ್ಲ.

ಜರ್ಮನಿಯ ತುಂಬಾ ಭಾರಿ ವಿದ್ಯಾರ್ಥಿ ಪ್ರತಿಭಟನೆಗಳು

ನವೆಂಬರ್ ಕೊನೆಯ ವಾರದಲ್ಲಿ ಜರ್ಮನಿಯ ತುಂಬಾ ಭಾರೀ ವಿದ್ಯಾರ್ಥಿ ಪ್ರತಿಭಟನೆಗಳು ನಡೆದವು. 1968ರ ವಿದ್ಯಾರ್ಥಿ ಚಳುವಳಿಯ ನಂತರ ಇದು ಅತಿ ದೊಡ್ಡ ವಿದ್ಯಾರ್ಥಿ ಪ್ರತಿಭಟನೆಯಾಗಿತ್ತು. ವಿಶ್ವವಿದ್ಯಾಲಯಗಳಿಗೆ ಧನಸಹಾಯದಲ್ಲಿ ಭಾರಿ ಕಡಿತ, ವಿದ್ಯಾರ್ಥಿಗಳಿಗೆ ಫೀಸ್ ಹೆಚ್ಚಳ ಪ್ರತಿಭಟನೆಗಳಿಗೆ ಮುಖ್ಯ ಕಾರಣ ವಾಗಿತ್ತು. ಹಿಂದೆ ಉಚ್ಚ ಶಿಕ್ಷಣಕ್ಕೆ ಫೀಸ್ ವಿಧಿಸದೆ, ಉತ್ತಮ ಮಟ್ಟದ ಸವಲತ್ತುಗಳನ್ನು ಒದಗಿಸಿದ್ದ ಜರ್ಮನಿಯಲ್ಲಿ ಈಗ ಶಿಕ್ಷಣಕ್ಕೆ ಹಣ ಕಡಿತಗೊಳಿಸುವ ಸರ್ಕಾರದ ನೀತಿಗಳಿಂದ ಜರ್ಮನಿಯ ಸುಮಾರು 2 ದಶಲಕ್ಷ ವಿದ್ಯಾರ್ಥಿಗಳ ದೊಡ್ಡ ವಿಭಾಗ ರೊಚ್ಚಿಗೆದ್ದಿದ್ದರು. ಈ ನೀತಿಗಳಿಂದ ಶಿಕ್ಷಣದ ಮಟ್ಟ ಕಡಿಮೆಯಾಗಿದ್ದು, ಬಡವರಿಗೆ ಮಧ್ಯಮ ವರ್ಗದವರಿಗೆ ಉಚ್ಚ ಶಿಕ್ಷಣ ನಿಲುಕದಂತಾಗಿದೆ. ಜರ್ಮನಿಯ ಹಲವು ಪ್ರಮುಖ ನಗರಗಳಲ್ಲಿ ಭಾರಿ ವಿದ್ಯಾರ್ಥಿ ಪ್ರತಿಭಟನೆಗಳು ನಡೆದವು.

ಏಳು ಲಕ್ಷ ಇಸ್ರೇಲಿ ಕಾರ್ಮಿಕರ ಖಾಸಗೀಕರಣ-ವಿರೋಧಿ ಮುಷ್ಕರ

ಏಳು ಲಕ್ಷ ಇಸ್ರೇಲಿ ಕಾರ್ಮಿಕರು ಇತ್ತೀಚೆಗೆ ಚಾರಿತ್ರಿಕ ಖಾಸಗೀಕರಣ-ವಿರೋಧಿ ಮುಷ್ಕರ ನಡೆಸಿದರು. ಇಸ್ರೇಲಿ ಕಾರ್ಮಿಕ ವರ್ಗದ ಮೂರನೇ ಒಂದು ಭಾಗ ಭಾಗವಹಿಸಿದ ಈ ಮುಷ್ಕರ, ದೇಶದಲ್ಲಿ 1949ರ ನಂತರ ಅತಿ ದೊಡ್ಡ ಕಾರ್ಮಿಕರ ಕಾರ್ಯಾಚರಣೆ. ಸರ್ಕಾರದ ಖಾಸಗೀಕರಣದ ನೀತಿಗಳ ವಿರುದ್ಧ ಹಾಗೂ ಪೆನ್ಶನ್ ಹಕ್ಕುಗಳ ಬಗ್ಗೆ ಮಾತುಕತೆ ನಿಂತುಹೋಗಿರುವುದರ ಬಗ್ಗೆ ಪ್ರತಿಭಟಿಸಲು, ಈ ಮುಷ್ಕರ ಸಂಘಟಿಸಲಾಗಿತ್ತು.

ಇಸ್ರೇಲಿ ಅರ್ಥ ಮಂತ್ರಿಯವರ ಕಾರ್ಮಿಕರನ್ನು ಕುರಿತಂತೆ ಅವಮಾನ ಗೊಳಿಸುವ ಹೇಳಿಕೆ, ಈ ಮುಷ್ಕರಕ್ಕೆ ಕಿಡಿಯಾಗಿತ್ತು. ಇಸ್ರೇಲಿ ಸರ್ಕಾರ ಈ ಮುಷ್ಕರವನ್ನು ಮುರಿಯಲು ತುರ್ತು ಪರಿಸ್ಥಿತಿಯ ಬೆದರಿಕೆ, ಕೋರ್ಟ್ ಆಜ್ಞೆ, ಕೋರ್ಟು ನಿಂದನೆಯ ಅಸ್ತ್ರಗಳನ್ನೆಲ್ಲಾ ಬಳಸಿತು. ಮುಷ್ಕರದ ದಿನಗಳಲ್ಲಿ ಬ್ಯಾಂಕ್‌ಗಳು, ಸರ್ಕಾರಿ ಕಚೇರಿಗಳು, ಬಂದರುಗಳು, ವಿಮಾನ ನಿಲ್ದಾಣಗಳು - ಎಲ್ಲಾ ಸ್ತಬ್ಧವಾಗಿದ್ದವು.

ಝೂಂಬಿಯಾ - ಕೆನ್ನೆತ್ ಕೌಂಡಾ ಬಂಧನ

ಝೂಂಬಿಯಾದ ಅಧ್ಯಕ್ಷ ಚಿಲುಬಾರ ಸರ್ಕಾರ ಆ ದೇಶದ ಹಿರಿಯ ಮುತ್ಸದ್ದಿ ಕೆನ್ನೆತ್ ಕೌಂಡಾರವರನ್ನು ಬಂಧಿಸಿದೆ. ದ.ಆಫ್ರಿಕಾ, ತಾಂಜಾನಿಯಾದಂತಹ ನೆರೆ ದೇಶಗಳಲ್ಲದೆ ಅಂತರ್ರಾಷ್ಟ್ರೀಯ ಒತ್ತಡದಿಂದಾಗಿ, ಅವರನ್ನು ಬಿಡುಗಡೆ ಮಾಡಲಾಯಿತು. ಆದರೂ ಅವರನ್ನು ಇನ್ನೂ ಗೃಹಬಂಧನದಲ್ಲಿ ಇರಿಸಲಾಗಿದೆ. ಅವರ ಮೇಲೆ ಇತ್ತೀಚೆಗೆ ನಡೆದ ವಿಫಲವಾದ ಕ್ಷಿಪ್ರಕ್ರಾಂತಿಯ ಹಿಂದೆ ಇದ್ದ ಆರೋಪ ಇದೆ. ಅವರ ಮೇಲೆ ರಾಜಕೀಯ ಪ್ರವೇಶ ಮಾಡದ ಹಾಗೆ ನಿರ್ಬಂಧ ಹೇರಲಾಗಿದೆ.

ಆದರೆ ಸ್ವತಂತ್ರ ಮೂಲಗಳು ಇದು ನಂಬಲಾರ್ಹವಲ್ಲ ಎಂದಿವೆ. ಆ ದೇಶದ ವಸಾಹತುಶಾಹಿ-ವಿರೋಧಿ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಕೌಂಡಾರವರನ್ನು ಆ ದೇಶದ ರಾಷ್ಟ್ರಪಿತ ಎಂದು ಪರಿಗಣಿಸಲಾಗುತ್ತದೆ. ಕೌಂಡಾ ಭಾರಿ ಅಪಾಯ ಎದುರಿಸಿ ಝೂಂಬಿಯಾದಲ್ಲಿ ಭೂಗತವಾಗಿದ್ದ ANCಗೆ ನೆಲೆಗಳನ್ನು ಒದಗಿಸಿ, ANCಯ ವರ್ಣಭೇದ-ವಿರೋಧಿ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಿದರು. ಅಧ್ಯಕ್ಷ ಚಿಲುಬಾ ಇತ್ತೀಚೆಗೆ ನಡೆಸಿದ ಚುನಾವಣೆಯ ಕ್ರಮಬದ್ಧತೆಯನ್ನು ಪ್ರಶ್ನಿಸಲಾಗಿದ್ದು, ಅದನ್ನು ಮುಚ್ಚಿಕೊಳ್ಳಲು ಅವರು ಕ್ಷುಲ್ಲಕ ಪ್ರಯತ್ನವಾಗಿದ್ದ ಕ್ಷಿಪ್ರಕ್ರಾಂತಿ ಯ ಕಡೆಗೆ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ ಎನ್ನಲಾಗಿದೆ.

ಜಗತ್ತಿನ ಅತೀದೊಡ್ಡ ಜಲವಿದ್ಯುತ್ ಯೋಜನೆ ಜಾರಿಗೆ ಚೀನಾ ತಯಾರಿ

ಚೀನಾದ ವಿದ್ಯುತ್ ಉತ್ಪಾದನೆ ಮೇಲೆ ಯೋಜಿಸಲಾಗಿರುವ ಆಣೆ ಕಟ್ಟು, ಜಗತ್ತಿನ ಅತೀ ದೊಡ್ಡ ಬಹುಉದ್ದೇಶಿ ಆಣೆಕಟ್ಟು ಆಗಿ ವಿಕ್ರಮ ಸಾಧಿಸಲಿದೆ. ಹಲವು ದಶಕಗಳ ವೈಜ್ಞಾನಿಕ ವಿಶ್ಲೇಷಣೆಯ ನಂತರ, ಇದನ್ನು ಕಟ್ಟುವ ಕೆಲಸ ಆರಂಭವಾಗಿದೆ. ಆ ನದಿಯ ತೀರ ಪ್ರದೇಶದಲ್ಲಿ ನೆರೆಗಳನ್ನು ತಡೆಯುವುದು, ವಿದ್ಯುತ್ ಉತ್ಪಾದನೆ ಮತ್ತು ಜಲ ಸಾಗಾಣಿಕೆಯ ಮೂರು ಉದ್ದೇಶಗಳನ್ನು ಯೋಜನೆ ಹೊಂದಿದೆ. ಯೋಜನೆ ಪೂರ್ಣವಾದಾಗ 84.7 ಶತಕೋಟಿ ಯುನಿಟುಗಳಷ್ಟು ವಿದ್ಯುತ್ ಉತ್ಪಾದನೆ ಆಗಲಿದೆ. ವಿದ್ಯುತ್ ಉತ್ಪಾದನೆ ತೀರ ಪ್ರದೇಶದಲ್ಲಿ ನೆರೆಗಳ ಹಾವಳಿ ಯಿಂದ ಸುಮಾರು ಒಂದುವರೆ ಕೋಟಿ ಜನ ಮತ್ತು 15.3 ಲಕ್ಷ ಹೆಕ್ಟೇರ್ ಭೂಮಿ ಮುಕ್ತಿ ಪಡೆಯಲಿದ್ದಾರೆ. 600 ಕಿ.ಮೀ ನಷ್ಟು ಉದ್ದದ ಜಲ ಸಾಗಾಣಿಕೆಯನ್ನು ಇದು ಸಾಧ್ಯವಾಗಿಸುವುದು. ಜಲ ಸಾಗಾಣಿಕೆ ಐದು ಪಟ್ಟು ಏರಲಿದೆ. 24 ಶತಕೋಟಿ ಡಾಲರುಗಳಷ್ಟು ಬಂಡವಾಳ ವನ್ನು ಈ ಆಣೆಕಟ್ಟು ಮೇಲೆ ಹೂಡಲಾಗುವುದು.

ಟೋಕ್ಯೋ ದ ವಿಧಾನ ಸಭೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಬಲ ಇಮ್ಮಡಿ

ಟೋಕ್ಯೊದ ವಿಧಾನ ಸಭೆಗೆ ಜುಲೈಯಲ್ಲಿ ನಡೆದ ಚುನಾವಣೆಯಲ್ಲಿ ಜಪಾನಿ ಕಮ್ಯುನಿಸ್ಟ್ ಪಕ್ಷ 26 ಸೀಟು ಗಳಿಸಿ ತನ್ನ ಬಲ ಇಮ್ಮಡಿಗೊಳಿಸಿಕೊಂಡಿದೆ. ಈಗ ಅದು ಟೋಕ್ಯೊದ ವಿಧಾನ ಸಭೆಯಲ್ಲಿ ಎರಡನೆ ದೊಡ್ಡ ಪಕ್ಷವಾಗಿ ಹೊಮ್ಮಿದೆ.

ಈ ನಡುವೆ ಜಪಾನಿ ಕಮ್ಯುನಿಸ್ಟ್ ಪಕ್ಷದ ಅಂತರರಾಷ್ಟ್ರೀಯ ವಿಭಾಗದ ನಾಯಕರ ಫೋನ್ ಕದ್ದಾಲಿಕೆ ಪ್ರಕರಣದಲ್ಲಿ, ಕೋರ್ಟ್ 35 ಸಾವಿರ ಡಾಲರುಗಳನ್ನು ಪರಿಹಾರವಾಗಿ ನೀಡಿದೆ.

ಕುರ್ದಿಶ್ ವಲಸೆಯಿಂದ ಭೀತರಾದ ಯುರೋಪಿಯನ್ನರು

ಈಗಾಗಲೇ ಜನಾಂಗೀಯ ಸಮಸ್ಯೆಗಳನ್ನು ಎದುರಿಸುತ್ತಿರುವ ಯುರೋಪಿನಲ್ಲಿ ಕುರ್ದಿಶ್ ವಲಸೆಯಿಂದ ಹೊಸ ಭೀತಿ ಉಂಟಾಗಿದೆ. ತುರ್ಕಿ, ಇರಾನ್, ಇರಾಕ್‌ಗಳಲ್ಲಿ ವಾಸಿಸುತ್ತಿರುವ ಕುರ್ದಿಶ್ ಜನಾಂಗೀಯ ಅಲ್ಪಸಂಖ್ಯಾತರು ಈ ದೇಶಗಳಲ್ಲಿ ದಮನ ತಾಳಲಾರದೆ ಯುರೋಪಿನ ಇತರ ದೇಶಗಳಿಗೆ ವಲಸೆ ಹೋಗುತ್ತಿರುವುದು, ಹೊಸ ಜನಾಂಗೀಯ ಸಮಸ್ಯೆಗಳನ್ನು ಸೃಷ್ಟಿಸಬಹುದು. ಇತ್ತೀಚೆಗೆ ಸುಮಾರು 20 ಸಾವಿರ ಕುರ್ದಿಶ್ ಜನ ಯುರೋಪಿನ ಇತರ ದೇಶಗಳಿಗೆ ವಲಸೆ ಹೋಗಿದ್ದಾರೆ. ಅವರು ಯುರೋಪಿನಲ್ಲಿ ಎಲ್ಲಾ ದೇಶಗಳ ಮಧ್ಯೆ ಜಾರಿಯಾಗುತ್ತಿರುವ ಮುಕ್ತ ಓಡಾಟದ ನೀತಿಯ ಲಾಭ ಪಡೆಯುತ್ತಿದ್ದಾರೆ. ಮುಖ್ಯವಾಗಿ ಕುರ್ದಿಶ್ ಜನ ಇಟಲಿ ಮತ್ತು ಗ್ರೀಸ್ ಗಳಿಗೆ ವಲಸೆ ಹೋಗುತ್ತಿರುವುದು ಕಂಡು ಬಂದಿದೆ. ಯುರೋಪಿನ ವಿವಿಧ ದೇಶಗಳಲ್ಲಿ ಈಗಾಗಲೇ ಸುಮಾರು 6.5 ಲಕ್ಷದಷ್ಟು ಇರುವ ಕುರ್ದಿಶ್ ಜನರ ಸಂಖ್ಯೆ ಇನ್ನೂ ಜಾಸ್ತಿಯಾಗುವ ಬಗ್ಗೆ ಭೀತಿ ಉಂಟಾಗಿದೆ.

ಬಲಪಂಥೀಯ ಶಕ್ತಿಗಳು ಕುರ್ದಿಶ್ ವಲಸೆಯನ್ನು ತಮ್ಮ ರಾಜಕೀಯ ಬೇಳೆ ಬೇಯಿಸಲು ಬಳಸುತ್ತಿದ್ದಾರೆ. ಯುರೋಪಿನಲ್ಲಿ ಎಲ್ಲಾ ದೇಶಗಳ ಮಧ್ಯೆ ಮುಕ್ತ ಓಡಾಟದ ನೀತಿಯನ್ನು ಬದಲಾ ಯಿಸಲು ಒತ್ತಾಯ ಆರಂಭವಾಗಿದೆ.

ಪಾಕಿಸ್ತಾನದಲ್ಲಿ ಶಿಯಾ-ಸುನ್ನಿ ಗಲಭೆಗಳು

ಲಾಹೋರದಲ್ಲಿ ಕಳೆದ ಭಾನುವಾರ 24 ಶಿಯಾ ಪಂಥದ ಮುಸ್ಲಿಮರನ್ನು ಸಾರ್ವಜನಿಕ ಸ್ಥಳದಲ್ಲಿ ಕೊಲ್ಲಲಾಯಿತು. ಯಾವುದೇ ಗುಂಪು ಇದುವರೆಗೆ ಈ ಘಟನೆ ತಮ್ಮ ಕೃತ್ಯ ಎಂದು ಹೇಳಿಕೊಳ್ಳದಿದ್ದರೂ, ಇಂತಹ ಘಟನೆಗಳು ಕೆಲವು ಮೂಲಭೂತವಾದಿ ಗುಂಪುಗಳ ಕೆಲಸ ಎಂದು ಸರ್ಕಾರ ಅಂದಾಜು ಮಾಡಿದೆ. ಪಾಕಿಸ್ತಾನದಲ್ಲಿ (ಮುಖ್ಯವಾಗಿ ಲಾಹೋರದಲ್ಲಿ) ಶಿಯಾ-ಸುನ್ನಿ ಕೋಮುವಾದಿ ಗಲಭೆಗಳು ಹೆಚ್ಚುತ್ತಿವೆ. ಪಾಕಿಸ್ತಾನದ ಸರ್ಕಾರವೇ ಅಫ್ಘಾನಿಸ್ತಾನ, ಕಾಶ್ಮೀರ ಮುಂತಾದ ಕಡೆಗೆ ರಫ್ತಿಗಾಗೇ ಹುಟ್ಟು ಹಾಕಿದ ಈ ಕೆಲವು ಮೂಲಭೂತವಾದಿ ಗುಂಪುಗಳು ಆಂತರಿಕವಾಗಿಯೂ ಸಕ್ರಿಯವಾಗಿರುವುದು ಸರ್ಕಾರಕೆ ನುಂಗಲಾರದ ತುತ್ತಾಗಿದೆ. ಲಾಹೋರದಲ್ಲಿ ಕಾನೂನು ಮತ್ತು ವ್ಯವಸ್ಥೆಯ ಪರಿಸ್ಥಿತಿ ಇದರಿಂದ ತೀರಾ ಹದಗೆಡುತ್ತಿದೆ.

ಬ್ಯಾಂಕಿಗೆ ಹಾಗೂ ವಿಮಾಕ್ಷೇತ್ರದ ಖಾಸಗೀಕರಣ ವಿರೋಧಿಸಿ

ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಿಗರ ಜಾಗತೀಕರಣ ಉದಾರೀಕರಣ ನೀತಿಗಳ ಕಾರ್ಯಾಚರಣೆಯ ಭಾಗವಾಗಿ ಹೊಸ ಆರ್ಥಿಕ ನೀತಿಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿರುವ ಬ್ಯಾಂಕಿಂಗ್ ಹಾಗೂ ಸಂಪೂರ್ಣವಾಗಿ ಸರಕಾರದ ಒಡೆತನದಲ್ಲಿರುವ ಸಾಮಾನ್ಯ ವಿಮೆ ಮತ್ತು ಜೀವ ವಿಮೆ ಉದ್ದಿಮೆಗಳನ್ನು ಸುಧಾರಣೆಗೆ ಒಳಪಡಿಸುವ ಹೆಸರಿನಲ್ಲಿ ಖಾಸಗೀಕರಣ ಗೊಳಿಸಲು ಕೇಂದ್ರ ಸರ್ಕಾರವು ದಾಪುಗಾಲು ಹಾಕುತ್ತಿದೆ.

ಇತ್ತೀಚೆಗೆ ಅಂತರ್ರಾಷ್ಟ್ರೀಯ ವ್ಯಾಪಾರ ಸಂಘಟನೆ (ಡಬ್ಲ್ಯೂ ಟಿಓ) ಯ ಸಭೆಯಲ್ಲಿ ನಮ್ಮ ದೇಶದಲ್ಲಿ ಹಣಕಾಸು ವಲಯವನ್ನು ಪೂರ್ಣವಾಗಿ ಖಾಸಗೀಕರಣಕ್ಕೆ ಒಳಪಡಿಸುವ/ಖಾಸಗಿಯವರಿಗೆ ತೆರೆದಿಡುವ ಬದ್ಧತೆಯನ್ನು ಸರ್ಕಾರ ಒಪ್ಪಿಕೊಂಡಿರುವುದು ಖಂಡನೀಯವಾಗಿದೆ.

ನರಸಿಂಹ ರಾವ್ ರ ಸಮಿತಿಯ ಶಿಫಾರಸ್ಸಿನ ಹೆಸರಿನಲ್ಲಿ ಬ್ಯಾಂಕಿಂಗ್ ಕ್ಷೇತ್ರವನ್ನು ಹಾಗೂ ಮಲ್ಹೋತ್ರ ಸಮಿತಿಯ ವರದಿಯ ಹೆಸರಿನಲ್ಲಿ ವಿಮಾ ಕ್ಷೇತ್ರವನ್ನು ಖಾಸಗಿಯವರಿಗೆ ಅದರಲ್ಲೂ ವಿಶೇಷವಾಗಿ ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಒಪ್ಪಿಸಲು ತೀವ್ರ ಪ್ರಯತ್ನಗಳನ್ನು ಸರ್ಕಾರ ನಡೆಸುತ್ತಾ ಬಂದಿದೆ.

ಸಾರ್ವಜನಿಕ ಕ್ಷೇತ್ರದ ಈ ಹಣಕಾಸು ಸಂಸ್ಥೆಗಳು ರಾಷ್ಟ್ರೀಕರಣಗೊಂಡಂದಿನಿಂದ ಇಲ್ಲಿಯವರೆಗೆ ಜಾರಿಗೆ ತಂದಿದ್ದ ಸಾಮಾಜಿಕ ಬದ್ಧತೆ (Social Commitment) ಗೆ ತೀವ್ರ ಧಕ್ಕೆ ಉಂಟಾಗುವಂತಹ ಈ ಕ್ರಮಗಳ ಮೂಲಕ ಸಾರ್ವಜನಿಕ ಬ್ಯಾಂಕಿಂಗ್ ಉದ್ದಿಮೆಯು ಆದ್ಯತಾ ಕ್ಷೇತ್ರಕ್ಕೆ ಮುಖ್ಯವಾಗಿ ಕೃಷಿ ಹಾಗೂ ಕೃಷಿ ಆಧಾರಿತ ಉದ್ಯೋಗಗಳಿಗೆ ದೊರೆಯುತ್ತಿದ್ದ ಸಾಲದ ಪ್ರಮಾಣದಲ್ಲಿ ಕೊರತೆಯಾಗುತ್ತಿರುವುದು ಒಂದೆಡೆಯಾದರೆ, ಸ್ಪರ್ಧೆಯ ನೆಪದಲ್ಲಿ ವಿಮಾರಂಗದಲ್ಲಿ ಖಾಸಗಿಯವರಿಗೆ ಅವಕಾಶ ನೀಡುವ ಮೂಲಕ ಪಾಲಿಸಿದಾರರ ಹಿತಕ್ಕೆ ಧಕ್ಕೆಯಾಗುವುದರ ಜೊತೆಗೆ ಹಲವಾರು ಜನಕಲ್ಯಾಣ ಕಾರ್ಯಕ್ರಮಗಳಿಗೆ ಮತ್ತು ಮೂಲಭೂತ ಸೌಲಭ್ಯಗಳಿಗೆ ಹೂಡಲಾಗುತ್ತಿರುವ ಬಂಡವಾಳದಲ್ಲಿ ಕಡಿತವಾಗಲಿದೆ.

ಜೀವ ವಿಮಾ ನಿಗಮವು 8ನೇ ಪಂಚವಾರ್ಷಿಕ ಯೋಜನೆಯಲ್ಲಿ 58 ಸಾವಿರ ಕೋಟಿ ಹಣವನ್ನು ತೊಡಗಿಸಿಕೊಂಡಿದ್ದು, 9ನೇ ಪಂಚವಾರ್ಷಿಕ ಯೋಜನೆಯಲ್ಲಿ 125 ಸಾವಿರ ಕೋಟಿ ರೂ ತೊಡಗಿಸುವ ಬದ್ಧತೆಯನ್ನು ಘೋಷಿಸಿದೆ.

ವಿಮಾ ಉದ್ದಿಮೆಯ ನೌಕರರು ಅಮೇರಿಕೆಯ ಸೂಪರ್ 301 ರ ಷರತ್ತಿನಡಿಯಲ್ಲಿ ವಿಮಾ ಖಾಸಗೀಕರಣದ ವಿರುದ್ಧ ಹೋರಾಟವನ್ನು 1989 ರಿಂದಲೇ ಆರಂಭಿಸಿದ್ದು, ಮಲ್ಹೋತ್ರ ಸಮಿತಿಯ ವರದಿಯನ್ನು ಜಾರಿಗೊಳಿಸುವ ಸರ್ಕಾರದ ನೀತಿಯ ವಿರುದ್ಧ ಪ್ರಬಲ ಜನಾಭಿಪ್ರಾಯ ರೂಪಿಸಲು ಸಮಾವೇಶಗಳು, ಪಾಲಿಸಿದಾರರಿಂದ ಲಕ್ಷಾಂತರ ಸಂಖ್ಯೆಯಲ್ಲಿ ಸಹಿ ಸಂಗ್ರಹ, ಜನಪ್ರತಿನಿಧಿಗಳಿಂದ ಪತ್ರಗಳು, ಸ್ಥಳೀಯ ಸಂಸ್ಥೆಗಳಿಂದ ನಿರ್ಣಯಗಳು ವಿಶೇಷವಾಗಿ ಪಶ್ಚಿಮ ಬಂಗಾಲ, ಕೇರಳ ಶಾಸನ ಸಭೆಗಳಲ್ಲಿ ನಿರ್ಣಯಗಳನ್ನು ಅಂಗೀಕರಿಸುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ.

ಜೊತೆಜೊತೆಯಲ್ಲಿ ವಿಮಾ ಕೈಗಾರಿಕೆಯಲ್ಲಿ ಮುಷ್ಕರಗಳು ಸೇರಿದಂತೆ ತೀವ್ರ ಹೋರಾಟ ನಡೆಸಿದ್ದು, ದೇಶದ ದಕ್ಷಿಣದ 3-4 ರಾಜ್ಯಗಳಲ್ಲಿ ರಾಜ್ಯವ್ಯಾಪಿ ಪ್ರಚಾರ ಜಾಥಾ ಕಾರ್ಯಕ್ರಮವನ್ನು ನಡೆಸಿ ಸರ್ಕಾರದ ಖಾಸಗೀಕರಣದ ನೀತಿಯ ವಿರುದ್ಧ ವ್ಯಾಪಾರ ಪ್ರಚಾರ, ಪ್ರಕ್ಷೋಭೆಗಳನ್ನು ನಡೆಸುತ್ತಿದೆ.

ಪಾರ್ಲಿಮೆಂಟಿನಲ್ಲಿ ಮಂಡಿಸಿದ್ದ ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆ (IRA Bill)ಗೆ ಸಿಪಿಐ(ಎಂ) ಒಳಗೊಂಡಂತೆ ಎಲ್ಲ ಎಡಪಕ್ಷಗಳು ಹಾಗೂ ಉಳಿದ ವಿರೋಧ ಪಕ್ಷಗಳು ವಿರೋಧಿಸಿದುದರ ಹಿನ್ನಲೆಯಲ್ಲಿ ಈ ಮಸೂದೆಯನ್ನು ಹಿಂತೆಗೆದುಕೊಳ್ಳುವಂತಾದುದು ಈ ಹೋರಾಟಕ್ಕೆ ಸಂದ ವಿಜಯವಾಗಿದೆ.

ಸಿಪಿಐ(ಎಂ) ಪಕ್ಷವು ದೇಶಾದ್ಯಂತ ಜುಲೈ 97 ರಲ್ಲಿ ಹಮ್ಮಿಕೊಂಡ ಜನಾಂದೋಲನ ಕಾರ್ಯಕ್ರಮದಲ್ಲಿ ವಿಮೆ ಖಾಸಗೀಕರಣಕ್ಕೆ ವಿರೋಧವು ಒಂದು ಅಂಶವಾಗಿತ್ತು.

ಬ್ಯಾಂಕಿಂಗ್ ಉದ್ದಿಮೆಯಲ್ಲಿ ಖಾಸಗೀಕರಣದ ವಿರುದ್ಧ ಅದರ ಉದ್ಯೋಗಿಗಳ ಸಂಘಟನೆಗಳು ಧ್ವನಿ ಎತ್ತಿವೆಯಾದರೂ ಐಕ್ಯ ಹೋರಾಟ ಹಾಗೂ ಸಾರ್ವಜನಿಕ ಅಭಿಪ್ರಾಯ ರೂಪಿಸುವಲ್ಲಿ, ಕೈಗೊಂಡ ಅಸಮರ್ಪಕ ಕ್ರಮಗಳಿಂದಾಗಿ ಸಾರ್ವಜನಿಕ ಕ್ಷೇತ್ರದ ಪ್ರಮುಖ ಬ್ಯಾಂಕುಗಳ ಷೇರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೂಲಕ ಖಾಸಗೀಕರಣದ ಪ್ರಕ್ರಿಯೆ ಆರಂಭವಾಗಿರುವುದು ಒಂದೆಡೆಯಾದರೆ, ವಿದೇಶಿ ಬ್ಯಾಂಕುಗಳಿಗೆ ಮತ್ತು ದೇಶಿ ಖಾಸಗೀ ಬ್ಯಾಂಕುಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸವಲತ್ತುಗಳನ್ನು ನೀಡಿ ಅವು ದೊಡ್ಡ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಲಾಗುತ್ತದೆ.

ಇವೆಲ್ಲವೂ ಸಾಲದೆಂಬಂತೆ ಗ್ರಾಮೀಣ ಪ್ರದೇಶದಲ್ಲಿ ಪ್ರಾದೇಶಿಕ ಬ್ಯಾಂಕುಗಳು (Local Areas Banks) ಎಂಬ ಹೆಸರಿನಲ್ಲಿ ಕಡಿಮೆ ಬಂಡವಾಳ ಹೂಡಿಕೆಯ (ಕೇವಲ ರೂ. 5 ಕೋಟಿ) ಅನುಮತಿಯೊಂದಿಗೆ ಖಾಸಗೀ ಬ್ಯಾಂಕುಗಳನ್ನು ಪ್ರಾರಂಭಿಸಲು ಅನುಮತಿ ನೀಡಿದ್ದು ಈಗಾಗಲೇ ಇಂತಹ ಬ್ಯಾಂಕುಗಳಿಗೆ Reserve Bank ತತ್ವಶಃ ಒಪ್ಪಿಗೆ ನೀಡಿದೆ.

ಅದರಲ್ಲಿ ಒಂದು ಶಿವಮೊಗ್ಗ, ಉ.ಕ., ದ.ಕ.ಗಳಲ್ಲಿ ಪೈ ಸಮೂಹಗಳಿಗೆ ನೀಡಿದ್ದರೆ, ಎರಡನೆಯದು ಗುಲ್ಬರ್ಗಾ, ರಾಯಚೂರು, ಮೆಹಬೂಬನಗರ ಜಿಲ್ಲೆಗಳಲ್ಲಿ ಮಹಾಜನ್ ಎಂಬ ವ್ಯಕ್ತಿಯಿಂದ ಪ್ರಾಯೋಜಿತವಾಗಲಿದೆ. ಈ ಹೊಸ ಖಾಸಗಿ ಪ್ರಾದೇಶಿಕ ಬ್ಯಾಂಕುಗಳು ಅಸ್ತಿತ್ವಕ್ಕೆ ಬಂದರೆ ಈಗಿರುವ ಗ್ರಾಮೀಣ ಬ್ಯಾಂಕುಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಿಗೆ ತೀವ್ರ ಪೈಪೋಟಿ ನೀಡಿ ಅವುಗಳ ವ್ಯವಹಾರವನ್ನು ಕಸಿದುಕೊಂಡು ಅವುಗಳು ಅವಸಾನವಾಗಲಿದೆ.

ಸಹಕಾರಿ ಕ್ಷೇತ್ರದಲ್ಲಿನ ರಾಜಕೀಯ ಹಸ್ತಕ್ಷೇಪದಿಂದಾಗಿ ಈ ಕ್ಷೇತ್ರದ ಹಣಕಾಸು ಸಂಸ್ಥೆಗಳು ನಿರ್ವಹಿಸಬಹುದಾಗಿದ್ದ ಕಾರ್ಯಗಳನ್ನು ಪೂರೈಸಲಾಗದ್ದು ಒಂದೆಡೆಯಾದರೆ ಅಪೆಕ್ಸ್ ಬ್ಯಾಂಕ್ ಹಾಗೂ ನಬಾರ್ಡ್‌ಗಳ ಮೂಲಕ ಈ ಸಂಸ್ಥೆಗಳಿಗೆ ದೊರೆಯುತ್ತಿದ್ದ ಮರುವಿತ್ತದ ಪ್ರಮಾಣ (Refinance fund) ವನ್ನು ತೀವ್ರವಾಗಿ ಕಡಿತಗೊಳಿಸುವ ಉದ್ದೇಶದಿಂದ ಹಲವಾರು ನಿರ್ಬಂಧಗಳನ್ನು ವಿಧಿಸುವ ನೀತಿಗಳನ್ನು ಜಾರಿಗೊಳಿಸುತ್ತಿರುವುದರಿಂದಾಗಿ ಕೃಷಿ ಕ್ಷೇತ್ರಕ್ಕೆ ಸಹಕಾರಿಕ್ಷೇತ್ರದ ಸಾಲ ಸೌಲಭ್ಯಗಳ ಕೊರತೆ ಉಂಟಾಗುತ್ತದೆ.

ಬ್ಯಾಂಕಿಂಗ್ ಕ್ಷೇತ್ರದ ಎಲ್ಲ ನೌಕರರ ಮತ್ತು ಅಧಿಕಾರಿಗಳ ಸಂಘಟನೆಗಳು ಐಕ್ಯ ವೇದಿಕೆ ರಚಿಸಿಕೊಂಡು ಹಲವು ಆರ್ಥಿಕ ಬೇಡಿಕೆಗಳೊಂದಿಗೆ ಪ್ರಾದೇಶಿಕ ಖಾಸಗಿ ಬ್ಯಾಂಕುಗಳ (LAB) ಸ್ಥಾಪನೆಯನ್ನು, ರಾಷ್ಟ್ರೀಯ ಬ್ಯಾಂಕಿಂಗ್ ಫೈನಾನ್ಸ್ ಕಾರ್ಪೋರೇಷನ್‌ಗಳನ್ನು ವಿರೋಧಿಸಿ ಒಂದು ದಿನದ ಮತ್ತು ಎರಡು ದಿನಗಳ ಮುಷ್ಕರಗಳನ್ನು ನಡೆಸಿರುವುದು ಐತಿಹಾಸಿಕವಾಗಿದ್ದು ಶ್ಲಾಘನೀಯವಾಗಿದೆ. ಆದರೆ ಆರ್ಥಿಕ ವೇದಿಕೆಗಳ ಬಗ್ಗೆ ಒಪ್ಪಂದವಾಯಿತೆಂಬ ನೆಪದಲ್ಲಿ ಖಾಸಗೀಕರಣದ ವಿರುದ್ಧದ ಹೋರಾಟವನ್ನು, ಎನ್‌ಬಿಎಫ್‌ಸಿ ಗಳನ್ನು ವಿರೋಧಿಸುವುದನ್ನು ಕೈಬಿಟ್ಟಿರುವುದು ಗಂಭೀರವಾದ ವಿಷಯ, ಯುಕೋ ಬ್ಯಾಂಕಿನಲ್ಲಿ ವೇತನ ಸ್ಥಂಬನ ಜಾರಿಗೊಳ್ಳುವುದಾಗಿ ಪ್ರಕಟವಾದೊಡನೆ ಭಾರೀ ಪ್ರತಿಭಟನೆ ನಡೆದು ಅದನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾದರೂ, ಗ್ರಾಮೀಣ ಬ್ಯಾಂಕ್‌ಗಳಲ್ಲಿ ಅಘೋಷಿತ ವೇತನ ಸ್ಥಂಭನ ಜಾರಿಯಲ್ಲಿದ್ದು, ಇದುವರೆಗಿನ ಹೋರಾಟಗಳಲ್ಲಿ ಈ ಬೇಡಿಕೆ ಇದ್ದಾಗ್ಯೂ, ಕಾನೂನು ಬದ್ಧವೇತನ ಪರಿಷ್ಕರಣೆ ಈ ವಿಭಾಗದಲ್ಲಿ ಜಾರಿಯಾಗಬೇಕಾಗಿದೆ.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇನ್ನು ಮುಂದಾದರೂ ಎಲ್ಲ ಕಾರ್ಮಿಕ ಸಂಘಟನೆಗಳು ಖಾಸಗೀಕರಣದ ಪ್ರಕ್ರಿಯೆ ನಿಲ್ಲಿಸಲು ಐಕ್ಯ ಮತ್ತು ವ್ಯಾಪಕ ಹೋರಾಟ ಹಮ್ಮಿಕೊಳ್ಳುವುದು ತುರ್ತಿನ ಅಗತ್ಯವಿದೆ ಎಂದು ಈ ಸಮ್ಮೇಳನವು ತಿಳಿಯುತ್ತದೆ.

ವಿಮಾ ಕೈಗಾರಿಕೆಯಲ್ಲಿ ಖಾಸಗೀಕರಣದ ವಿರುದ್ಧದ ಹೋರಾಟದೊಂದಿಗೆ ಪಾಲಿಸಿದಾರರ ಸೇವೆಯನ್ನು ಉತ್ತಮಗೊಳಿಸಿ ಪಾಲಿಸಿದಾರರಿಗೆ ಇರುವ ತಮ್ಮ ಬದ್ಧತೆಯನ್ನು ಅನುಷ್ಠಾನಗೊಳಿಸುವಂತೆ ವಿಮಾ ನೌಕರರಿಗೆ ಕರೆ ನೀಡಿರುವುದು ಶ್ಲಾಘನೀಯವಾಗಿದೆ.

ಡಬ್ಲ್ಯೂಟಿಓ, ಐಎಂಎಫ್, ಡಬ್ಲ್ಯೂಬಿಗಳ ಒತ್ತಡಕ್ಕೆ ಮಣಿದು ಬ್ಯಾಂಕಿಂಗ್ ಕ್ಷೇತ್ರದ ಸುಧಾರಣೆಗಳ ಜಾರಿಯನ್ನು ಪರಿಶೀಲಿಸಲು ಎರಡನೆಯ ನರಸಿಂಹಂ ಸಮಿತಿಯನ್ನು ನೇಮಕ ಮಾಡಲಾಗಿದೆ. ಹಾಗೆಯೇ ವಿಮಾ ಕ್ಷೇತ್ರದ ಖಾಸಗೀಕರಣದ ಅಪಾಯದ ಕತ್ತಿ ತೂಗಾಡುತ್ತಲೇ ಇದೆ. ಎರಡನೆಯ ನರಸಿಂಹಂ ಸಮಿತಿಯನ್ನು ವಿರೋಧಿಸಿ 15.1.98 ರಂದು ಒಂದು ದಿನದ ಅಖಿಲ ಭಾರತ ಪ್ರತಿಭಟನಾ ಕಾರ್ಯಕ್ರಮವನ್ನು ಬ್ಯಾಂಕಿಂಗ್ ಕ್ಷೇತ್ರದ ಎಲ್ಲ ಸಂಘಟನೆಗಳು ರೂಪಿಸಿವೆ.

ಸಿಪಿಐ(ಎಂ) ಪಕ್ಷದ ಕರ್ನಾಟಕ ರಾಜ್ಯ ಸಮ್ಮೇಳನವು ಈ ಹೋರಾಟಗಳಿಗೆ ಬೆಂಬಲ ಸೂಚಿಸುತ್ತದೆಯಲ್ಲದೆ ಬ್ಯಾಂಕ್ ಮತ್ತು ವಿಮಾ ಕ್ಷೇತ್ರದ ಉದ್ಯೋಗಿಗಳು ಇನ್ನೂ ಬಲಿಷ್ಠ ಐಕ್ಯ ಚಳುವಳಿಗಳನ್ನು ರೂಪಿಸುವ ಮತ್ತು ಈ ಬಗ್ಗೆ ಜನಗಳಿಗೆ ತಿಳುವಳಿಕೆ ನೀಡುವ ಮೂಲಕ ಸಾರ್ವಜನಿಕ ಕ್ಷೇತ್ರದ ಹಣಕಾಸು ರಂಗದ ಮೇಲಿನ ಧಾಳಿಯನ್ನು ಹಿಮ್ಮೆಟ್ಟಿಸುವಲ್ಲಿ ತೊಡಗಿಸಿಕೊಳ್ಳಬೇಕೆಂದು ಆಶಿಸುತ್ತದೆ.

ಮಂಡನೆ: ನಾಗಭೂಷಣ

ಅನುಮೋದನೆ: ಕೆ.ಎಲ್.ಭಟ್

ಎಡರಂಗಕ್ಕೆ ಅದ್ಭುತ ಗೆಲುವು : ತ್ರಿಪುರಾ ಜನರಿಗೆ ಮನವಿ

ತ್ರಿಪುರಾ ವಿಧಾನ ಸಭೆ ಮತ್ತು ಲೋಕ ಸಭೆಗೆ ಏಕಕಾಲದಲ್ಲಿ ನಡೆಯುವ ಚುನಾವಣೆಗಳಲ್ಲಿ ಎಡರಂಗಕ್ಕೆ ಅದ್ಭುತ ವಿಜಯ ತರುವಂತೆ ಸಿ.ಪಿ.ಐ.(ಎಂ) ತ್ರಿಪುರಾ ರಾಜ್ಯ ಸಮಿತಿ ರಾಜ್ಯದ ಜನರಿಗೆ ಮನವಿ ಮಾಡಿದೆ. ಚುನಾವಣೆ ಪೂರ್ವದ ಪರಿಸ್ಥಿತಿಯನ್ನು ಕೆಡಿಸಲು ಪ್ರತಿಪಕ್ಷಗಳು ಮಾಡುವ ಪ್ರಯತ್ನಗಳನ್ನು ವಿಫಲಗೊಳಿಸುವಂತೆ ಅದು ಕರೆ ನೀಡಿದೆ.

ಈಚೆಗೆ ನಡೆದ ರಾಜ್ಯ ಸಮಿತಿ ಸಭೆ ಕೇಂದ್ರದಲ್ಲಿ ಸಂಯುಕ್ತ ರಂಗಕ್ಕೆ ಬಹುಮತ ನೀಡುವಂತೆಯೂ ಸಿ.ಪಿ.ಐ.(ಎಂ) ಮತ್ತು ಇತರ ಪಕ್ಷಗಳಲ್ಲಿಯೇ ಪುನಃ ವಿಶ್ವಾಸವನ್ನು ಪ್ರದರ್ಶಿಸುವಂತೆಯೂ ಮನವಿ ಮಾಡಿತು.

ಕಳೆದ ಐದು ವರ್ಷಗಳಲ್ಲಿ ಎಲ್ಲಾ ಎಡರಂಗ ವಿರೋಧಿ ಪಕ್ಷಗಳು ಮತ್ತು ಅವುಗಳ ಸಂಘಟನೆಗಳು ಆಳುವ ರಂಗದ ವಿರುದ್ಧ ಪಿತೂರಿ ಹೂಡತ್ತಲೇ ಬಂದಿವೆ. ರಾಜ್ಯದ ಜನತೆಯ ಪರವಾಗಿ ಒಂದೇ ಒಂದು ನಿಲುವನ್ನು ಕೈಗೊಂಡಿಲ್ಲ ಅಥವಾ ರಾಜ್ಯದ ಅಭಿವೃದ್ಧಿಯ ಒಂದೇ ಒಂದು ಯೋಜನೆಯನ್ನು ಕೈಗೆತ್ತಿಕೊಂಡಿಲ್ಲ ಎಂದು ರಾಜ್ಯ ಸಮಿತಿ ಟೀಕಿಸಿದೆ. ಈಗ ಚುನಾವಣೆ ಸಮೀಪಿಸುತ್ತಿರುವಂತೆ ಹೀನ ಶಕ್ತಿಗಳು ಜನಾಂಗೀಯ ಘರ್ಷಣೆಯನ್ನು ಹುಟ್ಟು ಹಾಕಿ ಅಸ್ಥಿರತೆ ಉಂಟು ಮಾಡಲು ಪ್ರಯತ್ನಿಸುತ್ತಿವೆ ಎಂದು ಅದು ಹೇಳಿದೆ.

ಪ್ರತಿ ಪಕ್ಷದ ಕಾರ್ಯಕರ್ತರು ಎಡ ಪಕ್ಷಗಳನ್ನು ಸೇರಲು ಹಾತೊರೆಯುತ್ತಿರುವುದು ಪ್ರತಿ ಪಕ್ಷಗಳ ರಾಜಕೀಯ ಸೈದ್ಧಾಂತಿಕ ದಿವಾಳಿಕೋರತನಕ್ಕೆ ಕನ್ನಡಿಯಾಗಿದೆ. ಹೀಗಾಗಿ ಅವುಗಳು ರಾಜ್ಯದಲ್ಲಿ ಹೆಚ್ಚೆಚ್ಚಾಗಿ ಛಿದ್ರಕಾರಿ ಹಾಗೂ ಹಿಂಸಾತ್ಮಕ ರಾಜಕೀಯವನ್ನು ಅವಲಂಭಿಸಬೇಕಾಗಿದೆ ಎಂದು ಸಿ.ಪಿ.ಐ.(ಎಂ) ವಿಶ್ಲೇಷಿಸಿದೆ.

ಇಂಥ ಸನ್ನಿವೇಶದಲ್ಲಿ ಎಲ್ಲಾ ವಿಭಾಗಗಳ ದೇಶಪ್ರೇಮಿ, ಶಾಂತಿಪ್ರಿಯ, ಜಾತ್ಯಾತೀತ ಹಾಗೂ ಪ್ರಜಾಪ್ರಭುತ್ವವಾದಿ ಜನರು ಎಡರಂಗಕ್ಕೆ ಸ್ಪಷ್ಟ ಬಹುಮತ ನೀಡಲು ಮುಂದಾಗಬೇಕು ಎಂದು ರಾಜ್ಯ ಸಮಿತಿ ಕರೆ ಕೊಟ್ಟಿದೆ.

ಅನಗತ್ಯವಾಗಿದ್ದ ಗೋಲಿಬಾರು

ಈ ಗೋಲಿಬಾರನ್ನು ಖಂಡಿತವಾಗಿಯೂ ನಿವಾರಿಸಬಹುದಿತ್ತು. ಮೇಲಿನ ಹಂತದ ಆಡಳಿತಾತ್ಮಕ ವೈಫಲ್ಯದ ಕಾರಣದಿಂದಾಗಿ ಗೋಲಿಬಾರು ನಡೆಯಿತು.

ಇದು ಜನವರಿ 12 ರಂದು ಮಧ್ಯಪ್ರದೇಶದ ಬೇತಾಲ್ ಜಿಲ್ಲೆಯ ಮುಲ್ತಾಯಿಯಲ್ಲಿ ನಡೆದ ಗೋಲಿಬಾರಿನ (ವರದಿ ಕಳೆದ ಸಂಚಿಕೆಯಲ್ಲಿ) ಬಗ್ಗೆ ವ್ಯಕ್ತವಾದ ಅಭಿಪ್ರಾಯ. ಆದರೆ ಈ ಮಾತನ್ನು ಹೇಳಿದವರು ಬೇರಾರು ಅಲ್ಲ. ಸ್ವತಃ ಮಧ್ಯಪ್ರದೇಶ ಆಡಳಿತ ಪಕ್ಷವಾದ ಕಾಂಗ್ರೆಸ್ಸಿನ ಒಬ್ಬ ಹಿರಿಯ ಮುಖಂಡ ಕೇಂದ್ರದ ಮಾಜಿ ಕೃಷಿ ಸಚಿವ ಬಲರಾಂ ಜಾಖಡ್.

ತಮಗೆ ಬಂದಿರುವ ಮಾಹಿತಿ ಪ್ರಕಾರ ಗೋಲಿಬಾರಿನಲ್ಲಿ 18 ಜನರು ಸತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಮುಲ್ತಾಯಿ ಮತ್ತು ಬೇತಾಲ್‌ಗೆ ಭೇಟಿ ನೀಡಿದ ನಂತರ ಜಾಖಡ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಅವರ ಜೊತೆಯಲ್ಲಿದ್ದ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ರಾಮ್‌ನರೇಶ್ ಯಾದವ್ ಕೂಡ ಗೋಲಿಬಾರು ಅನಗತ್ಯವಾಗಿತ್ತು ಎಂದು ಅಭಿಪ್ರಾಯಪಟ್ಟರು.

ಆಂಧ್ರಪ್ರದೇಶದಲ್ಲಿ ಸಂಕಷ್ಟದ ಸುಳಿ ; ರೈತರ ಆತ್ಮಹತ್ಯೆ

ರಾಷ್ಟ್ರ ಸ್ವತಂತ್ರವಾಗಿ 50 ವರ್ಷ ಕಳೆದರೂ ದೇಶಕ್ಕೆ ಅನ್ನ, ಬಟ್ಟೆ ನೀಡುವ ರೈತರು ಇನ್ನೂ ಸಂಕಷ್ಟದ ಸುಳಿಯಲ್ಲಿ ಸಿಲುಕಿದ್ದಾರೆ. ಬಡತನ ಬವಣೆಯಿಂದ ಹೊರಬರಲಾಗದೆ ಚಡಪಡಿಸುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ ಈಚೆಗಷ್ಟೆ ಹತ್ತಿ ಬೆಳೆಯುವ 22 ರೈತರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ರೈತರ ದಯಾನೀಯ ಸ್ಥಿತಿಗೆ ದ್ಯೋತಕವಾದ ಆಘಾತಕಾರಿ ಘಟನೆಗಳಾಗಿ ಕಣ್ಣಮುಂದೆ ನಿಂತಿದೆ.

ವಾರಂಗಲ್ ಮತ್ತು ಸುತ್ತಮುತ್ತ ಜಿಲ್ಲೆಗಳಲ್ಲಿ 1992 ರಿಂದಲೂ ಸರಿಯಾಗಿ ಮಳೆಯಿಲ್ಲದೆ ರೈತರು ಭಾರೀ ಕಷ್ಟ ನಷ್ಟಕ್ಕೆ ಒಳಗಾಗಿದ್ದಾರೆ. ಐದಾರು ವರ್ಷಗಳಿಂದ ಪ್ರತಿಕೂಲ ಹವಾಮಾನದಿಂದಾಗಿ ನಷ್ಟವಾಗುತ್ತಿದೆ. ಈ ಬಾರಿಯೂ ಬೆಳೆದು ನಿಂತ ಪೈರು ಕೀಟ ಹಾವಳಿಯಿಂದಾಗಿ ನಾಶವಾಗಿ ಸಂಕಷ್ಟ ಪಡುವಂತಾಯಿತು. ಸಾಲಸೋಲ ಮಾಡಿದ್ದ ರೈತರು ದಿಕ್ಕು ತೋಚದೆ ಪ್ರಾಣವನ್ನೇ ಕಳೆದುಕೊಳ್ಳುತ್ತಿದ್ದಾರೆ.

ಈಗ ಬರಗಾಲದ ಸ್ಥಿತಿ ಎಷ್ಟು ತೀವ್ರವಾಗಿದೆ ಎಂದರೆ ವಾರಂಗಲ್ ಜಿಲ್ಲೆಯ 51 ತಾಂಡಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಲಾಗಿದೆ. ಆದರೆ ಅಲ್ಲಿನ ಪರಿಹಾರಕ್ಕಾಗಿ ಸರಕಾರ ಸೂಕ್ತ ಕಾಮಗಾರಿಗಳನ್ನು ಕೈಗೆತ್ತಿಕೊಂಡಿಲ್ಲ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಸ್ಥಿತಿ ಬಿಗಡಾಯಿಸಬಹುದು. ಅದನ್ನು ತಡೆಯಲು ಸರಕಾರಗಳು ಸೂಕ್ತ ಕ್ರಮಗಳನ್ನು ತಕ್ಷಣವೇ ಕೈಗೊಳ್ಳುವುದು ಅಗತ್ಯ.

ಅಸ್ಸಾಂ : ಮತದಾರರ ಪಟ್ಟಿಯಿಂದ ತೆಗೆಯಲು ವಿರೋಧ

1998 ರ ಮತದಾರರ ಪಟ್ಟಿಯಿಂದ ಅಸ್ಸಾಮಿನ ಸುಮಾರು 3.7 ಲಕ್ಷ ಜನರ ಹೆಸರನ್ನು ತೆಗೆದು ಹಾಕಲು ಚುನಾವಣಾ ಆಯೋಗ ನಿರ್ಧರಿಸಿರುವುದನ್ನು ಸಿ.ಪಿ.ಐ.(ಎಂ) ಅಸ್ಸಾಂ ರಾಜ್ಯ ಸಮಿತಿ ಬಲವಾಗಿ ವಿರೋಧಿಸಿದೆ.

ಹೆಸರಿನ ಮುಂದೆ 'ಡಿ' ಎಂದು ನಮೂದಿಸ ಲಾದ ವ್ಯಕ್ತಿಗಳು ಮುಂದಿನ ಚುನಾವಣೆಯಲ್ಲಿ ಮತ ಚಲಾಯಿಸು ವುದನ್ನು ನಿಷೇಧಿಸುವಂತೆ ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ಚುನಾವಣೆ ಆಯೋಗ ಸೂಚನೆ ಕಳುಹಿಸಿದೆ. ಅದರಂತೆ ಅಸ್ಸಾಮಿನ ಮತದಾರರ ಅಂತಿಮ ಪಟ್ಟಿಯನ್ನು ಡೆಸೆಂಬರ್ 9 ರಂದು ಪ್ರಕಟಿಸಲಾಗಿದ್ದು 3.7 ಲಕ್ಷ ಜನರ ಹೆಸರಿನ ಮುಂದೆ 'ಡಿ' ಅಕ್ಷರವನ್ನು ನಮೂದಿಸಲಾಗಿದೆ. 'ಡಿ' ಅಂದರೆ 'ಅನುಮಾನಾಸ್ಪದ ಅಥವಾ ವಿವಾದಾತ್ಮಕ' ಎಂದರ್ಥ.

ರಾಜ್ಯದ ಮತದಾರರ ಅಂತಿಮ ಪಟ್ಟಿ ಸಿದ್ಧಗೊಳ್ಳುತ್ತಿದ್ದಂತೆಯೇ ಅಸ್ಸಾಮಿನಲ್ಲಿ ವಿವಾದದ ಅಲೆಯೇ ಎದ್ದಿತ್ತು. 'ಡಿ' ಗುರುತುಳ್ಳವರನ್ನು ಮತ ಚಲಾವಣೆಯಿಂದ ಅನರ್ಹಗೊಳಿಸಬೇಕು ಎಂದು ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ (ಅಸು) ಮತ್ತು ಸಿ.ಪಿ.ಐ. ಮೊದಲಾದ ಸಂಘಟನೆಗಳು, ಪಕ್ಷಗಳು ಒತ್ತಾಯಿಸಿದವು. ಆದರೆ ವ್ಯಕ್ತಿಗಳನ್ನು 'ಅನುಮಾನಾಸ್ಪದ' ಎಂದು ಗುರುತು ಮಾಡುವ ಚುನಾವಣಾ ಆಯೋಗದ ನಿರ್ಧಾರವನ್ನು ಸಿ.ಪಿ .ಐ.(ಎಂ) ಮತ್ತು ಇತರ ಕೆಲವು ಪಕ್ಷಗಳು ಪ್ರಬಲವಾಗಿ ಪ್ರತಿಭಟಿಸಿದವು. ಯಾವುದೇ ವ್ಯಕ್ತಿಯ ನಾಗರೀಕತ್ವವನ್ನು ನಿರ್ಧರಿಸುವ ಹಕ್ಕು ಚುನಾವಣಾ ಆಯೋಗಕ್ಕೆ ಇಲ್ಲ ಎಂದು ಸಿ.ಪಿ.ಐ.(ಎಂ) ಪ್ರತಿಕ್ರಿಯಿಸಿದೆ.

ಕೇವಲ ಅನುಮಾನದ ಮೇಲೆ 3.67 ಲಕ್ಷ ಜನರನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಲು ಆಯೋಗದ ನಿರ್ಧಾರ ಏಕಪಕ್ಷೀಯವಾದುದು ಎಂದು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ॥ ಹೇಮೇನ್ ದಾಸ್ ಖಂಡಿಸಿದ್ದಾರೆ. ಇದು ತೀರಾ ದರಾದೃಷ್ಟಕರ ನಿರ್ಧಾರ, ಕಾನೂನಿಗೆ ವಿರುದ್ಧವಾದುದು ಎಂದು ಅವರು ಹೇಳಿದ್ದಾರೆ.

ಎಲ್ಲಾ ಭಾರತೀಯ ಪ್ರಜೆಗಳನ್ನು ಒಳಗೊಂಡ ಸರಿಯಾದ ಮತದಾರರ ಪಟ್ಟಿಯ ಆಧಾರದಲ್ಲಿ ಚುನಾವಣೆಗಳು ನಡೆಯಬೇಕು ಎಂದು ಸಿಪಿಐ(ಎಂ) ಪ್ರತಿಪಾದಿಸುತ್ತಾ ಬಂದಿದೆ. ಅಸ್ಸಾಂ ಒಪ್ಪಂದದನ್ವಯ 1971ನ್ನು ಗಡುವಿನ ಘಟ್ಟವನ್ನಾಗಿ ಪರಿಗಣಿಸಿ, ಅಕ್ರಮ ವಿದೇಶಿಯರನ್ನು ಗುರುತಿಸಿ ಅವರನ್ನು ಗಡಿಪಾರು ಮಾಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ ಎಂದು ರಾಜ್ಯ ಸಮಿತಿ ಹೇಳಿಕೆ ತಿಳಿಸಿದೆ. ಅಕ್ರಮ ವಿದೇಶಿಯರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆಯಬೇಕೆಂದು ಪಕ್ಷ ಒತ್ತಾಯಿಸುತ್ತದೆ. ಆದರೆ ಚುನಾವಣೆ ಆಯೋಗದ ಈಚಿನ ಸೂಚನೆ ನಿಜವಾದ ಪ್ರಜೆಗಳ ಹಿತಕ್ಕೆ ಮಾರಕವಾದುದಾಗಿದೆ ಎಂದು ಸಿ.ಪಿ. ಐ.(ಎಂ) ಅಭಿಪ್ರಾಯಪಟ್ಟಿದೆ.

ಅಸ್ಸಾಂ : ಕಾಂಗ್ರೆಸ್-ಬಿ.ಜೆ.ಪಿ. ಪರಾಜಯಕ್ಕೆ ರಂಗ ಕಾರ್ಯಕ್ರಮ

ಅಸ್ಸಾಮಿನ ಎಲ್ಲಾ 14 ಲೋಕಸಭಾ ಕ್ಷೇತ್ರಗಳಲ್ಲಿ ಆಳುವ ಅಸ್ಸಾಂ ಗಣ ಪರಿಷತ್(ಎ.ಜಿ.ಪಿ.) ಮತ್ತು ಸಿ.ಪಿ.ಐ.(ಎಂ) ಸಹಿತ ಅದರ ಮಿತ್ರ ಪಕ್ಷಗಳು ಸಮಾನ್ಯ ಅಭ್ಯರ್ಥಿಯನ್ನು ಕಣಕ್ಕಿಳಿಸಲಿವೆ. ...ಜೆ.ಪಿ. ಮತ್ತು ಕಾಂಗ್ರೆಸ್‌ನ್ನು ಸೋಲಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ.

ಸಿ.ಪಿ.ಐ.(ಎಂ) ಸ್ವತಃ ತನ್ನ ಇಬ್ಬರು ಅಭ್ಯರ್ಥಿಗಳು ಮತ್ತು ಮಿತ್ರಪಕ್ಷಗಳನ್ನು ...ಲ್ಲಿಸಲು ಗರಿಷ್ಟ ಸಂಪನ್ಮೂಲ ಸಂಗ್ರಹ ...ಮಾಡುತ್ತಿದೆ. ಫೆಬ್ರವರಿ 16 ರಂದು ...ರಾಜ್ಯದಲ್ಲಿ ಚುನಾವಣೆ ನಡೆಯಲಿದೆ.

ಎಜಿಪಿ, ಸಿಪಿಐ(ಎಂ), ಸಿಪಿಐ ಮತ್ತು ...ಸ್ಸಾಂ ಸಂಯುಕ್ತ ಜನತಾ ಪಕ್ಷ(ಉಪ್ಪಾ) ...ಖಂಡರು ಹಲವು ಸುತ್ತಿನ ಮಾತುಕತೆ ...ಸಿ ಸ್ಥಾನ ಹೊಂದಾಣಿಕೆ ಒಪ್ಪಂದಕ್ಕೆ ...ನರು.

...ಡು ಕ್ಷೇತ್ರಗಳಲ್ಲಿ ಪಕ್ಷದ ಸ್ಪರ್ಧೆ

...ವಾರಪೇಟ ಮತ್ತು ಸಿಲ್ಚಾರ್ ...ಗಳಲ್ಲಿ ಸಿ.ಪಿ.ಐ.(ಎಂ) ಸ್ಪರ್ಧಿಸಲಿದೆ. ...ಬ್ಬಿ ಕ್ಷೇತ್ರದಲ್ಲಿ ಸಿ.ಪಿ.ಐ. ಸ್ಪರ್ಧಿಸುತ್ತದೆ.

ಕಳೆದೆರಡು ಸಾರ್ವತ್ರಿಕ ಚುನಾವಣೆಗಳಲ್ಲಿ ಸಿ.ಪಿ.ಐ.(ಎಂ) ಹುರಿಯಾಳು ಕಾಂ॥ ಉದ್ದವ್ ಬರುವ ಬಾರಪೇಟ್ ಕ್ಷೇತ್ರದಲ್ಲಿ ಗೆದ್ದಿದ್ದಾರೆ.

ಹತಾಶ ಯತ್ನ

ಅಸ್ಸಾಮಿನಲ್ಲಿ ಬೇರೆ ಬೇರೆ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳಲು ಬಿ.ಜೆ.ಪಿ. ಮತ್ತು ಕಾಂಗ್ರೆಸ್ ಭಾರೀ ಪ್ರಯತ್ನ ನಡೆಸಿದೆ. ಆದರೆ ಅವುಗಳ ಹತಾಶ ಯತ್ನಕ್ಕೆ ಯಾವುದೇ ಫಲ ಗಿಟ್ಟಿಲ್ಲ.

ವಿಜಯರಾಜೇ ಸಿಂಧ್ಯ ಸ್ಪರ್ಧೆಗೆ ವಿರೋಧ

ಶಿವಪುರಿ (ಮಧ್ಯಪ್ರದೇಶ) : ಬಿ.ಜೆ.ಪಿ. ನಾಯಕಿ ವಿಜಯರಾಜೇ ಸಿಂಧ್ಯ ಗುನಾ-ಶಿವಪುರಿ ಲೋಕಸಭಾ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸುವುದಕ್ಕೆ ಸ್ವತಃ ಬಿ.ಜೆ.ಪಿಯಲ್ಲೇ ವಿರೋಧ ವ್ಯಕ್ತವಾಗಿದೆ. 'ರಾಜಮಾತೆ' ಯನ್ನು ಮರು ಸ್ಪರ್ಧೆಗೆ ಇಳಿಸುವ ಬಿ.ಜೆ.ಪಿ. ನಿರ್ಧಾರವನ್ನು ಪ್ರತಿಭಟಿಸಿ ನೂರಾರು ಕಾರ್ಯಕರ್ತರು ಜನವರಿ 18 ರಂದು ಶಿವಪುರಿಯಲ್ಲಿ ವಿಜಯರಾಜೇ ಸಿಂಧ್ಯಾ ಅವರ ಎದುರಿನಲ್ಲೇ ಮತ ಪ್ರದರ್ಶನ ನಡೆಸಿದರು.

ವಿಜಯರಾಜೇ ಪ್ರಯಾಣಿಸುತ್ತಿದ್ದ ಕಾರಿನ ಮುಂದೆ ಧರಣಿ ನಡೆಸಿದ ಕಾರ್ಯಕರ್ತರು ವಿಜಯರಾಜೇ ಅವರ ಬೆಂಬಲಿಗರೊಂದಿಗೆ ಕೈ ಕೈ ಮಿಲಾಯಿಸಿ ಹೊಡೆದಾಡಿದರು. ಒಂದು ತಮಾಷೆಯೆಂದರೆ, ವಿಜಯ ರಾಜೇ ಬದಲಿಗೆ ಅವರ ಮಗಳು ಯಶೋಧರಾ ಅವರನ್ನು ಸ್ಪರ್ಧೆಗಿಳಿಸಬೇಕು ಎಂಬುದು 'ರಾಜಮಾತೇ'ಯ ವಿರೋಧಿಗಳ ಬೇಡಿಕೆಯಾಗಿದೆ.

'ಸಿಟು ನೇತಾರ ಕಾಶ್ಯಪ ನಿಧನ'

ಸಿ.ಐ.ಟಿ.ಯು ಉಪಾಧ್ಯಕ್ಷ, ಮಹಾರಾಷ್ಟ್ರ ಸಿ.ಪಿ.ಐ.(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ಕಾಮ್ರೇಡ್ ಬಿ.ಪಿ. ಕಾಶ್ಯಪ್ 1997 ಡಿಸೆಂಬರ್ 31 ರಂದು ನಾಗಪುರದಲ್ಲಿ ಹೃದಯಾಘಾತದಿಂದ ನಿಧನರಾದರು.

ಕಾಂ॥ ಕಾಶ್ಯಪ ಅನೇಕ ವರ್ಷಗಳ ಕಾಲ ಪಕ್ಷದ ನಾಗಪುರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಆಗಿದ್ದರು. ಡಿಸೆಂಬರ್ 24 ರಿಂದ 26 ರವರೆಗೆ ಔರಂಗಾಬಾದಿನಲ್ಲಿ ನಡೆದ ಸಮ್ಮೇಳನದಿಂದ ಮರಳಿದ ಸ್ವಲ್ಪವೇ ಅವಧಿಯಲ್ಲಿ ಅವರು ನಿಧನರಾದರು.

ಕಾಶ್ಯಪ್ ನಿಧನಕ್ಕೆ ಹೃತ್ಪೂರ್ವಕ ಸಂತಾಪ ಸೂಚಿಸಿ ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿಹರ್ಕಿಷನ್‌ಸಿಂಗ್ ಸುರ್ಜಿತ್ ಪಕ್ಷದ ರಾಜ್ಯ ಸಮಿತಿ ಮತ್ತು ದಿವಂಗತರ ಕುಟುಂಬದ ಸದಸ್ಯರಿಗೆ ಸಂದೇಶ ಕಳುಹಿಸಿದ್ದಾರೆ.

ಆಂಧ್ರ ಪ್ರದೇಶದಲ್ಲಿ ಹತ್ತಿ ಬೆಳೆಗಾರರ ಆತ್ಮಹತ್ಯೆ

...ರಕಾರ ಸರಿಯಾದ ಪಾಠ ಕಲಿಯಬೇಕು ಎಂದು ಕಿಸಾನ್ ಸಭಾ

ಆಂಧ್ರಪ್ರದೇಶದಲ್ಲಿ ಐವತ್ತಕ್ಕೂ ಹೆಚ್ಚು ಹತ್ತಿ ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡ ದಾರುಣ ಸನ್ನಿವೇಶದ ಬಗ್ಗೆ ಅಖಿಲಭಾರತ ಕಿಸಾನ್ ಸಭಾ(ಎಐಕೆಎಸ್) ಆಳವಾದ ವಿಷಾದ ವ್ಯಕ್ತಪಡಿಸಿದೆ. ಇದಕ್ಕೆ ಕೇವಲ ಮಾನವ ನಿರ್ಮಿತ ...ಫಲತೆ ಕಾರಣ ಎಂದಿರುವ ಅದು ದುಃಖತಪ್ತ ...ಟುಂಬಗಳಿಗೆ ಹಾರ್ದಿಕ ಸಂತಾಪ ...ಸಿದೆ. ಈ ಮಾನವ ನಿರ್ಮಿತ ದುರಂತಕ್ಕೆ ...ಷಿ ಇಲಾಖೆಯ ವಿಫಲತೆಯೆ ಹೊಣೆ. ...ಸೂಕ್ತ ಸಮಯದಲ್ಲಿ ಸಲಹೆ ನೀಡುವಲ್ಲಿ ಅದರ ವಿಫಲತೆ, ಇಂತಹ ಸಲಹೆಯ ...ಆತ್ಮಹತ್ಯೆ ರೈತರೊಡನೆ ಸಂಪರ್ಕದ ಅಭಾವ, ಕಲಬೆರಕೆ ಕೀಟನಾಶಕಗಳ ಪೂರೈಕೆ ಅದರ ...ಕಾಬಿಟ್ಟಿ ಬಳಕೆ ಮತ್ತು ಸಾರ್ವಜನಿಕ ...ಕಾಸು ಸಂಸ್ಥೆಗಳು ಸುಲಭ ಶರತ್ತುಗಳ ಮೇಲೆ ...ಸಾಕಷ್ಟು ಸಾಲ ಒದಗಿಸುವಲ್ಲಿ ...ದರಿಂದ ಅವರು ನಿರ್ದಯ ಬಡ್ಡಿ ...ವ್ಯಾಪಾರಿಗಳ ಮುಂದೆ ಕೈಯೊಡ್ಡ...ದ್ದು - ಇವೆಲ್ಲಾ ಈ ದುರಂತಕ್ಕೆ ಕಾರಣ ಎಂದು ಎಐಕೆಎಸ್ ಹೇಳಿದೆ.

ಕೆಲವು ಜಿಲ್ಲೆಗಳಲ್ಲಿ ಅಕಾಲ ಮಳೆಯಿಂದಾಗಿ ಹತ್ತಿ ಹಿಂಜುವ ಕೆಲಸವನ್ನು ಮುಂದೂಡಬೇಕಾಗಿತ್ತು. ಈ ಕುರಿತ ಕೃಷಿ ಇಲಾಖೆಯ ಪ್ರಮುಖ ಅಧಿಕಾರಿಗಳ ಸಲಹೆ ರೈತರನ್ನು ತಲುಪಲಿಲ್ಲ. ಇದರಿಂದ ಕೀಟಗಳಿಂದಾದ ಹಾನಿ ಹೆಚ್ಚಿದ್ದಷ್ಟೇ ಅಲ್ಲ, ಹಿಂಜಿದ ಹತ್ತಿಯ ಬೆಲೆ ನಿರೀಕ್ಷೆಗಿಂತ ಬಹಳ ಕೆಳಗಿಳಿದು ರೈತರು ಭಾರೀ ನಷ್ಟ ಅನುಭವಿಸಬೇಕಾಯಿತು. ಹಲವು ಕಡೆ ಕಲಬೆರಕೆ ಕೀಟನಾಶಕಗಳು ರೈತರ ಸಂಕಟಗಳನ್ನು ಇನ್ನಷ್ಟು ಹೆಚ್ಚಿಸಿದವು. ಸಾಕಷ್ಟು ಹಣಕಾಸು ಸಂಸ್ಥೆಗಳ ಸಾಲ ವ್ಯವಸ್ಥೆಯಿಲ್ಲದೆ ಸಾಲ ತೀರಿಸಲಾಗದ ರೈತರು ತಮ್ಮ ಕುಟುಂಬಗಳ ಹೆಂಗಸರ ಒಡವೆಗಳನ್ನು ಒತ್ತೆಯಿಟ್ಟಿದ್ದು, ಅವು ಹರಾಜಾಗಲಾರಂಭಿಸಿದಾಗ ಪರಿಸ್ಥಿತಿ ಅಸಹನೀಯವಾಗಿ ಆತ್ಮಹತ್ಯೆಯ ಹಾದಿ ಹಿಡಿದರು ಎಂದು ಕಿಸಾನ್ ಸಭಾ ಹೇಳಿದೆ.

ಈ ಆತ್ಮಹತ್ಯೆಗಳ ಕಾರಣಗಳ ಕೂಲಂಕುಷ ವಿಚಾರಣೆ ನಡೆಸಿ ಮುಂದಿನ ವರ್ಷಗಳಲ್ಲಿ ಇಂತಹ ವಿನಾಶಕಾರಿ ಘಟನೆಗಳು ನಡೆಯದಂತೆ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಬೇಕು ಎಂದು ಎಐಕೆಎಸ್ ಒತ್ತಾಯಿಸಿದೆ. ಮೃತ ರೈತರ ಕುಟುಂಬಗಳಿಗೆ ಸಾಕಷ್ಟು ಪರಿಹಾರ ಒದಗಿಸಬೇಕು ಮಾತ್ರವಲ್ಲ ಪರ್ಯಾಯ ಬೆಳೆ ಬಿತ್ತನೆಗೆ ನೆರವಾಗಬೇಕು. ಈ ದುರಂತದ ವಿಚಾರಣೆಯ ಫಲಿತಾಂಶ ಗಳಿಗೆ ವ್ಯಾಪಕ ಪ್ರಚಾರ ಕೊಟ್ಟು ಮುಂದಿನ ಎಲ್ಲಾ ಬೆಳೆಗಳಲ್ಲಿ ರೈತರಿಗೆ ಸೂಕ್ತ ಸಮಯದಲ್ಲಿ ಸಲಹೆ ದೊರೆಯುವಂತೆ ಮಾಡಬೇಕು. ಕಲಬೆರಕೆ ಕೀಟನಾಶಕಗಳ ಪೂರೈಕೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪ್ರತಿ ಯೊಂದು ರೀತಿಯ ಕೀಟನಾಶಕದ ಸರಿಯಾದ ಪ್ರಮಾಣ ಹಾಗೂ ಅದನ್ನು ಬಳಸುವ ಸಮಯ ಹಾಗೂ ವಿಧಾನದ ಬಗ್ಗೆ ರೈತರಿಗೆ ಪೂರ್ಣ ಶಿಕ್ಷಣ ನೀಡಬೇಕು ಎಂದು ಒತ್ತಾಯಿಸಿರುವ ಎಐಕೆಎಸ್ ಈ ಭೀಕರ ದುರಂತದಿಂದ ಆಂಧ್ರಪ್ರದೇಶದ ತೆಲುಗು ದೇಶಂ ಸರಕಾರ ಸೂಕ್ತ ಪಾಠ ಕಲಿಯುತ್ತದೆ ಎಂದು ಆಶಿಸಿದೆ. (ಐಎನ್‌ಎಸ್)

ರೈತರ ಬಗ್ಗೆ ಉಪೇಕ್ಷೆ, ದಮನದ ನಿಲುವು

ಕಳೆದ ತಿಂಗಳು ರಾಜಸ್ತಾನದ ಬಿಜೆಪಿ ಸರಕಾರ! ಈ ತಿಂಗಳು ಮಧ್ಯಪ್ರದೇಶದ ಕಾಂಗ್ರೆಸ್(ಐ) ಸರಕಾರ!

'ಮಾನವೀಯ ಮುಖ'ದ ಜಾಗತೀಕರಣವನ್ನು ಬೆಂಬಲಿಸುತ್ತೇವೆ ಎನ್ನುವ ಬಿಜೆಪಿ ಹಾಗೂ ಕಾಂಗ್ರೆಸ್ (ಐ) ರಾಜ್ಯ ಸರಕಾರಗಳು ರೈತರ ಬಗ್ಗೆ ಉಪೇಕ್ಷೆ ತೋರುತ್ತಿರುವುದಲ್ಲದೆ ದಮನವನ್ನೂ ಹರಿಯಬಿಟ್ಟಿವೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಖಂಡಿಸಿದೆ. ಕಳೆದ ಡಿಸೆಂಬರ್ 10 ರಂದು ರಾಜಸ್ತಾನದ ಗಂಗಾನಗರದ ಬಿಜೆಪಿ ಆಡಳಿತ ಪ್ರತಿಭಟನೆಗಿಳಿದ ಹತ್ತಿ ಬೆಳೆಗಾರರ ಮೇಲೆ ಗೋಲೀಬಾರು ನಡೆಸಿ 40 ಕ್ಕೂ ಹೆಚ್ಚು ಮಂದಿಯನ್ನು ಗಂಭೀರವಾಗಿ ಜಖಂಗೊಳಿಸಿತು ನಂತರ ಮಧ್ಯ ಪ್ರದೇಶದ ಮುಲಾಯಿಯಲ್ಲಿ ಕಾಂಗ್ರೆಸ್(ಐ) ಸರಕಾರವೂ ಅದನ್ನೆ ಮಾಡಿ 16 ರೈತರ ಬಲಿ ತೆಗೆದುಕೊಂಡಿದೆ. ಲಕ್ನೌನಲ್ಲಿ ಜನವರಿ 15 ರಂದು ರ‍್ಯಾಲಿಯನ್ನು ಸಂಘಟಿಸುವ ಉತ್ತರ ಪ್ರದೇಶದಲ್ಲೂ ಅದೇ ಸ್ಥಿತಿ.

ರಾಜಸ್ತಾನದಿಂದ ಹಿಡಿದು ಬಿಹಾರದ ವರೆಗೆ ಇಡೀ ದೇಶವನ್ನು ಇದು ತಟ್ಟಿದೆ. ಸಟ್ಟಾ ಮಂದಿ, ಸಗಟು ಮಾರಾಟಗಾರರು, ರಫ್ತುಗಾರರು, ಭ್ರಷ್ಟ ಅಧಿಕಾರಶಾಹಿಗಳು ಮತ್ತು ಉದಾರೀಕರಣ ಪರ ರಾಜಕಾರಣಿಗಳು 'ಸ್ಥಿರತೆ'ಯ ಹೆಸರಲ್ಲಿ ಜನಗಳ ಲೂಟಿ ಮಾಡಲು ಕೈ ಮಿಲಾಯಿಸಿರುವುದು ಸ್ಪಷ್ಟ. ಈರುಳ್ಳಿ ಬೆಲೆ ಗಗನಕ್ಕೇರಿದ್ದು ಇದಕ್ಕೆ ಇತ್ತೀಚಿನ ಉದಾಹರಣೆ. ಈರುಳ್ಳಿಯ ಮುಕ್ತ ರಫ್ತಿಗೆ ಅವಕಾಶ ನೀಡಿದ್ದರಿಂದ ಹೀಗಾಗಿದೆ ಎಂದಿ ರುವ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ರೈತರ ಪ್ರತಿಭಟನೆಗಳಲ್ಲಿ ಸೇರಿ ಕೊಳ್ಳಬೇಕು, ಭೂಮಾಲಕರಿಗೆ ಕೋಟ್ಯಾಂತರ ರೂಪಾಯಿಗಳ ಲಾಭ ಮಾಡಿಕೊಡುವ ರಾಜ್ಯ ಸರಕಾರಗಳಿಂದ ರೈತರಿಗೆ ಸಾಕಷ್ಟು ಪರಿಹಾರ ಒದಗಿಸಬೇಕು ಎಂದು, ಕೆಲಸ ಕಳಕೊಂಡ ದಿನಗಳಿಗೆ ಕೃಷಿಕೂಲಿಕಾರರಿಗೆ ಅವರು ಪರಿಹಾರ ನೀಡುವಂತೆ ಮಾಡಬೇಕು ಹಾಗೂ ತಕ್ಷಣ 'ಕೆಲಸಕ್ಕಾಗಿ ಆಹಾರ' ಯೋಜನೆಯನ್ನು ಆರಂಭಿಸಬೇಕು ಎಂದು ತನ್ನ ಘಟಕಗಳಿಗೆ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ' ಕರೆ ನೀಡಿದೆ.

(ಐಎನ್‌ಎಸ್)

ಸಿ.ಪಿ.ಐ.(ಎಂ)

ನಿರ್ಣಯಗಳು

ರಾಜ್ಯದ ವಿವಿಧ ದುಡಿಯುವ ಜನವಿಭಾಗಗಳ ಸಮಸ್ಯೆಗಳತ್ತ, ಅವುಗಳ ಪರಿಹಾರದತ್ತ, ರಾಜ್ಯದ ಅಭಿವೃದ್ಧಿ ಅವಶ್ಯಕತೆಗಳತ್ತ ಗಮನ ಸೆಳೆದಿರುವ ಸಿಪಿಐ(ಎಂ) ನ 16ನೇ ರಾಜ್ಯಸಮ್ಮೇಳನದ ನಿರ್ಣಯಗಳಲ್ಲಿ ಕೆಲವನ್ನು ಹಿಂದಿನ ಸಂಚಿಕೆಗಳಲ್ಲಿ ಓದಿರುವಿರಿ. ಇಲ್ಲಿ ಇನ್ನೂ ಕೆಲವು ನಿರ್ಣಯಗಳನ್ನು ಕೊಡಲಾಗಿದೆ.

ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳಲ್ಲಿ ಬಂಡವಾಳ ಹಿಂತೆಗೆತದ ವಿರುದ್ಧ

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಕರ್ನಾಟಕದಲ್ಲಿ ಸ್ಥಾಪಿಸಿದ ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳು ಅತ್ಯಂತ ಮಹತ್ವದ ಸಾಧನೆ ಪಡೆದಿವೆ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಮೈಸೂರು ಸಂಸ್ಥಾನದಲ್ಲಿ ವಿಶ್ವೇಶ್ವರಯ್ಯನವರು ತಮ್ಮ ದೂರದೃಷ್ಟಿಯಿಂದ ಆರ್ಥಿಕ ಅಭಿವೃದ್ಧಿಗಾಗಿ ಭದ್ರ ತಳಪಾಯ ಹಾಕಿಕೊಟ್ಟಿದ್ದರು.

ಸ್ವಾತಂತ್ರ್ಯಾನಂತರ ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಗೊಂಡ ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳಾದ ಎಚ್.ಎ.ಎಲ್., ಎಚ್.ಎಂ.ಟಿ., ಐ.ಟಿ.ಐ, ಬಿ.ಇ.ಎಲ್, ಬಿ.ಇ.ಎಂ.ಎಲ್, ಇತ್ಯಾದಿ ದೇಶದ ಆರ್ಥಿಕ ಅಭಿವೃದ್ಧಿಯ ಜೊತೆಗೇ ಬೆಂಗಳೂರು ನಗರದ ಅಭಿವೃದ್ಧಿಯಲ್ಲಿಯೂ ಗಣನೀಯ ಪಾತ್ರವಹಿಸಿವೆ.

ಆದರೆ, ಐ.ಎಂ.ಎಫ್., ಜಾಗತೀಕ ಬ್ಯಾಂಕ್ ಸಂಸ್ಥೆಗಳ ಶರತ್ತುಗಳಿಗನು ಗುಣವಾಗಿ ಜಾರಿಗೊಳಿಸಿದ ಹೊಸ ಆರ್ಥಿಕ ನೀತಿಯಿಂದಾಗಿ ಬೆಂಗಳೂರಿನಲ್ಲಿರುವ ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳಿಗೆ ಮರಣ ಪ್ರಾಯವಾಗಿ ಪರಿಣಮಿಸಿದೆ. ಸಾರ್ವಜನಿಕ ಸಂಸ್ಥೆಗಳ ಭದ್ರನೆಲೆಯಾದ ಬೆಂಗಳೂರಿನಲ್ಲಿ ಇದು ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಅಟ್ಟಹಾಸ ಮೆರೆಯುತ್ತಿವೆ. ಬೆಂಗಳೂರು ನಗರ ಕಾರ್ಮಿಕ ವರ್ಗದ ಪ್ರಧಾನ ಕೇಂದ್ರವಾಗಿದ್ದು, ಈಗ ವ್ಯಾಪಾರಸ್ಥರು, ಏಜೆಂಟರು, ದಲ್ಲಾಳಿಗಳು, ನವಶ್ರೀಮಂತರು ಮುಂತಾದವರಿಂದ ತುಂಬಿ ತುಳುಕುತ್ತಿದೆ. ಇವರೆಲ್ಲರೂ ಬಹುರಾಷ್ಟ್ರೀಯ ಸಂಸ್ಥೆಗಳ ಬಾಲಬಡುಕರಾಗುತ್ತಿದ್ದಾರೆ. ಈ ಮೂಲದಿಂದಲೇ ರಾಜಕೀಯ ಪುಢಾರಿಗಳ ಮತ್ತು ಸಾಮಾಜಿಕ ಅಪರಾಧಿಗಳ ಒಂದು ಬೃಹತ್ ಜಾಲವೇ ಬೆಳೆದು ಬರುತ್ತಿದೆ. ಕಾರ್ಮಿಕ ವರ್ಗದ ನೇತೃತ್ವದ ಜನಾಂದೋಲನ ಮಾತ್ರ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಸ್ವಾಮ್ಯದಲ್ಲಿರುವ ರಾಷ್ಟ್ರೀಯ ಸವಲತ್ತನ್ನು ಉಳಿಸಬಹುದು, ಆ ಮೂಲಕ ಬೆಂಗಳೂರು ನಗರವನ್ನು ಹಾಗೂ ರಾಜ್ಯವನ್ನು ಸಾಮ್ರಾಜ್ಯಶಾಹಿ ಕೊಳ್ಳೆಗಾರರಿಂದ ರಕ್ಷಿಸಬಹುದು.

ಖಾಸಗೀಕರಣ, ಉದಾರೀಕರಣ, ಜಾಗತೀಕರಣ ಪ್ರಕ್ರಿಯೆಯ ಒಂದು ನಿರ್ದಿಷ್ಟ ಕ್ರಮವಾಗಿದೆ. ಅಧಿಕಾರಶಾಹಿ ಮತ್ತು ರಾಜಕೀಯ ಪುಢಾರಿಗಳ ಕುಟಿಲ ಜಾಲದಿಂದ ಮೊದಲು ಸಾರ್ವಜನಿಕ ಸಂಸ್ಥೆಗಳನ್ನು ರೋಗಗ್ರಸ್ಥವನ್ನಾಗಿ ಮಾಡಲಾಗುತ್ತಿದೆ. ನಂತರ ಅವುಗಳ ಷೇರು ಬಂಡವಾಳವನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅಗ್ಗದ ಬೆಲೆಗಳಿಗೆ ಹರಾಜು ಹಾಕಲಾಗುತ್ತಿದೆ. ಈ ರೀತಿ ಬೆಂಗಳೂರಿನ ಐಟಿಐ ಮತ್ತು ಬಿಇಎಂಎಲ್ ಸಂಸ್ಥೆಗಳು ಅನತಿಕಾಲದಲ್ಲಿಯೇ ಮಾರಲ್ಪಡಲಿವೆ. ಸಂಪರ್ಕ ತಂತ್ರಜ್ಞಾನದಲ್ಲಿ (ಟೆಲಿಕಮ್ಯುನಿಕೇಶನ್) ಕ್ರಾಂತಿಕಾರಕ ಮಾರ್ಪಾಡುಗಳು ಸಂಭವಿಸುತ್ತಿರುವಾಗಲೇ, ಅದೇ ಕ್ಷೇತ್ರದ ದೈತ್ಯ ಸಂಸ್ಥೆಯಾದ ಐ.ಟಿ.ಐ ರೋಗಗ್ರಸ್ಥವಾಗಿ ಮಾರ್ಪಟ್ಟಿರುವುದು ಉದಾರೀಕರಣದ ವಿಪರೀತ.

ಬಿ.ಇ.ಎಂ.ಎಲ್ ನ್ನು ಬಹುರಾಷ್ಟ್ರೀಯ ಸಂಸ್ಥೆಗಳ ಕೂಡ ಜಿ.ಇ.ಸಿ.-ಎ.ಐ.ಸಿ(ರ) ನುಂಗಿ ಹಾಕಲು ತಯಾರಿ ನಡೆಸುತ್ತಿದೆ. ಕೆ.ಜಿ.ಎಫ್ ನ ಚಿನ್ನದ ಗಣಿಯ ಪಾಡೂ ತೂಗುಯ್ಯಾಲೆಯಲ್ಲಿದೆ. ವಿಮೆ ಮತ್ತು ಬ್ಯಾಂಕು ಉದ್ಯಮಗಳನ್ನು ಖಾಸಗೀಕರಣಗೊಳಿಸಲು ವಿಶ್ವ ವ್ಯಾಪಾರ ಸಂಸ್ಥೆಯೊಂದಿಗೆ ಭಾರತ ಈಗಾಗಲೇ ಒಪ್ಪಂದ ಮಾಡಿಕೊಂಡಿದೆ.

ಸಾರ್ವಜನಿಕ ಸಂಸ್ಥೆಗಳ ಷೇರು ಬಂಡವಾಳವನ್ನು ಸರಕಾರ ಹಿಂತೆಗೆದುಕೊಂಡು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಹರಾಜು ಹಾಕುವುದರ ವಿರುದ್ಧ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕೇಂದ್ರ ಸಾರ್ವಜನಿಕ ಸಂಸ್ಥೆಗಳ ಕಾರ್ಮಿಕರ ಸಂಘಟನೆಗಳು 1998 ರ ಜನವರಿ 27 ರಂದು ದೇಶಾದ್ಯಂತ ಪ್ರತಿಭಟನಾ ಕಾರ್ಯಕ್ರಮ ನಡೆಸಲು ಕೈಗೊಂಡ ನಿರ್ಧಾರವನ್ನು ಸಿ.ಪಿ.ಐ(ಎಂ) ರಾಜ್ಯ 16ನೇ ಸಮ್ಮೇಳನವು ಸ್ವಾಗತಿಸುತ್ತದೆ.

ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ರಕ್ಷಣೆಗಾಗಿ ಮತ್ತು ಅವುಗಳ ಷೇರು ಬಂಡವಾಳವನ್ನು ಸರಕಾರ ಹಿಂತೆಗೆದು ಕೊಳ್ಳುವ ವಿರುದ್ಧ ರಾಜ್ಯಾದ್ಯಂತ ರ್ಯಾಲಿಗಳನ್ನು ಇತರ ಪ್ರತಿಭಟನಾ ಕಾರ್ಯಕ್ರಮಗಳನ್ನು ಸಂಘಟಿಸಲು ಕಾರ್ಮಿಕ ವರ್ಗಕ್ಕೆ ಸಿ.ಪಿ.ಐ(ಎಂ) ಸಮ್ಮೇಳನ ಕರೆ ಕೊಡುತ್ತದೆ. ಕಾರ್ಮಿಕ ಸಂಘಟನೆಗಳು ಸಾರ್ವಜನಿಕ ಸಂಸ್ಥೆಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿ ವಹಿಸಬೇಕೆಂದೂ, ಆ ಮೂಲಕ ರಾಷ್ಟ್ರ ಪ್ರೇಮಿ ಶಕ್ತಿಗಳನ್ನು ವೃದ್ಧಿಸುವಂತೆ ಸಮ್ಮೇಳನ ಕರೆ ಕೊಡುತ್ತದೆ.

ಮಂಡನೆ: ವಿ.ಜೆ.ಕೆ. ನಾಯರ್,
ಅನುಮೋದನೆ: ಸಿ.ಆರ್. ಭಟ್.

ಜಾತಿ ಸಂಘಟನೆಗಳ ಅಪಾಯ ಕುರಿತು

ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಲ್ಲೂ ಜಾತಿವಾದಿ ಸಂಘಟನೆಗಳು, ಹೆಚ್ಚಾಗಿ ಬೆಳೆಯಲಾರಂಭಿಸಿವೆ. ಮುಖ್ಯವಾಗಿ ದಲಿತರು, ಕೆಳಜಾತಿಗಳಿಗೆ ಸೇರಿದ ಜನರು ಜಾತಿ ಆಧಾರದ ಮೇಲೆ ಸಂಘಟಿತರಾಗುತ್ತಿದ್ದಾರೆ. ಈ ಜನ ವಿಭಾಗದವರು ಜಾತಿವಾರು ಸಂಘಟಿತರಾಗಲು ಮುಖ್ಯವಾಗಿ ಮೇಲ್ಜಾತಿಗಳು ಹಿಂದುಳಿದ ಕೆಳಜಾತಿಗಳ ಜನರ ಮೇಲೆ ಪ್ರಾಬಲ್ಯ, ದಬ್ಬಾಳಿಕೆ ಹಾಗೂ ಅಸ್ಪೃಶ್ಯತೆ ಆಚರಣೆಗಳು, ಸಾಮಾಜಿಕವಾಗಿ ಕೀಳಾಗಿ ನೋಡುವ ಪ್ರವೃತ್ತಿಗಳಿಂದ, ನಿರುದ್ಯೋಗ, ಬಡತನಗಳಿಂದ ಬೇಸತ್ತು ಈ ಹಿಂದುಳಿದ ಜಾತಿಗಳಲ್ಲಿ ಯುವಜನರಲ್ಲಿ ಮೂಡಿದ ಹೊಸ ಎಚ್ಚರಿಕೆಯು ಜಾತಿ ಸಂಘಗಳು ರೂಪುಗೊಳ್ಳಲು ಪ್ರಚೋದನೆ ನೀಡಿದೆ. ಆದರೆ ಇತ್ತೀಚೆಗೆ ಎಲ್ಲ ಜಾತಿಗಳ, ಉಪ ಜಾತಿಗಳ ಸಂಘಗಳು ಆಗುತ್ತಿವೆ. ಈ ಜಾತಿ ಸಂಘಗಳಿಗೆ ಕರ್ನಾಟಕ ರಾಜ್ಯದ ಅಧಿಕಾರದಲ್ಲಿರುವ ಜನತಾದಳ ಪಕ್ಷದಲ್ಲಿ ಅಧಿಕಾರಕ್ಕಾಗಿ ಮಂತ್ರಿ ಮಂಡಲ ಮಟ್ಟದಲ್ಲಿ ಮೇಲ್ಜಾತಿ ಕೆಳಜಾತಿಗೆ ಸೇರಿದ ಮುಖಂಡರ ನಡುವೆ ಪೈಪೋಟಿಯು, ರಾಜ್ಯದಲ್ಲಿ ಬೇರೆ ಬೇರೆ ಕಡೆ ಜಾತಿ ಸಂಘಗಳಿಗೆ ಪ್ರೋತ್ಸಾಹ ನೀಡುವ ಕೆಲಸ ನಡೆಯುತ್ತಿದೆ. ರಾಜ್ಯದ ಮಂತ್ರಿಗಳು ಸೇರಿದಂತೆ ಕಾಂಗ್ರೆ, ಬಿ.ಜೆ.ಪಿ.ಯ ಮುಖಂಡರುಗಳು ಜಾತಿ ಸಂಘಗಳ ಜೊತೆಗೆ ಭಾಗವಹಿಸಿ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಈ ಜಾತಿ ಸಂಘಗಳ ಬೆಳವಣಿಗೆಯು ಜಾತಿ ವೈಷಮ್ಯಗಳನ್ನು ಬೆಳೆಸುತ್ತಿದ್ದು ಒಬ್ಬರನ್ನೊಬ್ಬರು ಮನುಷ್ಯರಂತೆ ನೋಡುವ ಬದಲಾಗಿ ಕೇವಲ ಜಾತಿ ಆಧಾರದ ಮೇಲೆ ಗುರುತಿಸುವ ಪ್ರವೃತ್ತಿ ಬೆಳೆಯುತ್ತಿದೆ. ಇದು ಗ್ರಾಮೀಣ ಪ್ರದೇಶದಲ್ಲಿ ವಿಶೇಷವಾಗಿ ಹಾಗೂ ಎಲ್ಲಡೆ ಈ ಜಾತಿ ಸಂಘಗಳ ಪರಿಣಾಮವಾಗಿ ದುಡಿಯುವ ಜನರ ಐಕ್ಯತೆಗೆ ಭಾರಿ ಆತಂಕ ಉಂಟು ಮಾಡುವಂತಹದ್ದಾಗಿದೆ. ಜಾತಿ ಸಂಘಗಳ ಪ್ರಭಾವ ನಮ್ಮ ಸದಸ್ಯರು, ಸಮೂಹಿಕ ಸಂಘಟನೆಗಳ ಕಾರ್ಯಕರ್ತರ ಮೇಲೂ ಆಗುತ್ತಿದೆ. ಜಾತಿ ಸಂಘಗಳು ಮುಖ್ಯವಾಗಿ ಆಯಾ ಜಾತಿಯ ಶ್ರೀಮಂತರು, ಭೂಮಾಲೀಕರ ನಾಯಕತ್ವದಲ್ಲಿದ್ದು, ಆ ಜಾತಿ ಸಂಘಗಳ ಸಮ್ಮೇಳನಗಳನ್ನು ಮಾಡಿ ಅಲ್ಲಿ ಮುಖ್ಯ ಬೇಡಿಕೆಗಳಲ್ಲಿ ಆ ಜಾತಿಯವರಿಗೆ ಸರಕಾರದ ಮಂತ್ರಿ ಮಂಡಲದಲ್ಲಿ, ಅಧಿಕಾರ ಸ್ಥಾನಗಳಲ್ಲಿ ಅವಕಾಶಗಳಿಗಾಗಿ ಒತ್ತಾಯಿಸುವುದು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು, ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ನಡೆಸಲು ಅವಕಾಶಗಳಿಗೆ ಮತ್ತು ಮೀಸಲಾತಿಗಾಗಿ ಒತ್ತಾಯಿಸುವುದಾಗಿದೆ. ಇದು ಆ ಜಾತಿ ಸಂಘಗಳ ಮೇಲ್ ವರ್ಗದ ಜನರ ಲಾಭದ ದೃಷ್ಟಿ, ಅದರ ಇತಿಮಿತಿಗಳನ್ನು ಬಯಲುಗೊಳಿಸುತ್ತದೆ.

ಆದ್ದರಿಂದ ಈ ವ್ಯವಸ್ಥೆಯಲ್ಲಿ ಜನತೆಯ ಸಮಸ್ಯೆಗಳಿಗೆ ಪರಿಹಾರವನ್ನು "ಜಾತಿ ಆಧಾರಿತವಾಗಿ ಸಂಘಟಿತರಾಗಿ ಪರಿಹಾರ ಕಾಣಲು ಸಾಧ್ಯವಿಲ್ಲ. ಬದಲಾಗಿ ವರ್ಗ ಆಧಾರದಲ್ಲಿ ಸಂಘಟಿತರಾಗುವ ಮೂಲಕ ಪರಿಹಾರ ಕಾಣಲು ಸಾಧ್ಯ." ಎಂಬದನ್ನು ಜನರಲ್ಲಿ ತಿಳುವಳಿಕೆ ಮೂಡಿಸಬೇಕಾಗಿದೆ. ಹಾಗೂ ನಮ್ಮ ಪಕ್ಷವು ಎಲ್ಲ ಹಂತಗಳಲ್ಲಿ ಜಾತಿ ಹೆಸರಲ್ಲಿ ನಡೆಯುವ ದಬ್ಬಾಳಿಕೆಗಳನ್ನು ಸಕಾಲದಲ್ಲಿ ಮಧ್ಯ ಪ್ರವೇಶಿಸಿ ವಿರೋಧಿಸುವುದು. ಹಾಗೂ ಅಸ್ಪೃಶ್ಯತೆ, ಸಾಮಾಜಿಕವಾಗಿ ಜಾತಿ ಆಧಾರದ ಮೇಲೆ ನಡೆಯುವ ತಾರತಮ್ಯಗಳ ವಿರುದ್ಧ ಹಾಗೂ ಭೂಮಿ ಮತ್ತು ಕೂಲಿ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಹೋರಾಟವನ್ನು ನಮ್ಮ ಪಕ್ಷ ಮುಂಚೂಣಿಯಲ್ಲಿದ್ದು ನಡೆಸುವ ಮೂಲಕ ಈ ಜಾತಿ ಸಂಘಗಳ ಪ್ರಭಾವವನ್ನು ಎದುರಿಸಲು ಎಲ್ಲಾ ಶಾಖೆಗಳ ಸದಸ್ಯರಿಗೂ 16ನೇ ರಾಜ್ಯ ಸಮ್ಮೇಳನ ಕರೆ ನೀಡುತ್ತದೆ.

ಪಕ್ಷದ ಸದಸ್ಯರು ಮುಖಂಡರು ಜಾತಿ ಸಂಘಗಳ ಯಾವುದೇ ಸಭೆ ಸಮಾರಂಭಗಳಲ್ಲಿ ಭಾಗವಹಿಸಬಾರದು ಹಾಗೂ ಯಾವುದೇ ರಾಜಕೀಯ ಪಕ್ಷದ ಮುಖಂಡರು ಜಾತಿ ಸಂಘಗಳಲ್ಲಿ ಭಾಗವಹಿಸಬಾರದು ಎಂದು 16 ನೇ ರಾಜ್ಯ ಸಮ್ಮೇಳನ ಕರೆ ಕೊಡುತ್ತದೆ.

ಮಂಡನೆ - ಜಿ.ಸಿ. ಬಯ್ಯಾರೆಡ್ಡಿ
ಅನುಮೋದನೆ - ವಿ.ಎಸ್. ಶಿವಶಂಕರ್

ರೈಲ್ವೇ ಅಭಿವೃದ್ಧಿ ಯೋಜನೆಗೆ ಒತ್ತಾಯ

ಭಾರತದ ರೈಲ್ವೇ ನಕ್ಷೆಯಲ್ಲಿ ಕರ್ನಾಟಕ ರಾಜ್ಯವು ಅತ್ಯಂತ ಕನಿಷ್ಠ ಮಟ್ಟದಲ್ಲಿ ರೈಲ್ವೇ ಯೋಜನೆಯನ್ನು ಹೊಂದಿರುವ ರಾಜ್ಯವಾಗಿದೆ. ಸ್ವಾತಂತ್ರ್ಯ ನಂತರದಲ್ಲಿ ಭಾರತ ದೇಶ ಕಂಡ ಹೆಚ್ಚಿನ ರೈಲ್ವೇ ಮಂತ್ರಿಗಳಾಗಿ ಕರ್ನಾಟಕ ರಾಜ್ಯದಿಂದ ಆಗಿ ಹೋದರೂ ಕೂಡ ರಾಜ್ಯದ ರೈಲ್ವೇ ಅಭಿವೃದ್ಧಿಯ ಬಗ್ಗೆ ಕನಿಷ್ಠ ಗಮನ, ಆಸಕ್ತಿ ವಹಿಸದಿರುವುದು ನಮಗೆಲ್ಲರಿಗೆ ತಿಳಿದಿರುವ ಸಂಗತಿ. ಇವರುಗಳು ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ಹೊಸ ರೈಲ್ವೇ ಯೋಜನೆಯ ಬಗ್ಗೆಯಾಗಲೀ, ಅಥವಾ ರೈಲ್ವೇ ಹಳಿ ಪರಿವರ್ತನೆಯ ಕೆಲಸಗಳಾಗಲೀ ಮಾಡಿರುವುದಿಲ್ಲ. ನಮ್ಮ ಪಕ್ಷ ಕಳೆದ ಹಲವಾರು ವರುಷಗಳಿಂದ ರಾಜ್ಯದ ರೈಲ್ವೇ ಅಭಿವೃದ್ಧಿಯ ಬಗ್ಗೆ ಸ್ಪಷ್ಟ ಕಾರ್ಯಕ್ರಮಗಳನ್ನು ಹೊಂದಿ ಹೋರಾಟ ನಡೆಸಿರುವುದನ್ನು ಸ್ಮರಿಸಬಹುದು. ಇದರ ಫಲವಾಗಿ ಕಳೆದ ಎರಡು ಮೂರು ವರುಷಗಳಿಂದ ರೈಲ್ವೇ ಯೋಜನೆಗೆ ಸಂಬಂಧಿಸಿ ಒಂದು ಸ್ಫೂರ್ತಿ ದಾಯಕ ಕಾರ್ಯಕ್ರಮಗಳನ್ನು ಕೇಂದ್ರಸರಕಾರ ಕೈಗೊಂಡರೂ ಕೂಡಾ ಇದರ ಅನುಷ್ಠಾನಕ್ಕೆ ಸಂಬಂಧಿಸಿ ರೈಲ್ವೇ ಬಜೆಟ್‌ನಲ್ಲಿ ಹೆಚ್ಚಿನ ಮಹತ್ವ ನೀಡಲಾಗಿಲ್ಲ. ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗುವಷ್ಟು ಅನುದಾನವನ್ನು ನೀಡಲಾಗಿಲ್ಲ.

ಕೈಗಾರಿಕಾ ನಕ್ಷೆಯಲ್ಲಿ ರಾಜ್ಯ ಎರಡನೇ ಸ್ಥಾನಕ್ಕೆ ನೆಗೆಯುತ್ತಿರುವ ಸಂದರ್ಭದಲ್ಲಿ ನಮ್ಮ ರಾಜ್ಯದ ಅಭಿವೃದ್ಧಿಗೆ ಪೂರಕವಾಗಿ ರೈಲ್ವೇ ಯೋಜನೆಗಳು ತ್ವರಿತವಾಗಿ ಕೈಗೆತ್ತಿಕೊಂಡು ಪೂರ್ಣಗೊಳಿಸುವುದು ಅತೀ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಕೋಲಾರ ನಗರದಲ್ಲಿ ನಡೆಯುತ್ತಿರುವ ಸಿ.ಪಿ.ಐ.(ಎಂ) ನ 16 ನೇ ರಾಜ್ಯ ಸಮ್ಮೇಳನವು ಈ ಕೆಳಗಿನ ರೈಲ್ವೇ ಯೋಜನೆಗಳನ್ನು ಪ್ರಥಮ ಆದ್ಯತೆಯ ಮೇಲೆ ಕೈಗೆತ್ತಿಕೊಂಡು ಜಾರಿಗೊಳಿಸಬೇಕೆಂದು ಒತ್ತಾಯಿಸುತ್ತದೆ.

1) ಬೆಂಗಳೂರು ಮೈಸೂರು ರೈಲ್ವೇ ಹಳಿಯನ್ನು ಡಬ್ಬಲ್ ಲೈನ್ ಮಾಡಬೇಕು ಮತ್ತು ಪೂರ್ತಿ ವಿದ್ಯುದೀಕರಣಗೊಳಿಸಬೇಕು

2) ಬೀದರ್ ಮತ್ತು ಗುಲ್ಬರ್ಗ ನಗರವನ್ನು ಸಂಚರಿಸುವ ಹೊಸ ರೈಲ್ವೇ ಮಾರ್ಗ ನಿರ್ಮಿಸಬೇಕು.

3)ಗದಗ ಮತ್ತು ಗುಲ್ಬರ್ಗಾ ನಗರವನ್ನು ಸಂಚರಿಸುವ ಹೊಸ ರೈಲ್ವೇ ಮಾರ್ಗ ನಿರ್ಮಿಸಬೇಕು

4) ಹಾಸನ ಮಂಗಳೂರು ರೈಲ್ವೇ ಗೇಜ್ ಪರಿವರ್ತನೆಯಲ್ಲಿ ಬಾಕಿ ಉಳಿದಿರುವ ಸಕಲೇಶಪುರ ಮಂಗಳೂರು ವಿಭಾಗದ ಕೆಲಸವನ್ನು ಕೂಡಲೇ ಪೂರ್ಣ ಗೊಳಿಸಿ ಮಂಗಳೂರು ಬೆಂಗಳೂರು ಮಧ್ಯೆ ರೈಲ್ವೇಯನ್ನು ಸಂಚಾರಕ್ಕೆ ತೆರವು ಗೊಳಿಸಬೇಕು.

5) ಹಾಸನವನ್ನು ಮಡಿಕೇರಿಗೆ ಸಂಪರ್ಕಿಸುವ ಹೊಸ ರೈಲ್ವೇ ಮಾರ್ಗವನ್ನು ವಯಾ ವಿರಾಜಪೇಟೆ ಮೂಲಕ ನಿರ್ಮಿಸಬೇಕು.

6) ಮಡಿಕೇರಿ, ಮಂಗಳೂರು ಹೊಸ ರೈಲ್ವೇ ಮಾರ್ಗವನ್ನು ನಿರ್ಮಿಸಬೇಕು.

7) ಮೈಸೂರು, ತಲಚೇರಿ ವಯಾ ವಿರಾಜಪೇಟೆ ಮೂಲಕ ಹಾದು ಹೋಗುವ ಯಜನೆಯನ್ನು ದೇವೇಗೌಡ ಸರಕಾರವು ಬಜೆಟ್ಟಿನಲ್ಲಿ ಪ್ರಸ್ತಾವಿಸಲ್ಪಟ್ಟರೂ ಆ ಯೋಜನೆ ಕಾರ್ಯರೂಪಕ್ಕೆ ಬಂದಿರುವುದಿಲ್ಲ ಆದುದರಿಂದ ಈ ಯೋಜನೆಯನ್ನು ಕೂಡಲೇ ಪ್ರಾರಂಭಿಸಬೇಕು.

8) ಹುಬ್ಬಳ್ಳಿ ಅಂಕೋಲ ಮಧ್ಯೆ ಹೊಸ ರೈಲ್ವೇ ಮಾರ್ಗ ನಿರ್ಮಾಣವಾಗಬೇಕು.

9) ಹರಿಹರ, ಕೊಟ್ಟುರುಗಳ ಮಧ್ಯೆ ಹೊಸ ರೈಲ್ವೇ ಮಾರ್ಗ ನಿರ್ಮಾಣವಾಗಬೇಕು.

10)ಸೋಲಾಪುರ, ಗದಗ ರೈಲ್ವೇ ಮಾರ್ಗ ಬ್ರಾಡ್ ಗೇಜ್‌ಗೆ ಪರಿವರ್ತನೆಯಾಗಬೇಕು.

11) ಕೊಂಕಣ ರೈಲ್ವೇ ಕಾಮಗಾರಿಯನ್ನು ಕೂಡಲೇ ಪೂರ್ತಿಗೊಳಿಸಿ ಪ್ರಯಾಣಿಕರ ರೈಲು ಓಡಿಸಬೇಕು.

ಮಂಡನೆ: ಕೃಷ್ಣಪ್ಪ ಕೊಂಚಾಡಿ
ಅನುಮೋದನೆ: ಡಿ.ಜೆ.ಗೊಂದಕರ್

ಸಕ್ಕರೆ ಉದ್ಯಮದ ಕಾರ್ಮಿಕರ, ಕಬ್ಬು ಬೆಳೆಯುವ ರೈತರ ಸಮಸ್ಯೆಗಳ ಕುರಿತು

ಕಬ್ಬು ಬೆಳೆಯುವ ಮತ್ತು ಸಕ್ಕರೆ ಉತ್ಪಾದಿಸುವ ರಾಜ್ಯಗಳಲ್ಲಿ ಕರ್ನಾಟಕವು ದೇಶದಲ್ಲಿ ಪ್ರಮುಖ ರಾಜ್ಯವಾಗಿದೆ. ಜಾಗತೀಕರಣ ಉದಾರೀಕರಣದ ದುಷ್ಪರಿಣಾಮಗಳು ಇತರ ಉದ್ಯಮಗಳ ಮೇಲೆ ಬೀರಿದಂತೆ ಸಕ್ಕರೆ ಉದ್ಯಮದ ಮೇಲೆ ಉಂಟಾಗಿರುವುದರಿಂದ ಸಕ್ಕರೆ ಉದ್ಯಮದ ಬಿಕ್ಕಟ್ಟಿನಿಂದ ಕಚ್ಚಾ ಪದಾರ್ಥವಾದ ಕಬ್ಬು ಬೆಳೆಯುವ ರೈತರು, ಕಾರ್ಮಿಕರು ತೀವ್ರವಾದ ಸಂಕಟಕ್ಕೆ ಒಳಗಾಗಿದ್ದಾರೆ. ವಿಶ್ವಬ್ಯಾಂಕ್ ಕೇಂದ್ರ ಸರಕಾರಕ್ಕೆ ಮಾಡಿರುವ ಶಿಫಾರಸ್ಸಿನ ಪ್ರಕಾರ ಸರಕಾರ ಒಂದು ಉನ್ನತ ಮಟ್ಟದ ಸಮಿತಿ ರಚಿಸಿ ಸಕ್ಕರೆ ಉದ್ಯಮದ ಆಧುನೀಕರಣದಿಂದ ಅದರ ಉತ್ಪಾದಕತೆ ಹೆಚ್ಚಿಸಲು ಕ್ರಮ, ಕಬ್ಬಿನ ಬೆಳೆ ನೀತಿ ಈ ಉದ್ಯಮಕ್ಕೆ ಸಂಬಂಧಿಸಿದ ಕಾನೂನು ಪುನರ್‌ರಚನೆ ಡಿಲೈಸೆನ್ಸ್, ಡಿ ಕಂಟ್ರೋಲ್ ಇತ್ಯಾದಿ ಕ್ರಮಗಳನ್ನು ಕುರಿತು ವರದಿ ಸಲ್ಲಿಸಲು ಸೂಚಿಸಿದೆ. ಈ ದಿಕ್ಕಿನ ಕ್ರಮಗಳಿಂದ ಸಕ್ಕರೆ ಲಾಬಿಯ ಪ್ರಬಲ ಶಕ್ತಿಗಳಿಗೆ ಸಹಾಯಕವಾಗುವುದಲ್ಲದೆ, ರೈತರಿಗಾಗಲೀ, ಕಾರ್ಮಿಕರಿಗಾಗಲೀ ಏನೂ ಪ್ರಯೋಜವಾಗಿಲ್ಲ. ಬದಲಿಗೆ ಮಾರಕವಾಗಲಿದೆ. ಡಿ ಲೈಸನ್ಸ್‌ನಿಂದ ರೈತರು ಸಾಮಾನ್ಯ ಜನರು ಷೇರು ಬಂಡವಾಳದಿಂದ ಸ್ಥಾಪಿಸಿರುವ ಸಹಕಾರಿ ವಲಯದ ಸಕ್ಕರೆ ಕಾರ್ಖಾನೆಗಳು ಮತ್ತು ಸರಕಾರೀ ವಲಯದ ಕಾರ್ಖಾನೆಗಳಿಗೆ ಒಡೆತ ಬಿದ್ದು ಅವು ಮುಚ್ಚುವ ಸ್ಥಿತಿ ಒದಗಲಿದೆ. ಡಿಕಂಟ್ರೋಲ್‌ನಿಂದ ಸಕ್ಕರೆ ಬೆಲೆ ಸ್ಪರ್ಧಾತ್ಮಕವಾಗಿ ಸಾಮಾನ್ಯ ಜನರ ಕೈಗೆ ಎಟುಕದಂತಾಗಿದೆ. ಪಡಿತರ ಪದ್ಧತಿಯ ಮೂಲಕ ಸಕ್ಕರೆ ವಿತರಿಸುವ ಪದ್ಧತಿಗೆ ಮಾರಕವಾಗಲಿದೆ.

ಕಬ್ಬಿಗೆ ಬೆಲೆ ನಿಗದಿ ಪಡಿಸುವ ವಿಧಾನವೇ ಅವೈಜ್ಞಾನಿಕವಾಗಿದೆ. ಕಬ್ಬು ಬೆಳೆದ ರೈತರು ಹಲವು ವರ್ಷಗಳಿಂದ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದಾರೆ. 1995-96 ನೇ ಸಾಲಿನಲ್ಲಿ ಅಧಿಕ ಪ್ರಮಾಣದಲ್ಲಿ ರೈತರು ಕಬ್ಬು ಬೆಳೆದರು. ಕರ್ನಾಟಕದಲ್ಲಿ 32 ಸಕ್ಕರೆ ಕಾರ್ಖಾನೆಗಳು ಇದ್ದರೂ ಆರ್ಥಿಕವಾಗಿ ಬೆಳೆದ ಕಬ್ಬನ್ನು ಅರೆಯಲು ಸಾಧ್ಯವಿಲ್ಲದೆ ಹೊರ ರಾಜ್ಯಗಳಿಗೆ ಸಾಗಿಸಲು ಸಾರಿಗೆ ವ್ಯವಸ್ಥೆಯಿಲ್ಲದೆ ರೈತರು ಹೆಚ್ಚುವರಿ ಕಬ್ಬಿಗೆ ಬೆಂಕಿ ಹಾಕಬೇಕಾಯಿತು. ಇದರಿಂದ ರೈತರು ಅಪಾರ ಪ್ರಮಾಣದ ಆರ್ಥಿಕ ನಷ್ಟವನ್ನು ಅನುಭವಿಸಬೇಕಾಯಿತು. ರೈತರು ಕಾರ್ಖಾನೆಗಳಿಗೆ ಸರಬರಾಜು ಮಾಡಿದ ಕಬ್ಬಿಗೆ ಕಾರ್ಖಾನೆಗಳ ಆಡಳಿತ ವರ್ಗ ಹಣ ಪಾವತಿಮಾಡಲಿಲ್ಲ. 1996-97 ರ ಅವಧಿಯಲ್ಲೂ ರೈತರಿಗೆ ಕಬ್ಬಿನ ಹಣ ಪಾವತಿಮಾಡದೆ ಬಾಕಿ ಉಳಿದಿದೆ. ಇದರಿಂದ ಕಬ್ಬಿನ ಬೆಳೆ ಕಡಿಮೆ ಆಗಿದೆ. ಕೃಷಿ ಕಾರ್ಮಿಕರಿಗೆ ಉದ್ಯೋಗ ಲಭ್ಯತೆ ಕಡಿಮೆ ಆಗಿದೆ. ದ್ವಿಮುಖ ಬೆಲೆ ನಿಗದಿ ಪಡಿಸಿದ್ದರಿಂದಲೂ ರೈತರ ಹಿತಕ್ಕೆ ಧಕ್ಕೆಯಾಗಿದೆ.

ರಾಜ್ಯದ 32 ಸಕ್ಕರೆ ಕಾರ್ಖಾನೆಗಳಲ್ಲಿ 50 ಸಾವಿರಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದಾರೆ. ಇದರಲ್ಲಿ ಸಹಕಾರಿ ವಲಯದ ಸಕ್ಕರೆ ಕಾರ್ಖಾನೆಗಳು ಅಧಿಕ ಸಂಖ್ಯೆಯಲ್ಲಿವೆ. ಸಹಕಾರಿ ಮತ್ತು ಸರ್ಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಆಡಳಿತ ಮಂಡಳಿ ಮತ್ತು ಅಧಿಕಾರಿಗಳ ತೀವ್ರ ಭ್ರಷ್ಟಾಚಾರ, ಅದಕ್ಷತೆಗಳಿಂದ ಅವು ನಷ್ಟಕ್ಕೆ ಒಳಗಾಗಿ ಖಾಸಗೀ ವ್ಯಕ್ತಿಗಳಿಗೆ ಮಾರಾಟ ಮಾಡುವ ಪ್ರಯತ್ನ ನಡೆಯುತ್ತಿದೆ. ಈಗಾಗಲೇ ಕಂಪ್ಲಿ ಸಕ್ಕರೆ ಕಾರ್ಖಾನೆ 4 ವರ್ಷಗಳಿಂದ ಸ್ಥಗಿತವಾಗಿತ್ತು. ಖಾಸಗೀಯವರಿಗೆ ಮಾರಾಟವಾಗಿದ್ದರೂ ಕಾರ್ಖಾನೆ ಪ್ರಾರಂಭವಾಗಿಲ್ಲ. ಕಾರ್ಮಿಕರಿಗೆ ಬರಬೇಕಾದ ಸಂಬಳ ಮತ್ತಿತರ ಹಣ ಪಾವತಿ ಆಗದೇ ಅವರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಹಾಗೇ ತುಂಗಭದ್ರ ಸಕ್ಕರೆ ಕಾರ್ಖಾನೆಯು ದೇನಿ ಸಕ್ಕರೆ ಕಾರ್ಖಾನೆ ಯಾಗಿ ಸ್ಥಗಿತವಾಗಿದೆ. ಗಂಗಾವತಿ ಸಕ್ಕರೆ ಕಾರ್ಖಾನೆಯುನ್ನು ಸಮಾಪನ ಗೊಳಿಸುವಂತೆ ಬಿಐಎಫ್ಆರ್ ಆದೇಶ ಮಾಡಿದೆ. ಖಾಸಗಿ ವಲಯದ ಸಕ್ಕರೆ ಕಾರ್ಖಾನೆಗಳಲ್ಲಿ ಅಲ್ಲಿನ ಮಾಲಿಕರು ತ್ರಿಪಕ್ಷೀಯ ವೇತನ ಶಿಫಾರಸ್ಸಾಗಲಿ, ಕಾರ್ಮಿಕ ವೇತನ ಕಾನೂನು ಜಾರಿ ತರದೆ ಅದರ ಪ್ರಯೋಜನಗಳನ್ನು ನೀಡಿಲ್ಲ. ಅವರನ್ನು ಅದರಲ್ಲೂ ದಿನಗೂಲಿ, ಹಂಗಾಮಿ ಸೀಸನಲ್ ಎಂಬ ಬಹುದೊಡ್ಡ ಸಂಖ್ಯೆಯ ಕಾರ್ಮಿಕ ಸಮೂಹವನ್ನು ಶೋಷಿಸಲಾಗುತ್ತಿದೆ. ಆದುದರಿಂದ ಕೋಲಾರದಲ್ಲಿ ನಡೆದ 16ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನವು ಸಕ್ಕರೆ ಉದ್ಯಮಕ್ಕೆ ಸಂಬಂಧಿಸಿದ ಸಮಗ್ರ ನೀತಿಯನ್ನು ವೈಜ್ಞಾನಿಕ ಆಧಾರದಲ್ಲಿ ಪುನರ್ ರೂಪಿಸಬೇಕು. ಕಬ್ಬು ಬೆಳೆದ ರೈತರ, ಸಕ್ಕರೆ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ತುರ್ತು ಕ್ರಮಗಳನ್ನು ರೈತ-ಕಾರ್ಮಿಕರ ಪ್ರತಿನಿಧಿಗಳೊಂದಿಗೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತದೆ.

ಮಂಡನೆ: ಪ್ರಸನ್ನಕುಮಾರ್

KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27